# ಯುಗರವಿ

- ವ್ರತಾನುಷ್ಠಾನ
- ವಾಗ್ದತ್ತ ಲೋಕೋದ್ಧಾರಕ
- ಇಸ್ಲಾಮ್ ಧರ್ಮದ ಅನುಷ್ಠಾನ ಕ್ರಮಗಳು
- ಏಸುವು ಕೊನೆಯ ದಿನಗಳನ್ನು ಭಾರತದಲ್ಲಿ ಕಳೆದನೇ?
- ರಷ್ಯಾದಲ್ಲಿ ಧಾರ್ಮಿಕ ಕಾರ್ಯಕರ್ತರ ಸಮ್ಮೇಳನ
- ಯೇಸುಕ್ರಿಸ್ತರು ಮೃತರಾದುದು ಎಲ್ಲಿ?


ತ್ರೈಮಾಸಿಕ

ಸಪ್ಟೆಂಬರ್ 1977

ತಬೂಕ್ 1356

ಬೆಲೆ: ರೂ. 1-00


ಯಥಾರ್ಥ ಸದ್ಧರ್ಮಿಗಳು ಪರಮಾತ್ಮನ ಪ್ರೀತಿಗಾಗಿ ತಮ್ಮ ಸಂಪತ್ತಿನಿಂದ ಸಂಬಂಧಿಕರಿಗೆ ಸಹಾಯ ಮಾಡುತ್ತಾರೆ; ಅನಾಥ ಮಕ್ಕಳನ್ನು ಸಂರಕ್ಷಿಸುತ್ತಾರೆ; ನಿರ್ಗತಿಕರ ಮತ್ತು ದರಿದ್ರರ ಹಸಿವೆಯನ್ನು ನೀಗಿಸುತ್ತಾರೆ; ಯಾತ್ರಿಕರಿಗೆ ನೆರವಾಗುತ್ತಾರೆ; ಸಾಲದಲ್ಲಿ ಮುಳುಗಿದವರನ್ನೂ ಗುಲಾಮರನ್ನೂ ವಿಮೋಚಿಸುತ್ತಾರೆ.

—ಪವಿತ್ರ ಖುರ್‌ಆನ್ (2:178)

# ಯುಗರಶ್ಮಿ

**ತ್ರೈಮಾಸಿಕ**

**ಸಂಪುಟ: 3 ಜುಲಾಯಿ-ಸಪ್ಟೆಂಬರ್ 1977 / ವಫಾ-ತಬೂಕ್ 1356 ಸಂಚಿಕೆ: 2**


## ವಿಷಯ ಸೂಚಿಕೆ:


* ರಮ್ಝಾನ್ ಮಾಸ.
* ಮುಹಮ್ಮದ್ ಪೈಗಂಬರ ನುಡಿಮುತ್ತುಗಳು.
* ಪವಿತ್ರ ಖುರ್‌ಆನಿನಲ್ಲಿ ಮತ ಸ್ವಾತಂತ್ರ್ಯ.
* ವ್ರತಾನುಷ್ಠಾನ–ಆತ್ಮೋನ್ನತಿಗೆ ಇಸ್ಲಾಂ ನಿರ್ದೇಶಿಸುವ ಮಾರ್ಗ.
* ವಾಗ್ದತ್ತ ಲೋಕೋದ್ಧಾರಕ.
* ಇಸ್ಲಾಮ್ ಧರ್ಮದ ಅನುಷ್ಠಾನ ಕ್ರಮಗಳು.
* ಏಸುವು ಕೊನೆಯ ದಿನಗಳನ್ನು ಭಾರತದಲ್ಲಿ ಕಳೆದನೇ ?
* ರಶ್ಯಾದಲ್ಲಿ ಧಾರ್ಮಿಕ ಕಾರ್ಯಕರ್ತರ ಸಮ್ಮೇಳನ.
* ಅಹ್ಮದಿಯಾ ವಾರ್ತೆಗಳು.
* ಪುಸ್ತಕ ವಿಭಾಗ-ಯೇಸುಕ್ರಿಸ್ತರು ಮೃತರಾದುದು ಎಲ್ಲಿ ?
* ಪಶ್ಚಿಮ ದಿಕ್ಕಿನಿಂದ ಸೂರ್ಯೋದಯ-2.


( ಹಿಂಬದಿ ಕವಚದ ಒಳಗಿನ ಪುಟದಿಂದ )

ಇಸ್ಲಾಂ ಧರ್ಮದ ಕುರಿತು ಭಾಷಣಗಳೂ ಸಂದರ್ಶನಗಳೂ ಏರ್ಪಡಿಸಲಾಗುತ್ತಿವೆ. ಈಗ ಇಂಗ್ಲೇಂಡಿನ ಚೀಫ್ ಅಹ್ಮದಿಯಾ ಮಿಶನರಿ ಹಾಗೂ ಲಂಡನ್ ಮಸೀದಿಯ ಇಮಾಂ ಆಗಿರುವ ಮೌಲಾನಾ ಬಶೀರ್ ಅಹ್ಮದ್ ರಫೀಕ್ ಸಾಹೇಬರ ನೇತೃತ್ವದಲ್ಲಿ ವಿಸ್ತೃತವಾದ ಪ್ರಚಾರ ಕಾರ್ಯಗಳು ನಡೆಯುತ್ತಲಿವೆ. ಬ್ರಿಟನಿನ ಅಹ್ಮದಿಯಾ ಸಂಘವು ಕಳೆದ 17 ವರ್ಷಗಳಿಂದಲೂ The Muslim Herald (ದಿ ಮುಸ್ಲಿಂ ಹೆರಾಲ್ಡ್) ಎಂಬ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಲಿದೆ. Ahmadiyya Bulletin (ಅಹ್ಮದಿಯಾ ಬುಲ್ಲೆಟಿನ್) ಕೂಡಾ ಇತ್ತೀಚೆಗೆ ಲಂಡನ್‌ನಿಂದ ಪ್ರಕಟಣೆ ಪ್ರಾರಂಭಿಸಿದೆ.

1967 ಜುಲೈ ತಿಂಗಳಲ್ಲಿ ಜಮಾಅತಿನ ಈಗಿನ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು ತನ್ನ ಪಶ್ಚಿಮ ಯುರೋಪು ಪರ್ಯಟನದ ವೇಳೆ ಲಂಡನ್ ಮಸೀದಿಗೆ ಭೇಟಿಯಿತ್ತರು. ಆಗ ಲಂಡನಿನ ವಾಂಡ್ಸ್‌ವರ್ತ್ ಟೌನ್‌ಹಾಲಿನಲ್ಲಿ ನಗರದ ಮೇಯರ್ ಅಧ್ಯಕ್ಷತೆ ವಹಿಸಿದ ಒಂದು ಬಹಿರಂಗ ಸಭೆಯಲ್ಲಿ ಖಲೀಫಾ ಅವರು ಮಾತನಾಡುತ್ತಾ, ಬರುವ 25 ವರ್ಷಗಳಲ್ಲಿ ಭೂಲೋಕದಲ್ಲಿ ಅತಿ ಮಹತ್ತಾದ ಮಾರ್ಪಾಟುಗಳನ್ನುಂಟುಮಾಡುವ ಒಂದು ಕ್ರಾಂತಿಯು ಉಂಟಾಗಲಿರುವುದೆಂದೂ ಆದರ ಫಲವಾಗಿ ಜನರು ಇಸ್ಲಾಮಿನ ಸತ್ಯತೆಯನ್ನು ಕಂಡುಕೊಂಡು ಹಝ್ರತ್ ಮುಹಮ್ಮದ್ ಪೈಗಂಬರರ ಸಂದೇಶದ ಮೂಲಕ ಮಾತ್ರವೇ ಮನುಷ್ಯ ಸಮುದಾಯದ ಮೋಕ್ಷವು ಸಾಧ್ಯವೆಂಬ ಸತ್ಯತೆಯನ್ನು ತಿಳಿದುಕೊಳ್ಳುವರೆಂದೂ ಘೋಷಿಸಿದ್ದಾರೆ.

1973ರಲ್ಲಿ ಹಝ್ರತ್ ಖಲೀಫಾರವರು ಘೋಷಿಸಿದ "ಅಹ್ಮದಿಯಾ ಶತಕ ಜುಬಿಲಿ ಯೋಜನೆ"ಗೆ ಇಂಗ್ಲೇಂಡಿನ ಅಹ್ಮದೀಯರು 10ಲಕ್ಷ ಪೌಂಡ್ ನೀಡುವುದಾಗಿ ಮೌಲಾನಾ ರಫೀಕ್ ಸಾಹೇಬರು ವಾಗ್ದಾನ ಮಾಡಿದ್ದಾರೆ. ಬ್ರಿಟನಿನ ಅಹ್ಮದೀಯರು ನೀಡುವ ಈ ಧನಸಹಾಯವು ಇನ್ನೂ ಹೆಚ್ಚಲಿರುವುದೆಂಬ ನಿರೀಕ್ಷೆ ಇದೆ! ಇಸ್ಲಾಮಿನ ಜಾಗತಿಕ ಅಭ್ಯುದಯಕ್ಕಾಗಿ ಆಂಗ್ಲೇಯ ಅಹ್ಮದಿಯಾ ಮುಸ್ಲಿಮರ ಮಹತ್ತಾದ ಕೊಡುಗೆ!

M. P. I.

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

| ಸಂಪುಟ: 3 | ಜುಲಾಯಿ – ಸಪ್ಟೆಂಬರ್ 1977 / ವಫಾ–ತಬೂಕ್ 1356 | ಸಂಚಿಕೆ: 2 |
| --- | --- | --- |

## ರಂಝಾನ್ ಮಾಸ



ಅಹ್ಮದಿಯಾ ಸಂಘಟನೆಯ ಸ್ಥಾಪಕ
**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

"ಪವಿತ್ರ ಖುರ್‌ಆನ್ ರಂಝಾನ್ ಮಾಸದಲ್ಲಿ ಅವತೀರ್ಣವಾಯಿತು" ಎಂಬ ಖುರ್‌ಆನ್ ವಚನ ಈ ತಿಂಗಳಿನ ಸಮುನ್ನತ ಸ್ಥಾನವನ್ನೂ ಪ್ರಾಧಾನ್ಯವನ್ನೂ ಸಾಕ್ಷೀಕರಿಸುತ್ತದೆ. ಆತ್ಮವನ್ನು ಚೈತನ್ಯಮಯವನ್ನಾಗಿ ಮಾಡಲು ಅತ್ಯುತ್ತಮವಾದ ಒಂದು ತಿಂಗಳೆಂದು ಸೂಫಿವರ್ಯರು ರಂಝಾನನ್ನು ವಿವರಿಸಿರುವರು. ಈ ತಿಂಗಳಿನಲ್ಲಿ ಅಧಿಕತರದ ಆತ್ಮದರ್ಶನಗಳಿಂದ ಮನುಷ್ಯನು ಅನುಗ್ರಹಿಸಲ್ಪಡುತ್ತಾನೆ.

ಪ್ರಾರ್ಥನೆ ಮನುಷ್ಯನ ಹೃದಯವನ್ನು ದೋಷಬಾಧೆಗಳಿಂದ ಶುದ್ಧೀಕರಿಸುವಾಗ ವ್ರತವು 'ಅವನ ಆತ್ಮವನ್ನು ಪ್ರಭಾಮಯವನ್ನಾಗಿ ಮಾಡುತ್ತದೆ. ಹೃದಯದ ಶುದ್ಧೀಕರಣವೆಂದರೆ ಅನಿಯಂತ್ರಿತವಾದ ಅಥವಾ ಪ್ರವಣತೆಗಳ ಬಂಧನಗಳಿಂದ ವಿಮುಕ್ತಿ. ಆತ್ಮವು ಪ್ರಕಾಶಿತಗೊಳ್ಳುವುದರಿಂದ ಓರ್ವ ಸತ್ಯ ವಿಶ್ವಾಸಿ ಆಧ್ಯಾತ್ಮಿಕ ದರ್ಶನಗಳಿಂದ ಅನುಗ್ರಹೀತನಾಗುತ್ತಾನೆ. ಅದರ ಮೂಲಕ ಅವನು ದೇವರನ್ನು ಪಡೆಯುತ್ತಾನೆ. "ಖುರ್‌ಆನ್ ಅವತರಿಸಿದ್ದು ಈ ಮಾಸದಲ್ಲಿ" ಎಂಬ ವಚನದಲ್ಲಿ ಈ ಬಗ್ಗೆ ಸೂಚನೆ ಇದೆ. ವ್ರತವನ್ನು ಅನುಷ್ಠಿಸಬೇಕೆಂಬ ಆಜ್ಞೆಯಲ್ಲಿ ಒಂದು ಮಹತ್ತಾದ ಅನುಗ್ರಹವು ನಿಶ್ಚಯವಾಗಿಯೂ ಅಡಕವಾಗಿದೆ. ಇದರ ಸಂಬಂಧಿಸಿ ಪರಮಾತ್ಮನು ಹೀಗೆ ಹೇಳುತ್ತಾನೆ: "ನೀವು ವ್ರತವನ್ನು ಅನುಷ್ಠಿಸುವಿರಾದರೆ ನಿಮಗೆ ಅದು ದೊಡ್ಡ ಅನುಗ್ರಹಗಳಿಗೆ ಮೂಲ ಕಾರಣವಾಗುವುದು" (ಫತಾವಾ ಅಹ್ಮದಿಯಾ).

— ಹಝ್ರತ್ ಅಹ್ಮದ್.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಸುಳ್ಳಾಡುವುದನ್ನೂ ಚಾಡಿ ಹೇಳುವುದನ್ನೂ ಉಪೇಕ್ಷಿಸದವನು ತಿನ್ನುವುದನ್ನೂ ಕುಡಿಯುವುದನ್ನೂ ಬಿಟ್ಟರೆ ದೇವರು ಅದನ್ನು ಲೆಕ್ಕಿಸಲಾರ. (ಅಂದರೆ, ದೇವರು ಅವನ ಉಪವಾಸವನ್ನು ಸ್ವೀಕರಿಸಲಾರ.)

2. ಅಮಿತವಾಗಿ ತಿಂದೂ ಕುಡಿದೂ ನಿಮ್ಮ ಹೃದಯವನ್ನು ಕೊಲ್ಲಬೇಡಿರಿ.

3. ಹಸಿವೆಯಿಂದ ಇದ್ದುಕೊಂಡು ನಿಮ್ಮ ಹೃದಯಗಳನ್ನು ಬೆಳಗಿಸಿರಿ. ಹಸಿವೆ ಮತ್ತು ಬಾಯಾರಿಕೆ ಮೂಲಕ ನಿಮ್ಮ ಮನಸ್ಸನ್ನು ಗೆಲ್ಲಿರಿ. ಹಸಿದುಕೊಂಡು ಸ್ವರ್ಗದ ಬಾಗಿಲನ್ನು ತಟ್ಟುತ್ತಾ ಇರಿ.

4. ಮನೋನಿಯಂತ್ರಣವನ್ನು ಪಾಲಿಸುವವನು, ಅವನು ಯಾರೇ ಆಗಲಿ, ಎಲ್ಲಿಯೇ ಇರಲಿ, ನನಗೆ ಅತ್ಯಂತ ಸಮೀಪದಲ್ಲಿರುವನು.

5. ಪ್ರಯಾಣದಲ್ಲಿರುವಾಗ ಉಪವಾಸ ಮಾಡುವುದು ಒಳ್ಳೆಯದಲ್ಲ.

6. ಹಲವು ಬಗೆಯ ದಾನ ಇದೆ; ಉಪವಾಸವು ಶರೀರಕ್ಕೆ ನೀಡುವ ದಾನವಾಗಿದೆ.

7. ಎಲ್ಲಾ ಸತ್ಕರ್ಮಗಳೂ ದಾನವಾಗಿದೆ.

8. ನೀವು ಸ್ವತಃ ತಿನ್ನಲು ತಯಾರಿಲ್ಲದ ತಿಂಡಿಗಳನ್ನು ಬಡವರಿಗೆ ದಾನಮಾಡಬೇಡಿರಿ.

9. ದಾನನೀಡುವುದು ನಿಮ್ಮ ಕರ್ತವ್ಯವಾಗಿದೆ. ದಾನವನ್ನು ಶ್ರೀಮಂತರಿಂದ ಪಡೆದು ಬಡವರಿಗೆ ಹಿಂತಿರುಗಿಸಬೇಕಾಗಿದೆ.

10. ಘಾಸಿಗೊಂಡವನನ್ನು, ಹೃದಯದಿಂದ ಉಕ್ಕಿಬರುವ ಸಾಂತ್ವನ ವಚನಗಳಿಂದ ಉಪಚರಿಸುವುದು ಉತ್ತಮ ದಾನವಾಗಿದೆ.

## ದಿವ್ಯ ಬಿಂದುಗಳು

# ಪವಿತ್ರ ಖುರ್‌ಆನಿನಲ್ಲಿ ಮತಸ್ವಾತಂತ್ರ್ಯ

1. ಘೋಷಿಸಿರಿ, ಇದು ನಿಮ್ಮ ರಕ್ಷಕನಾದ ಪರಮಾತ್ಮನಿಂದಿರುವ ಸತ್ಯ ಸಂದೇಶವಾಗಿದೆ; ಸ್ವೀಕರಿಸಲು ಇಷ್ಟವಿರುವವರು ವಿಶ್ವಾಸಹೊಂದಲಿ, ತಿರಸ್ಕರಿಸಬಯಸುವವರು ಅವಿಶ್ವಾಸಿಗಳಾಗಲಿ. (ಅಧ್ಯಾಯ 18: ವಚನ 30)

2. ಮತಕಾರ್ಯದಲ್ಲಿ ಬಲಾತ್ಕಾರವಿಲ್ಲ; ಸನ್ಮಾರ್ಗವು ದುರ್ಮಾರ್ಗದಿಂದ ಬೇರ್ಪಟ್ಟು ತಿಳಿಯುವಂತೆ ವ್ಯತ್ಯಸ್ತವಾಗಿದೆ. (2:257)

3. ನಿಜವಾಗಿಯೂ ಇದು (ಖುರ್‌ಆನ್) ಒಂದು ಉಪದೇಶ ಸಂಹಿತೆಯಾಗಿದೆ; ಇಷ್ಟವಿರುವವರು ತನ್ನ ದೇವರಲ್ಲಿಗಿರುವ ಮಾರ್ಗವಾಗಿ ಇದನ್ನು ಅವಲಂಬಿಸಿಕೊಳ್ಳಲಿ. (73:20)

4. ಹೇಳು-ನಾನು ನಿಷ್ಕಳಂಕ ಭಕ್ತಿಯಿಂದ ನನ್ನ ಅನುಸರಣೆಯನ್ನು ಅಲ್ಲಾಹುನಲ್ಲಿ ಅರ್ಪಿಸಿ ಅವನನ್ನು ಆರಾಧಿಸುವೆನು. ನಿಮಗೆ ಇಷ್ಟವೆಂದಾದರೆ ನೀವು ಅವನನ್ನು ಬಿಟ್ಟು ಬೇರೆಯವರನ್ನು ಆರಾಧಿಸಿಕೊಳ್ಳಬಹುದು. (39:15,16)

5. (ಹೇಳು)-ಖುರ್‌ಆನನ್ನು ಓದಿ ಕೇಳಿಸಲು ನಾನು ಆಜ್ಞಾಪಿಸಲ್ಪಟ್ಟಿರುವೆನು. ಯಾರೊಬ್ಬರು ಸನ್ಮಾರ್ಗದಲ್ಲಿ ಚಲಿಸುವರೋ ಅವರು ಸನ್ಮಾರ್ಗದಲ್ಲಿ ಚಲಿಸುವುದು ಅವರ ಸ್ವಂತ ಒಳಿತಿಗಾಗಿಯಷ್ಟೆ. ಸನ್ಮಾರ್ಗವಿಮುಖರಾಗಲು ಬಯಸುವಿರಾದರೆ ನಾನೊಬ್ಬ ಕೇವಲ ಉಪದೇಶಕನೆಂದು ತಿಳಿಯಿರಿ. (27:93)

6. ಹೇಳು-ಎಲೈ ಸತ್ಯವನ್ನು ನಿರಾಕರಿಸುವವರೇ, ನೀವು ಆರಾಧಿಸುವಂತೆ ನಾನು ಆರಾಧಿಸುವುದಿಲ್ಲ; ನಾನು ಆರಾಧಿಸುವಂತೆ ನೀವೂ ಆರಾಧಿಸುವುದಿಲ್ಲ; ನೀವು ಆರಾಧಿಸುವ ದೈವಗಳನ್ನು ನಾನು ಆರಾಧಿಸುವುದಿಲ್ಲ; ನಾನು ಆರಾಧಿಸುವವನನ್ನು ನೀವೂ ಆರಾಧಿಸುವುದಿಲ್ಲ. ನನಗೆ ನನ್ನ ಮತ; ನಿಮಗೆ ನಿಮ್ಮ ಮತ. (109:2–7)

7. ನಿನ್ನ ಒಡೆಯನು ಇಚ್ಛಿಸಿದ್ದರೆ ಭೂಮಿಯಲ್ಲಿರುವ ಎಲ್ಲರೂ ಒಟ್ಟಾಗಿ ವಿಶ್ವಾಸ ಹೊಂದುತ್ತಿದ್ದರು. ಹಾಗಿರುವಾಗ (ಪರಮಾತ್ಮನೇ ವಿಶ್ವಾಸಹೊಂದಲು ನಿರ್ಬಂಧ ಹೇರದಿರುವಾಗ) ಜನರನ್ನು ನಂಬುವಂತೆ ನಿರ್ಬಂಧಿಸಲು ನಿನಗೆ ಸಾಧ್ಯವೇ ? (10:100)

8. ನಿಶ್ಚಯವಾಗಿಯೂ ಮನುಷ್ಯವಂಶದ ಏಳಿಗೆಗಾಗಿ ನಾವು ಈ ಗ್ರಂಥವನ್ನು ನಿನಗೆ ಅವತೀರ್ಣಿಸಿರುವೆವು. ಯಾರು ಸನ್ಮಾರ್ಗದಲ್ಲಿ ನಡೆಯುವನೋ ಅದು ಅವನ ಸ್ವಂತ ಒಳಿತಿಗಾಗಿ; ಯಾರು ಸನ್ಮಾರ್ಗವಿಮುಖರಾಗುವರೋ ಅದರ ಕೆಡುಕು ಅವನಿಗೇ ಉಂಟಾಗುವುದು. (39:42)

ಸಂಗ್ರಹ ಮತ್ತು ಅನುವಾದ: M.P.I.

# ವ್ರತಾನುಷ್ಠಾನ - ಆತ್ಮೋನ್ನತಿಗೆ ಇಸ್ಲಾಂ ನಿರ್ದೇಶಿಸುವ ಮಾರ್ಗ

—ಎ. ಅಬ್ದುಲ್ ಹಕ್

ಮನುಷ್ಯನು ದೇವರೊಡನೆ ಸಂಪರ್ಕವನ್ನು ಉಂಟುಮಾಡಲಿಕ್ಕೂ ಅವನಿಗೆ ಆಧ್ಯಾತ್ಮಿಕಾಭಿವೃದ್ಧಿ ಸಿದ್ಧಿಸಲಿಕ್ಕೂ ದೈವಿಕ ಮತ ಮಾರ್ಗನಿರ್ದೇಶವನ್ನೀಯುತ್ತದೆ. ಹಾಗಿರುವ ಎಲ್ಲಾ ಮತಗಳು ಬೇರೆ ಬೇರೆ ರೀತಿಯಲ್ಲಿ ಮನುಷ್ಯನ ಆತ್ಮಸಂಸ್ಕರಣಕ್ಕಾಗಿ ವ್ರತಾನುಷ್ಠಾನವನ್ನು ಭಕ್ತಿ ಸೂಚಕವಾಗಿ ನಿರ್ದೇಶಿಸಿರುವುದಾಗಿ ಕಾಣಬಹುದು. ಈ ಆಚರಣೆಯು ಶರೀರಕ್ಕೆ ಪೀಡನೆಯನ್ನಲ್ಲದೆ ಬೇರೆ ಪ್ರಯೋಜನವನ್ನೇನೂ ಮಾಡುವುದಿಲ್ಲವೆಂದು ಭೌತಿಕವಾದಿಗಳು ಹೇಳುತ್ತಾರೆ. ಆದರೆ ಯಥಾರ್ಥದಲ್ಲಿ ಇಸ್ಲಾಂ ನಿರ್ದೇಶಿಸುವ ವ್ರತಾನುಷ್ಠಾನ ಮತ್ತು ಅದರ ವ್ಯವಸ್ಥೆಗಳು ಜನರಿಗೆ ಅವರ ಮನೋವಿಕಾರಗಳನ್ನು ನಿಯಂತ್ರಿಸಲಿಕ್ಕೂ ಇಚ್ಛೆಗಳನ್ನು ನಿರೋಧಿಸಲಿಕ್ಕೂ ತರಬೇತಿ ನೀಡುವ ರೀತಿಯಲ್ಲಿ ಪರ್ಯಾಪ್ತವಾಗಿವೆ. ಉಪವಾಸ ಸಮಯದಲ್ಲಿ ವ್ರತಾನುಷ್ಠಾನಿಗಳು ಆಧ್ಯಾತ್ಮಿಕ ವಿಷಯಗಳಲ್ಲಿ ಅಧಿಕ ಶ್ರದ್ಧೆಯನ್ನು ವಹಿಸಿ ಅಧಿಕವಾಗಿ ದೇವರನ್ನು ಸ್ಮರಿಸುತ್ತಾ ಇರುತ್ತಾರೆ. ಈ ನಿಷ್ಠೆ ವ್ರತಾನುಷ್ಠಾನದ ಜೀವವಾಗಿದೆ. ಈ ಚೈತನ್ಯವನ್ನು ಸ್ಥಿರವಾಗಿಡಲಿಕ್ಕೆ ವ್ರತಾನುಷ್ಠಾನಿ ಅನಗತ್ಯ ಕಾರ್ಯಗಳಿಂದಲೂ ಅಹಿತ ವರ್ತನೆಗಳಿಂದಲೂ ದೂರವಿದ್ದು, ಸತ್ಕರ್ಮಗಳನ್ನು ಮಾಡುತ್ತಾ ಉಪವಾಸದ ಪಾವಿತ್ರ್ಯವನ್ನು ಕಾಪಾಡುವುದು ಅವಶ್ಯ.

ವ್ರತದ ನಿಬಂಧನೆಗಳನ್ನೆಲ್ಲ ಅನುಷ್ಠಾನದಲ್ಲಿ ತರಲು ಪ್ರಯತ್ನಿಸುವವನು, ಒಂದು ತಿಂಗಳ ಕಾಲದ ಅಭ್ಯಾಸ ಫಲದಿಂದ ಮನೋವಿಕಾರಗಳನ್ನು ನಿಯಂತ್ರಿಸಲಿಕ್ಕೂ ಇಚ್ಛೆಗಳನ್ನು ನಿರೋಧಿಸಲಿಕ್ಕೂ ಸಮರ್ಥನಾಗುತ್ತಾನೆ. ಹೀಗೆ ಸ್ವೇಚ್ಛೆಗಳನ್ನು ಅಧೀನಪಡಿಸಿ ಕ್ರಮಬದ್ಧವಾಗಿ ನಿಯಂತ್ರಿಸಲು ಕಲಿತವನಿಗೆ ಸ್ವಂತ ಮನಶ್ಶಕ್ತಿಯನ್ನು ವಿಕಾಸಗೊಳಿಸಲಿಕ್ಕೂ ಪುಷ್ಟೀಕರಿಸಲಿಕ್ಕೂ ಸಾಧ್ಯವಾಗುತ್ತದೆ. ಹೀಗೆ ಆತ್ಮ ನಿಯಂತ್ರಣವನ್ನು ಪಡೆದವನಿಗೆ ಆತ್ಮೋನ್ನತಿಗೆ ಅರ್ಹತೆಯು ಪ್ರಾಪ್ತವಾಗುತ್ತದೆ. ಆತ್ಮೋನ್ನತಿ ಪಡೆದ ಸಿದ್ಧ ಪುರುಷರೂ ಪ್ರವಾದಿಗಳೂ ದೈವೋಪಲಬ್ಧಿಗೆ ಮೊದಲು ಒಂದು ಕ್ಲಿಪ್ತಕಾಲದವರೆಗೆ ವಿಶಿಷ್ಟ ರೀತಿಯಲ್ಲಿ ವ್ರತವನ್ನನುಷ್ಠಿಸುತ್ತಾ ದೈವೋಪಾಸನೆ ನಡೆಸಿದ್ದರೆಂದು ಅವರ ಚರಿತ್ರೆ ಹೇಳುತ್ತದೆ. ವ್ರತಾನುಷ್ಠಾನದ ಈ ಪ್ರಾಧಾನ್ಯ ನಿಮಿತ್ತ ಎಲ್ಲಾ ಮತಾಚಾರ್ಯರು ಈ ಆಚರಣೆಯನ್ನು ಅಂಗೀಕರಿಸಿ ಅನುಯಾಯಿಗಳಿಗೆ ಇದನ್ನು ಒಂದು ಧಾರ್ಮಿಕ ಕರ್ಮವೆಂದು ನಿರ್ದೇಶಿಸಿರುವರು. ಹಾಗೆ ಆತ್ಮಿಕ ಸಂರಕ್ಷಣೆಯನ್ನು ಪಡೆಯುವುದಕ್ಕಾಗಿ ಮುಸ್ಲಿಮರಿಗೂ ವ್ರತಾನುಷ್ಠಾನವು ನಿರ್ದೇಶಿಸಲ್ಪಟ್ಟಿದೆಯೆಂಬ ವಿಚಾರ ಪವಿತ್ರ ಖುರ್‌ಆನಿನಲ್ಲಿ (2:184) ಸ್ಪಷ್ಟಪಡಿಸಲಾಗಿದೆ.

ಪ್ರಸ್ತುತ ಖುರ್‌ಆನ್ ವಾಕ್ಯದಲ್ಲಿ ಉಪವಾಸ ಆಚರಣೆಯ ಒಂದು ಉದ್ದೇಶ "ಲಅಲ್ಲಕುಂ ತತ್ತಕೂನ್" ಎಂದು ಹೇಳಲಾಗಿದೆ. ಅಂದರೆ "ನೀವು (ಮುಸ್ಲಿಮರು) 'ತಕ್ವಾ' ಉಳ್ಳವರಾಗಿರಲಿಕ್ಕೆ'' ಎಂದು. 'ತಕ್ವಾ' ಎಂಬ ಅರಬಿ ಪದವು ದುಃಖವಿಮುಕ್ತಿ, ಪಾಪಪರಿಹಾರ, ಆತ್ಮೋನ್ನತಿ ಎಂಬೀ ಅರ್ಥಗಳಲ್ಲಿ ಖುರ್‌ಆನಿನಲ್ಲೇ ಪ್ರಯೋಗಿಸಲ್ಪಟ್ಟಿದೆ. ಅದರ ಪ್ರಕಾರ ಉಪವಾಸವು ಈ ಮೂರು ವಿಧ ಫಲಗಳನ್ನು ಜನರಲ್ಲಿ ಉಂಟುಮಾಡಲು ಪರ್ಯಾಪ್ತವೆಂದು ತಿಳಿಯಬೇಕಾಗಿದೆ.

ಉಪವಾಸವು ದುಃಖವಿಮುಕ್ತಿಗೆ ಕಾರಣೀಭೂತವಾಗುವುದೆಂದು ಹೇಳುವಾಗ ಪ್ರಥಮಶ್ರವಣದಲ್ಲಿ ವಿರೋಧಾಭಾಸವಾಗಿ ತೋರಬಹುದು. ಕೆಲವು ಗಂಟೆಗಳ ಕಾಲ ಹಸಿವೆ, ಬಾಯಾರಿಕೆಗಳನ್ನು ಸಹಿಸಬೇಕಾಗುವುದರಿಂದ ವ್ರತಾನುಷ್ಠಾನಿಗೆ ಸ್ವಲ್ಪ ಕ್ಲೇಶ ಉಂಟಾಗುತ್ತದೆಂಬುದು ಸರಿ. ಆದರೆ ತುಸು ಚಿಂತಿಸುವುದಾದರೆ, ವ್ರತದಿಂದ ಉಂಟಾಗುವ ಈ ಅನುಭವ ವ್ಯಕ್ತಿಗಳಿಗೆಂಬಂತೆಯೇ ಸಮುದಾಯದ ದುಃಖನಿವಾರಣೆಗೂ ಕ್ಷೇಮಕ್ಕೂ ಕಾರಣವಾಗುವುದೆಂದು ಮನವರಿಕೆಯಾಗಬಹುದು. ಸ್ವಂತ ಇಚ್ಛೆಯಿಂದ ಹಸಿವು, ಬಾಯಾರಿಕೆಯನ್ನು ಸಹಿಸುವ ವ್ರತಾನುಷ್ಠಾನಿಗೆ ದರಿದ್ರ ಸಹೋದರರ ಹಸಿವಿನ

ನೋವೂ ಕಷ್ಟವೂ ಚೆನ್ನಾಗಿ ತಿಳಿಯಲು ಸಾಧ್ಯವಾಗಿ, ಅವರೊಡನೆ ಅನುಕಂಪ ಉಂಟಾಗುವುದಲ್ಲವೇ. ಈ ಅನುಕಂಪವು ಅವರ ಸ್ಥಿತಿಯನ್ನು ಸುಧಾರಿಸಲು ತನ್ನಿಂದ ಕೈಲಾಗುವ ಸಹಾಯ – ಉಪಕಾರಗಳನ್ನು ಮಾಡಲು ಅವನನ್ನು ಪ್ರೇರೇಪಿಸುವುದು. ಇದರ ಫಲವಾಗಿ ಸಮುದಾಯದ ಕ್ಷೇಮವೂ ಭದ್ರತೆಯೂ ವರ್ಧಿಸುವುದು. ಸಮುದಾಯದ ಕ್ಷೇಮವೆಂದರೆ ವ್ಯಕ್ತಿಗಳ ಕ್ಷೇಮವೆಂಬುದು ವ್ಯಕ್ತವಲ್ಲವೇ.

ಉಪವಾಸ ಆಚರಣೆಯ ಮೂಲಕ ಓರ್ವನಿಗೆ ತನ್ನ ಮನೋವಿಕಾರಗಳನ್ನೂ ಇಚ್ಛೆಗಳನ್ನೂ ನಿಯಂತ್ರಿಸಲು ಸಾಧ್ಯವಾಗಿ, ತನ್ನ ಮನಶ್ಶಕ್ತಿಯನ್ನು ವಿಕಾಸಗೊಳಿಸಲು ಮತ್ತು ಕ್ರಮಬದ್ಧವಾಗಿಡಲು ಸಾಧ್ಯವಾಗುತ್ತದೆಂಬುದು ಅನುಭವಸಿದ್ಧ. ತನ್ಮೂಲಕ ಜೀವಮಾನದಲ್ಲಿ ತನಗೆ ಉಂಟಾಗುವ ವಿಷಮತೆಗಳನ್ನೂ ದುರಂತಗಳನ್ನು ಎದುರಿಸಲಿಕ್ಕೂ ವಿಜಯವನ್ನು ಗಳಿಸಲಿಕ್ಕೂ ಅವನು ಶಕ್ತನಾಗುತ್ತಾನೆ. ಕ್ಷಿಪ್ರ ಮನೋವಿಕಾರಗಳಿಗೆ ವಶನಾಗದಿರಲಿಕ್ಕೂ ಅವನು ಶಕ್ತನಾಗುತ್ತಾನೆ. **ಈ** ಆತ್ಮ ಸಂಸ್ಕರಣವು ವ್ರತಾನುಷ್ಠಾನಿಗೆ ಸ್ವಯಂ ಭೌತಿಕ ಹಾಗೂ ಆಧ್ಯಾತ್ಮಿಕ ಉನ್ನತಿಯನ್ನು ಪಡೆಯ ಲೋಸುಗ ಹೆಚ್ಚಾಗಿ ಪರಿಶ್ರಮಪಡಲು ಸಹಾಯಕವಾಗಿದೆ.

ಇಸ್ಲಾಂ ಅದರ ಅನುಯಾಯಿಗಳನ್ನು ಮೈಗಳ್ಳರೂ ಆಲಸಿಗರೂ ಆಗಿರಲಿಕ್ಕೆ ಬಿಡುವುದಿಲ್ಲ. ತದ್ವಿರುದ್ಧವಾಗಿ ಜೀವನವೆಂಬ ಯುದ್ಧದಲ್ಲಿ ತಲೆಯೆತ್ತುವ ಕಷ್ಟಾರಿಷ್ಟಗಳನ್ನು ಧೈರ್ಯದಿಂದ ಎದುರಿಸಲಿಕ್ಕೂ ಪ್ರತಿಬಂಧಗಳನ್ನು ನೀಗಿಸಿ ಮುಂದಕ್ಕೆ ಗಮಿಸಲಿಕ್ಕೂ ಬೋಧಿಸುತ್ತದೆ. ಇದಕ್ಕೆ ಬೇಕಾದ ಆತ್ಮನಿಯಂತ್ರಣ ತರಬೇತಿಯನ್ನು ಒಂದು ತಿಂಗಳ ಕಾಲದ ವ್ರತಾನುಷ್ಠಾನ ಮೂಲಕ ಇಸ್ಲಾಂ ನಿರ್ದೇಶಿಸಿದೆ. ಈ ನಿರ್ದೇಶವನ್ನು ಅನುಸರಿಸಿ ತರಬೇತಿ ಹೊಂದಿದವರು ಸುಖಲೋಲುಪರಾಗಿ ಆಲಸ್ಯ ಮನೋಭಾವವನ್ನು ಹೊಂದಲಾರರು. ಆದ್ದರಿಂದ ಅವರಿಗೆ ಜೀವನದಲ್ಲಿ ಎದುರಾಗುವ ದುಃಖದುರಂತಗಳನ್ನೂ ಕಷ್ಟಕ್ಲೇಶಗಳನ್ನೂ ಸಹಿಸಲು ಸಾಧ್ಯವಾಗುತ್ತದೆ.

ವ್ರತಾನುಷ್ಠಾನದ ಮತ್ತೊಂದು ಪ್ರಯೋಜನ ಅದು ಪಾಪವಿಮುಕ್ತಿಗೆ ಸಹಾಯಕವಾಗುತ್ತದೆಂಬುದು. ಸುಖಲೋಲುಪತೆಯಿಂದಲೂ ಭೋಗಾಸಕ್ತಿಯಿಂದಲೂ ಪಾಪಪ್ರೇರಣೆ ಉಂಟಾಗುತ್ತದೆ. ಅಂತಹ ಇಚ್ಛೆಗಳನ್ನೂ ಆಕಾಂಕ್ಷೆಗಳನ್ನೂ ದೇವರ ಪ್ರೀತಿಯನ್ನು ಪಡೆಯುವುದಕ್ಕಾಗಿ ಉಪವಾಸ ಮಾಡುವವನು ವರ್ಜಿಸುತ್ತಾನೆ. ತನಗೆ ಬೇರೆ ಸಂದರ್ಭಗಳಲ್ಲಿ ಅನುಭೋಗಿಸಲು ಅನುಮತಿಸ್ವಲ್ಪಟ್ಟ ಲೌಕಿಕ ಸುಖಗಳನ್ನು ಸಹ ಹೀಗೆ ತ್ಯಜಿಸಲು ಅಭ್ಯಾಸ ಮಾಡಿದವನಿಗೆ ತನ್ನ ಆತ್ಮಕ್ಕೂ ದೇಹಕ್ಕೂ ಹಾನಿಕರವಾದ ಪಾಪಕೃತ್ಯಗಳೆಡೆಗಿರುವ ಪ್ರೇರಣೆಗಳನ್ನು ಅದುಮಿಡಲು ಪ್ರಯಾಸವಾಗಲಾರದೆಂದು ಹೇಳಬಹುದು.

ವ್ರತಾನುಷ್ಠಾನದ ಮತ್ತೊಂದು ಸಿದ್ಧಿ ಆತ್ಮೋನ್ನತಿಯಾಗಿದೆ. ಉಪವಾಸ ಮಾಡುವವನು ರಾತ್ರಿಯ ಕೊನೆಯ ಜಾವದಲ್ಲಿ ಎದ್ದೇಳುವುದರಿಂದ ಆ ಸಮಯದಲ್ಲಿ ವಿಶಿಷ್ಟ ಪ್ರಾರ್ಥನೆ ಮತ್ತು ದೈವಸ್ಮರಣೆ ಮಾಡುವರೆ ಅವನಿಗೆ ಸಾಧ್ಯವಾಗುತ್ತದೆ. ಇದು ಅವನ ಆತ್ಮೋತ್ಕರ್ಷಕ್ಕೆ ಸಹಾಯವಾಗುತ್ತದೆ. ಈ ಧರ್ಮಾನುಷ್ಠಾನವನ್ನು ನಿರ್ವಹಿಸಲಿಕ್ಕಾಗಿ ಅವನು ತನ್ನ ಸುಖಸೌಕರ್ಯಗಳನ್ನೆಲ್ಲಾ ಬಲಿಯರ್ಪಿಸುವುದರಿಂದ ದೇವರು ಅವನಿಗೆ ಆಧ್ಯಾತ್ಮಿಕ ಅನುಗ್ರಹಗಳನ್ನು ನೀಡುತ್ತಾನೆ.



# ★ *ವಾಗ್ದತ್ತ ಲೋಕೋದ್ಧಾರಕ ★

—ಮುಹಮ್ಮದ್ ಯೂಸುಫ್.

ಲೋಕದಲ್ಲಿ ಅಜ್ಞಾನಾಂಧಕಾರವೂ ಅಂಧವಿಶ್ವಾಸವೂ ಪ್ರಬಲಗೊಂಡು ಅಧರ್ಮವೂ ಅನ್ಯಾಯವೂ ವರ್ಧಿಸಿ ಮನುಷ್ಯರು ಸೃಷ್ಟಿಕರ್ತನಿಂದ ವಿಮುಖರಾಗಿ ಲೌಕಿಕ ಕಾರ್ಯಗಳಲ್ಲೇ ಮಗ್ನರಾಗಿ ಪರಮಾತ್ಮನೊಡನಿರುವ ಭಕ್ತ್ಯಾದರಭಾವಗಳು ನಾಮಾವಶೇಷಗೊಳ್ಳುವಾಗ ಪರಮ ಕಾರುಣಿಕನಾದ ಪರಮಾತ್ಮನು ಮನುಷ್ಯರೊಡನೆ ದಯೆದೋರಿ ಅವರಿಗಾಗಿ ಓರ್ವ ಮಹಾ ಪುರುಷನನ್ನು ದಿವ್ಯಜ್ಞಾನ ನೀಡಿ ನಿಯೋಗಿಸುತ್ತಾನೆ ಎಂಬುದು ಒಂದು ದೈವ ನಿಯಮವಾಗಿದೆ. ಹಾಗೆ ದೈವನಿಯುಕ್ತನಾದ ಮಹಾತ್ಮನು ಬಂದು ಆಧ್ಯಾತ್ಮಿಕ ರೋಗಗಳನ್ನು ಸುಖಪಡಿಸಿ ಅವರಿಗೆ ಪರಮಾತ್ಮನ ಪಾವನವಾದ ಸ್ಥಾನದೆಡೆಗೆ ಹೋಗುವ ಸನ್ಮಾರ್ಗವನ್ನು ತೋರಿಸಿ ಕೊಡುತ್ತಾನೆ. ಇದು ಪ್ರಪಂಚದ ಯಾವುದೇ ಆಸ್ತಿಕ ಧರ್ಮಿಗೂ ನಿಷೇಧಿಸಲು ಸಾಧ್ಯವಿಲ್ಲದ ಪರಮಾತ್ಮನ ಒಂದು ನಿಯಮವಾಗಿದೆ.

ಪರಮಾತ್ಮನು ತನ್ನ ಆ ನಿಯಮವನ್ನು ಈಗಲೂ ಪಾಲಿಸುತ್ತಿರುವನೇ ? ಏಕಿಲ್ಲ ? ನಮ್ಮ ಈ ಕಾಲವು ದುಷ್ಕೃತ್ಯಗಳಿಂದಲೂ ದುರಾಚಾರಗಳಿಂದಲೂ ಕೂಡಿದೆ. ನಾಸ್ತಿಕತೆಯು ಮನುಷ್ಯರ ನಂಬಿಕೆಗಳನ್ನು ಅಡಿತಪ್ಪಿಸುತ್ತಿದೆ. ಹಿಂದಿನ ಕಾಲಗಳಲ್ಲಿ ಪರಮಾತ್ಮನ ಸಂದೇಶವಾಹಕರ ಅವಶ್ಯವಿದ್ದಿದ್ದರೆ, ಈಗ ಒಬ್ಬ ಮತ ಸುಧಾರಕನ ಆಗಮನವು ಅತ್ಯಗತ್ಯವಿದೆ. ಧಾರ್ಮಿಕ ಅಧಃಪತನದ ಈ ಕಾಲದಲ್ಲಿ ಒಬ್ಬ ಮಹಾ ಸುಧಾರಕನು ಅವತರಿಸುವನೆಂಬ ಬಗ್ಗೆ ಪ್ರಪಂಚದ ಎಲ್ಲಾ ಮತಗಳು ಒಮ್ಮತಾಭಿಪ್ರಾಯವನ್ನು ಹೊಂದಿವೆ. ವಿವಿಧ ಮತ ಗ್ರಂಥಗಳನ್ನು ಅಧ್ಯಯನ ಮಾಡಿದರೆ ಅಂತಹ ಒಬ್ಬ ಸಾರ್ವಲೌಕಿಕ ಉಪದೇಶಕನ ಆಗಮನದ ಕುರಿತು ಭವಿಷ್ಯೋಕ್ತಿಗಳನ್ನು ಕಾಣಬಹುದು.

* ಬಸವಾಪಟ್ಟಣದಲ್ಲಿ ಜರಗಿದ ಭಾರತೀಯ ಧರ್ಮ ಸಮ್ಮೇಳನದಲ್ಲಿ 26-1-1977ರಂದು ಮಾಡಿದ ಭಾಷಣ.

ಆ ಮಹಾ ಆಧ್ಯಾತ್ಮಿಕ ಸುಧಾರಕನ ಕುರಿತು ಹಿಂದೂ ಮತಗ್ರಂಥವಾದ ಶ್ರೀಮದ್ ಭಗವದ್ಗೀತೆಯಲ್ಲಿ ಮಹಾತ್ಮ ಶ್ರೀ ಕೃಷ್ಣ ಹೀಗೆಂದಿರುವರೆಂದು ಬರೆಯಲಾಗಿದೆ:

ಯದಾ ಯದಾಹಿ ಧರ್ಮಸ್ಯ
ಗ್ಲಾನಿರ್ಭವತಿ ಭಾರತ।
ಅಭ್ಯುತ್ಥಾನಮಧರ್ಮಸ್ಯ
ತದಾತ್ಮಾನಂ ಸೃಜಾಮ್ಯಹಂ।
ಪರಿತ್ರಾಣಾಯ ಸಾಧೂನಾಂ
ವಿನಾಶಾಯ ಚ ದುಷ್ಕೃತಾಮ್।
ಧರ್ಮ ಸಂಸ್ಥಾಪನಾರ್ಥಾಯ
ಸಂಭವಾಮಿ ಯುಗೇ ಯುಗೇ।

ಅರ್ಥ: "ಯಾವ ಯಾವ ಕಾಲದಲ್ಲಿ ಧರ್ಮದ ಇಳುಗಡೆಯೂ ಅಧರ್ಮದ ಏರಿಕೆಯೂ ಆಗುತ್ತದೋ ಆಗ ನಾನು ಒಳ್ಳೆಯವರನ್ನು ಕಾಪಾಡುವುದಕ್ಕೂ ಕೆಟ್ಟವರನ್ನು ಹಾಳು ಮಾಡುವುದಕ್ಕೂ ಧರ್ಮವನ್ನು ನೆಲೆಗೊಳಿಸುವುದಕ್ಕೂ ಪ್ರತಿ ಯುಗದಲ್ಲಿಯೂ ಹುಟ್ಟುತ್ತೇನೆ." (ಅಧ್ಯಾಯ: 4, ಶ್ಲೋಕ: 7, 8)

ಬೌದ್ಧಮತ ಗ್ರಂಥವಾದ Seven Baskets ನಲ್ಲಿ ಮಹಾತ್ಮ ಬುದ್ಧ ಹೀಗೆಂದಿರುವರೆಂದು ಉಲ್ಲೇಖಿಸಲಾಗಿದೆ:

"ಪ್ರತಿಯೊಬ್ಬ ಬುದ್ಧನ ಮರಣದ ನಂತರ ಅವನ ಮತವು ಒಂದು ಕಾಲದ ವರೆಗೆ ಶೋಭಿಸುವುದು; ನಂತರ ಅಳಿಯುವುದು; ನಂತರ ಸಂಪೂರ್ಣವಾಗಿ ಮರೆತು ಹೋಗುವುದು—ಮತ್ತೊಬ್ಬ ಬುದ್ಧನು ಬಂದು ಕಳೆದು ಹೋದ ಧರ್ಮದ ಸತ್ಯತೆಯನ್ನು ಪ್ರಬೋಧಿಸುವ ತನಕ."

ಭೂಲೋಕದಲ್ಲಿ ಅಧರ್ಮವೂ ಅನ್ಯಾಯವೂ ವರ್ಧಿಸಿ, ದೈವ ವಿಶ್ವಾಸವೂ ಧಾರ್ಮಿಕ ಪ್ರಜ್ಞೆಯೂ ಕ್ಷಯಿಸಿ, ಇಸ್ಲಾಮಿನ ನಾಮವೂ ಖುರ್‌ಆನಿನ ಲಿಪಿಯೂ ಮಾತ್ರ ಬಾಕಿಯಾಗಿ, ಮಸೀದಿಗಳು ಭಕ್ತಿಶೂನ್ಯವಾಗಿ,

ಆಲಿಮರು (ಮುಸ್ಲಿಂ ಮತಪಂಡಿತರು) ಆಕಾಶದ ಕೆಳಗೆ ಬಹಳ ನಿಕೃಷ್ಟರಾಗಿ ರೂಪಗೊಳ್ಳುವ ಒಂದು ಕಾಲವು ಬರುವುದೆಂದೂ, ಆ ಕಾಲದಲ್ಲಿ ಇಸ್ಲಾಮನ್ನು ಸಂರಕ್ಷಿಸಲಿಕ್ಕೂ ಸನ್ಮಾರ್ಗವನ್ನು ತೋರಿಸಲಿಕ್ಕೂ ಲೋಕ ಗುರುವಾಗಿ ಮಹ್‌ದೀಮಸೀಹ್ (ಮತ ಸುಧಾರಕ) ಆವಿರ್ಭವಿಸುವರೆಂದೂ ಮುಹಮ್ಮದ್ ಪೈಗಂಬರರು ಭವಿಷ್ಯ ನುಡಿದಿರುವರೆಂದು ಇಸ್ಲಾಂ ಮತಗ್ರಂಥಗಳಲ್ಲಿ ಕಾಣಬಹುದು.

ಹಾಗೆಯೇ ಬೈಬಲಿನಲ್ಲಿ ಯೇಸುಕ್ರಿಸ್ತರ ಪುನರಾಗಮನ ಕುರಿತೂ, ಝರತುಷ್ಟ ಮತಗ್ರಂಥದಲ್ಲಿ ಮತ್ತು ಸಿಖ್ಖ ಮತಗ್ರಂಥದಲ್ಲಿ ಓರ್ವ ಮಹಾ ಗುರುವಿನ ಆವಿರ್ಭಾವದ ಕುರಿತೂ ಉಲ್ಲೇಖನವಿವೆ.

ಮನುಷ್ಯರನ್ನು ಅಧರ್ಮ ಅಂಧಕಾರದಿಂದ ರಕ್ಷಿಸಲು, ಅವರಿಗೆ ಪ್ರಕಾಶವನ್ನು ತೋರಿಸುವ ರೀತಿಯಲ್ಲಿ ಆ ಮಹಾ ಲೋಕೋದ್ಧಾರಕನು ಆವಿರ್ಭವಿಸುವ ಕಾಲದ ಲಕ್ಷಣಗಳನ್ನು ಮತಗ್ರಂಥಗಳು ಸೂಚಿಸಿ ಆ ಲಕ್ಷಣಗಳು ಗೋಚರವಾಗುವಾಗ ಆ ಮಹಾ ಪುರುಷನ ಅವತಾರವಾಗುವುದೆಂದು ತಿಳಿದಿರಬೇಕೆಂದು ಎಚ್ಚರಿಸಿವೆ.

ಹಿಂದೂ ಧರ್ಮಗ್ರಂಥವಾದ ಮಹಾಭಾರತದಲ್ಲಿ ಈ ರೀತಿ ವಿವರಣೆ ಇದೆ:

"ಕಲಿಯುಗದ ಅಂತ್ಯಭಾಗದಲ್ಲಿ ಜನರು ಅನೃತ ಭಾಷಿಗಳಾಗುತ್ತಾರೆ. ಬ್ರಾಹ್ಮಣರು ಯಜ್ಞಯಾಗಾದಿಗಳನ್ನು ಮಾಡುವುದಿಲ್ಲ. ವೇದಾಧ್ಯಯನಾಧ್ಯಾಪನಾದಿಗಳನ್ನೂ ಮಾಡುವುದಿಲ್ಲ. ಅಭಕ್ಷ್ಯಭಕ್ಷ್ಯಗಳನ್ನೂ ತಿನ್ನುತ್ತಾರೆ. ಅಪೇಯುವಾದುದನ್ನು ಪಾನಮಾಡುತ್ತಾರೆ. ಕ್ಷತ್ರಿಯ-ವೈಶ್ಯರೂ ಸಹ ತಮ್ಮ ತಮ್ಮ ವರ್ಣಾಶ್ರಮಧರ್ಮಗಳಿಗೆ ವಿರೋಧವಾದ ಕಾರ್ಯಗಳನ್ನೇ ಮಾಡುತ್ತಾರೆ. ಆ ಕಾಲದಲ್ಲಿ ಮಾನವರು ಅಲ್ಪಾಯುಷರಾಗಿಯೂ, ಅಲ್ಪಬಲರಾಗಿಯೂ, ಅಲ್ಪವೀರ್ಯರಾಗಿಯೂ, ಪರಾಕ್ರಮರಹಿತರಾಗಿಯೂ, ಸತ್ಯರಹಿತರಾಗಿಯೂ, ಕಿಂಚಿನ್ಮಾತ್ರ ಸತ್ಯಾಭಾಷಿಗಳಾಗಿಯೂ, (ಆಕಸ್ಮಿಕವಾಗಿ ನಿಜ ಹೇಳುವವರಾಗಿಯೂ) ಇರುತ್ತಾರೆ. ರುಚಿಕರವಾದ ಹಾಲು, ಹಣ್ಣು ಮುಂತಾದ ಆಹಾರಗಳು ಆ ಸಮಯದಲ್ಲಿ ಅಷ್ಟು ರುಚಿಕರಗಳಾಗಿರುವುದಿಲ್ಲ. ವಿಟಪುರುಷರಿಂದಲೂ ವೇಶ್ಯಾಸ್ತ್ರೀಯರಿಂದಲೂ ಚತುಷ್ಪಥಗಳು (ನಾಲ್ಕು ರಸ್ತೆಗಳು ಕೂಡುವ ಸ್ಥಳ) ತುಂಬಿ ಹೋಗುತ್ತವೆ. ಕೈಹಿಡಿದ ಗಂಡನನ್ನು ದ್ವೇಷಿಸುತ್ತಾ ಸ್ತ್ರೀಸ್ವಭಾವವಾದ ಲಜ್ಜೆಯನ್ನೂ ಸಹ ಬಿಟ್ಟು ತಿರುಗಾಡುವ ಸ್ತ್ರೀಯರಿರುತ್ತಾರೆ. ಹಸುಗಳೂ ಸಹ ಆ ಕಾಲದಲ್ಲಿ ಹೆಚ್ಚು ಹಾಲು ಕೊಡುವುದಿಲ್ಲ. ಮರಗಳಲ್ಲಿ ಪುಷ್ಪ-ಫಲಗಳು ವರ್ಷ ವರ್ಷಕ್ಕೂ ಕಡಿಮೆಯಾಗುತ್ತಾ ಹೋಗುತ್ತವೆ. ಸರ್ಕಾರದವರು ವಿಧಿಸುವ ತೆರಲಸಾಧ್ಯವಾದ ತೆರಿಗೆಗಳಿಂದ ಭೀತರಾದ ಗೃಹಸ್ಥರು ತೆರಿಗೆಗಳನ್ನು ತಪ್ಪಿಸಿಕೊಳ್ಳಲು ಕಳ್ಳಲೆಕ್ಕಗಳನ್ನಿಟ್ಟು ಸರ್ಕಾರಕ್ಕೆ ಮೋಸಮಾಡುತ್ತಾರೆ. ಕೆಲವರು ಋಷಿಗಳ ವೇಷವನ್ನು ಧರಿಸಿದವರಾಗಿ, ಸದಾಚಾರರಹಿತರಾಗಿ ನೀಳವಾದ ಗಡ್ಡವನ್ನೂ ತಲೆಗೂದಲನ್ನೂ ನಖಗಳನ್ನೂ ಬೆಳಸಿಕೊಳ್ಳುತ್ತಾರೆ. ಕಾಲಕಾಲಕ್ಕೆ ಮಳೆಗರೆಯುವುದಿಲ್ಲ. ವ್ಯಾಪಾರಿಗಳು ತೂಕದಲ್ಲಿಯೂ ಅಳತೆಯಲ್ಲಿಯೂ ಗ್ರಾಹಕರಿಗೆ ಮೋಸ ಮಾಡುತ್ತಾರೆ. ಧರ್ಮಮಾರ್ಗದಲ್ಲಿ ಹೋಗಲು ಯತ್ನಿಸುವವರಿಗೆ ಏಳಿಗೆಯೇ ಇರುವುದಿಲ್ಲ. ಮೋಸಗಾರರಾದ ಪಾಪಕರ್ಮಿಗಳು ಅಭಿವೃದ್ಧಿ ಹೊಂದುತ್ತಾರೆ. ನಗರಗಳ ಉದ್ಯಾನವನಗಳಲ್ಲಿ ಬಹಿರಂಗವಾಗಿಯೇ ನಾನಾ ವಿಧವಾದ ಅಧರ್ಮಯುಕ್ತವಾದ ಉಪಾಯಗಳಿಂದ ಕಾಮುಕ–ಕಾಮಿನಿಯರು ಸೇರಿ ಕಾಮಾಚಾರಗಳಲ್ಲಿ ಆಸಕ್ತರಾಗುತ್ತಾರೆ. ಸ್ತ್ರೀಯರಿಗೆ ಒಳ್ಳೆಯ ಶೀಲವಾಗಲೀ, ಸುಸ್ವಭಾವವಾಗಲೀ ಇರುವುದಿಲ್ಲ. ಸ್ತ್ರೀಯೋಗ್ಯವಾದ ಲಜ್ಜೆಯನ್ನೂ ಸಂಪೂರ್ಣವಾಗಿ ತ್ಯಾಗಮಾಡುತ್ತಾರೆ. ತಮ್ಮ ಪತಿಗಳನ್ನು ವಂಚಿಸಿ ದುಶ್ಶೀಲಯರಾದ ಅವರು ತಮ್ಮ ಭೃತ್ಯರೊಡನೆ ಕಾಮೇಚ್ಛೆ ಪೂರೈಸಿಕೊಳ್ಳುತ್ತಾರೆ." (ಮಹಾಭಾರತ: ವನಪರ್ವ, 188ನೇ ಅಧ್ಯಾಯ)

"ಕಲಿಯುಗದ ಅಂತ್ಯದಲ್ಲಿ ಪಂಡಿತರೆಂದು ಪರಿಗಣಿತರಾದವರೂ ಸಹ ಸತ್ಯವನ್ನು ಮರೆಮಾಚುತ್ತಾರೆ. ಅಲ್ಪವಿದ್ಯೆಯಿಂದಲೇ ಮಹಾಗರ್ವಿಗಳಾಗುತ್ತಾರೆ. ಜಪಾನುಷ್ಠಾನವಾಗಲೀ, ದೈವಭಕ್ತಿಯಾಗಲೀ ಮನುಷ್ಯರಲ್ಲಿರುವುದಿಲ್ಲ. ಆಗಿನ ಕಾಲದಲ್ಲಿ ತಂದೆಯು ಮಗನನ್ನೂ ಮಗನು ತಂದೆಯನ್ನೂ ಕೊಲ್ಲುವ ಪ್ರಸಂಗಗಳು ಅನೇಕವಾಗಿರುತ್ತವೆ. ಆಗಿನ ಕಾಲದ ರಾಜರಿಗೆ ಪ್ರಜೆಗಳನ್ನು ಪರಿಪಾಲನೆ ಮಾಡುವ ಸಾಮರ್ಥ್ಯವಿರುವುದಿಲ್ಲ. ಪ್ರಜೆಗಳನ್ನು ನಾನಾರೀತಿಯಲ್ಲಿ ಶಿಕ್ಷಿಸುವುದರಲ್ಲಿ ಮಾತ್ರವೇ ಅವರು ನಿರತರಾಗಿರುತ್ತಾರೆ. ಪ್ರೌಢೆಯರಾದ ಸ್ತ್ರೀಯರು ತಮಗೆ ಬೇಕಾದ ಪುರುಷನನ್ನು ಜಾತಿ-ಕುಲ-

ಮತಾಚಾರಗಳ ವಿವೇಚನೆಯಿಲ್ಲದೇ ಆರಿಸಿಕೊಳ್ಳುತ್ತಾರೆ. ಉಡುಗೆ, ತೊಡಿಗೆ, ಆಹಾರ, ವ್ಯವಹಾರ, ಆಟ, ಪಾಟ ಎಲ್ಲದರಲ್ಲಿಯೂ ಸಹ ಜನರು ಮ್ಲೇಚ್ಛರನ್ನು ಅನುಕರಣಮಾಡುತ್ತಿರುತ್ತಾರೆ. ಜನರು ಮನುಷ್ಯರ ಮೂಳೆಗಳನ್ನೂ ಗೋರಿಗಳನ್ನೂ ಸಮಾಧಿಗಳನ್ನೂ ಅಸ್ಥಿಯಿಂದ ಕೂಡಿರುವ ಗೋಡೆಗಳನ್ನೂ ಶ್ರದ್ಧೆಯಿಂದ ಪೂಜಿಸಲು ಮೊದಲು ಮಾಡುತ್ತಾರೆ. ವಿದ್ಯಾರ್ಥಿಗಳು ಉಪಾಧ್ಯಾಯರ ಉಪದೇಶಗಳನ್ನು ಅಲ್ಲಗಳೆಯುತ್ತಾರೆ. ವಿದ್ಯಾರ್ಥಿಗಳು ಉಪಾಧ್ಯಾಯರನ್ನು ಥಳಿಸುವರು. ಕೈಹಿಡಿದ ಪತಿಯ ಮಾತನ್ನೂ ಸಹ ಆಗಿನ ಕಾಲದ ಸ್ತ್ರೀಯರು ಕೇಳುವುದಿಲ್ಲ. ಸ್ತ್ರೀಯರು ಅನೇಕ ಸಮಯಗಳಲ್ಲಿ ತಮ್ಮ ಗಂಡಂದಿರನ್ನೂ ಮತ್ತು ಮಕ್ಕಳನ್ನೂ ಸಹ ಕೊಲೆ ಮಾಡುತ್ತಾರೆ.'' (ಮಹಾಭಾರತ:ವನ ಪರ್ವ, ಅಧ್ಯಾಯ 190)

ಕ್ರೈಸ್ತ ಧರ್ಮ ಗ್ರಂಥವಾದ ಬೈಬಲ್‌ನಲ್ಲಿ ನಾವು ಹೀಗೆ ಓದುತ್ತೇವೆ:

"ಆದರೆ ಕಡೇ ದಿವಸಗಳಲ್ಲಿ ಕಠಿಣ ಕಾಲಗಳು ಬರುವವೆಂಬುದನ್ನು ತಿಳಿದುಕೋ. ಮನುಷ್ಯರು ಸ್ವಾರ್ಥ ಚಿಂತಕರೂ ಹಣದಾಸೆಯುಳ್ಳವರೂ ಬಡಾಯಿ ಕೊಚ್ಚುವವರೂ ಅಹಂಕಾರಿಗಳೂ ದೂಷಕರೂ ತಂದೆ ತಾಯಿಗಳಿಗೆ ಅವಿಧೇಯರೂ ಉಪಕಾರ ನೆನಸದವರೂ ದೇವಭಯವಿಲ್ಲದವರೂ ಮಮತೆಯಿಲ್ಲದವರೂ ಸಮಾಧಾನವಾಗದವರೂ ಚಾಡಿ ಹೇಳುವವರೂ ದಯೆಯಿಲ್ಲದವರೂ ಉಗ್ರತೆಯುಳ್ಳವರೂ ಒಳ್ಳೇದನ್ನು ಪ್ರೀತಿಸದವರೂ ದ್ರೋಹಿಗಳೂ ದುಡುಕಿನವರೂ ಉಬ್ಬಿಕೊಂಡವರೂ ದೇವರನ್ನು ಪ್ರೀತಿಸದೆ ಬೋಗಗಳನ್ನೇ ಪ್ರೀತಿಸುವವರೂ ಭಕ್ತಿಯ ವೇಷವಿದ್ದು ಅದರ ಬಲವನ್ನು ಬೇಡವೆನ್ನುವವರೂ ಆಗಿರುವರು.'' (2 ತಿಮೊಥೆಯನಿಗೆ 3:1-5).

ಮುಹಮ್ಮದ್ ಪೈಗಂಬರರ ವಚನ ಸಂಗ್ರಹ ಗ್ರಂಥಗಳಲ್ಲಿ ಹೀಗೆ ಉಲ್ಲೇಖನವಿದೆ:

"ಅಂತ್ಯಕಾಲದಲ್ಲಿ ದೈವಭಕ್ತನೂ ಅಜ್ಞಾನಿ ಎನಿಸುವನು. ಪುರುಷನು ಸ್ತ್ರೀ ಹೇಳಿದಂತೆ ಕೇಳುವನು. ತಾಯಿಯ ಉಪದೇಶವನ್ನು ಗಮನಿಸಲಾರನು. ಹಿರಿಯರ ಆದರಿಸುವಿಕೆಯೂ ಕಿರಿಯರ ಮೇಲೆ ಕರುಣೆ ತೋರುವುದೂ ಇಲ್ಲದಾಗುವುದು. ಪುರುಷರು ಸ್ತ್ರೀಯರೊಡನೆ ಬಹಿರಂಗವಾಗಿ ರಸ್ತೆಯಲ್ಲಿಯೇ ಅಶ್ಲೀಲವಾಗಿ ವರ್ತಿಸುವರು. ವ್ಯಭಿಚಾರ ಸಂತತಿಗಳು ವರ್ಧಿಸುವುವು. ಜನರ ಮತವು ಧನಸಂಪತ್ತಾಗುವುದು. ಹಣಗಳಿಕೆಗೋಸ್ಕರ ಜನರು ಜ್ಞಾನಾರ್ಜನೆ ಮಾಡುವರು. ಭಾಷಣಕಾರರು ತುಂಬಾ ಉಂಟಾಗುವರು; ಆದರೆ ಸತ್ಕರ್ಮ ಸೂಚಕರು ಬಹಳ ಕಮ್ಮಿ ಇರುವರು. ಜನರು ಮಸೀದಿಗಳಲ್ಲಿ ಕುಳಿತು ಲೌಕಿಕ ಸಮಾಚಾರಗಳನ್ನು ಮಾತನಾಡುವರು. ಮಸೀದಿಗಳಲ್ಲಿ ಗುಲ್ಲು ಗಲಾಟೆ ಉಂಟಾಗುವುದು. ಜನರು ತಂದೆ ತಾಯಿಗಳ ಆಜ್ಞಾಲಂಘನೆ ಮಾಡುವರು. ದೌರ್ಜನ್ಯದಲ್ಲಿ ಅಭಿಮಾನಗೊಳ್ಳುವರು. ರಸ್ತೆಯಲ್ಲೇ ಮದ್ಯಪಾನ ಮಾಡುವರು. ಲಂಚರುಷುವತ್ತು ವರ್ಧಿಸುವುದು. ಸ್ತ್ರೀಯರು ಪುರುಷರಂತೆ ವಸ್ತ್ರಧಾರಣೆ ಮಾಡುವರು.'' (ಇಖ್ತಿರಾಬುಸ್ಸಾಅತ್, ಪುಟ 38-54)

"ಜನರು ನಮಾಜು ಮಾಡುವುದನ್ನು ತ್ಯಜಿಸುವರು. ಸುಳ್ಳು ಹೇಳುವುದು ತಪ್ಪೆಂದು ಭಾವಿಸಲಾರರು. ಬಡ್ಡಿಯನ್ನು ಪಡೆಯುವರು. ಉನ್ನತ ಕಟ್ಟಡಗಳನ್ನು ನಿರ್ಮಿಸುವರು. ಸ್ವೇಚ್ಛೆಗೆ ಅಧೀನರಾಗುವರು. ಕೊಲೆ ಮಾಡುವುದನ್ನು ಸಾಮಾನ್ಯವೆಂದು ಭಾವಿಸುವರು. ವಿನಯಭಾವವು ಬಲಹೀನತೆಯೆಂದು ಗಣಿಸಲ್ಪಡುವುದು. ಸುಳ್ಳು ಸಾಕ್ಷಿ ಹೇಳುವವರು ಧಾರಾಳವಿರುವರು. ಮಸೀದಿಗಳನ್ನು ಅಲಂಕರಿಸುವರು; ಮಿನಾರಗಳನ್ನು ಉನ್ನತವಾಗಿ ನಿರ್ಮಿಸುವರು; ಆದರೆ ಭಕ್ತಿಶೂನ್ಯವಾಗಿರುವುದು. ದುಷ್ಟರು ಗೌರವಿಸಲ್ಪಡುವರು. ಜನರು ವಾಗ್ದಾನಗಳನ್ನು ಉಲ್ಲಂಘಿಸುವರು. ಮಾರ್ಗಭ್ರಷ್ಟರ ಮಾತುಗಳನ್ನು ಜನರು ಶ್ರದ್ಧೆಯಿಂದ ಕೇಳುವರು. ದುಷ್ಟರ ಅಕ್ರಮಗಳಿಗೆ ಜನರು ಹೆಚ್ಚು ಹೆದರಿಕೊಳ್ಳುವರು.'' (ಬಿಹಾರುಲ್ ಅನ್‌ವಾರ್, ಸಂಪುಟ 13, ಪುಟ 153).

ಸಿಖ್ಖರ ಪವಿತ್ರ ಗ್ರಂಥವಾದ ಜನುಂ ಸಾಖೀಯಲ್ಲಿ ಈರೀತಿ ಬರೆಯಲಾಗಿದೆ:

"ಬಹಳ ಕೆಟ್ಟ ಕಾಲವು ಬರಲಿದೆ. ಹಿಂದೂಗಳೂ ಮುಸ್ಲಿಮರೂ ತಂತಮ್ಮ ಧರ್ಮಗಳನ್ನು ಬಿಟ್ಟುಬಿಡುವರು. ಗುರುಹಿರಿಯರನ್ನು ಆದರಿಸಲಾರರು. ಉಪದೇಶಗಳಿಗೆ ಕಿವಿಗೊಡಲಾರರು. ವೇದ, ಖುರ್‌ಆನ್ ಮತ್ತು ಪ್ರಾರ್ಥನಾಲಯಗಳನ್ನು ಮರೆತು ಬಿಡುವರು. ಧಾರ್ಮಿಕ ಕರ್ಮಗಳನ್ನೆಲ್ಲಾ ತ್ಯಜಿಸುವರು. ನೈತಿಕ ಮಾರ್ಗವನ್ನು ತೊರೆಯುವರು. ಒಬ್ಬರಿನ್ನೊಬ್ಬರನ್ನು

ಗಮನಿಸಲಾರರು. ಒಬ್ಬರಿನ್ನೊಬ್ಬರ ಪ್ರಾಣಹಾನಿ ಮಾಡಲುದ್ಯುಕ್ತರಾಗುವರು."

ಈಗ ವಿವರಿಸಲಾದ ಧರ್ಮ ಗ್ರಂಥಗಳ ಭವಿಷ್ಯ ನುಡಿಗಳು ಈ ಕಾಲದಲ್ಲಿ ನಮ್ಮ ಕಣ್ಣ ಮುಂದೆ ಅಕ್ಷರಶಃ ಪೂರ್ಣಗೊಳ್ಳುತ್ತಾ ಇವೆ. ಹಾಗಿರುವಾಗ ಧರ್ಮ ಗ್ರಂಥಗಳಲ್ಲಿ ಭವಿಷ್ಯ ನುಡಿಯಲ್ಪಟ್ಟ ಆ ಮಹಾಮತ ಸುಧಾರಕ ಆವಿರ್ಭವಿಸಬೇಕಾದುದು ಕಲಿಯುಗದ ಈ ಅಂತ್ಯಕಾಲದಲ್ಲಾಗಿದೆ ಎಂಬುದು ಸ್ಪಷ್ಟ.

ಈ ಕಾಲದಲ್ಲಿ ಲೋಕದ ಸ್ಥಿತಿಯು ಸಂಪೂರ್ಣ ಬದಲಾವಣೆಗೊಂಡಿದೆ. ಆದರಣೀಯರಾದ ಧರ್ಮಾತ್ಮರು ಭವಿಷ್ಯ ನುಡಿದಂತೆಯೇ ಈ ಕಾಲವು ಪಾಪಗಳ ಕೇಂದ್ರವಾಗಿ ಮಾರ್ಪಟ್ಟಿದೆ. ಈಗ ಲೋಕದಲ್ಲಿ ಗೋಚರವಾಗದ ಪಾಪವೂ ದುಷ್ಕರ್ಮವೂ ಯಾವುದಿದೆ? ಧರ್ಮದ ನಾಮ ಮಾತ್ರವೇ ಇಂದು ಲೋಕದಲ್ಲಿ ಬಾಕಿ ಯುಳಿದಿದೆ. ಬೀದಿ ಬೀದಿಗಳಲ್ಲೂ ಮನೆ ಮನೆಗಳಲ್ಲೂ ಪಾಪದ ದೃಶ್ಯಗಳನ್ನು ನಾವಿಂದು ಕಾಣುತ್ತಿದ್ದೇವೆ. ಜನರ ಮಾತು ಮತ್ತು ವರ್ತನೆಯಲ್ಲಿ ನಾವು ಆಕಾಶ—ಭೂಮಿಯ ಅಂತರವನ್ನು ಕಾಣುತ್ತೇವೆ. ಧರ್ಮನಿಷ್ಠರಾಗಿದ್ದವರು ಧರ್ಮದಿಂದ ಅಗಲಿ ದೂರವಾಗಿದ್ದಾರೆ. ವಿಶ್ವಾಸ, ಶ್ರದ್ಧಾದಿಗಳು ಜನರ ಅದರಗಳಲ್ಲಿ ಮಾತ್ರ ಬಾಕಿಯಾಗಿ ಹೃದಯವು ಭಕ್ತಿಶೂನ್ಯವೂ ಧರ್ಮದಿಂದ ವಿದೂರವೂ ಆಗಿದೆ. ಹೀಗಿರುವ ದುರವಸ್ಥೆಯಲ್ಲಿ ಓರ್ವ ಮಹಾತ್ಮ ಪ್ರತ್ಯಕ್ಷನಾಗಿ ಲೋಕಕ್ಕೆ ಸತ್ಯೋಪದೇಶವನ್ನು ನೀಡುವುದು ಅತ್ಯಾವಶ್ಯಕವಾಗಿದೆ.

ಆ ಮಹಾ ಪುರುಷ ಎಲ್ಲಿ ಜನ್ಮತಾಳುವರೆಂಬುದರ ಕುರಿತೂ ಜನ್ಮತಾಳಿದ ಕುರುಹುಗಳೇನೆಂಬುದರ ಕುರಿತೂ ಸಹ ಮತಗ್ರಂಥಗಳು ಸ್ಪಷ್ಟಗೊಳಿಸಿವೆ.

ಸಿಖ್ಖ ಮತಗ್ರಂಥವಾದ ಜನಂ ಸಾಖೀಯಲ್ಲಿ ಮರ್ದಾನಾರ ಪ್ರಶ್ನೆಗುತ್ತರವಾಗಿ ಮಹಾತ್ಮ ಗುರು ನಾನಕ್ ಹೀಗೆಂದಿರುವರು: "ಎಲೈ ಮರ್ದಾನಾ, ಆ ಮಹಾ ಪುರುಷನು ಬಟಾಲಾದ (ಪಂಜಾಬ್) ಪರಿಸರದಲ್ಲಿ ಜನ್ಮತಾಳುವನು.''

ಹಿಜರಿ 840ರಲ್ಲಿ ಬರೆಯಲಾದ 'ಜವಾಹಿರುಲ್ ಅಸ್ರಾರ್' ಎಂಬ ಪ್ರಸಿದ್ಧ ಗ್ರಂಥದ ಕರ್ತರು ಹೀಗೆಂದಿರುವರು:

"ಮಹ್‌ದಿಯು 'ಕದ್‌ಅ' ಎಂಬ ಗ್ರಾಮದಲ್ಲಿ ಅವತರಿಸುವರೆಂದೂ ಅಲ್ಲಾಹು ಅವರ ಸತ್ಯತೆಯನ್ನು ಸಾಕ್ಷ್ಯಪಡಿಸುವನೆಂದೂ ಪೈಗಂಬರರು ನುಡಿದಿರುವರು." ಇದೇ ಭವಿಷ್ಯನುಡಿ 'ಬಿಹಾರುಲ್ ಅನ್‌ವಾರ್' ಎಂಬ ಗ್ರಂಥದಲ್ಲಿ (ಸಂಪುಟ 13, ಪುಟ 19) ಸಹ ಉಲ್ಲೇಖಿಸಲ್ಪಟ್ಟಿದೆ.

ಇನ್ನು ಆ ಮಹಾತ್ಮರು ಅವತರಿಸಿದ ಕುರುಹುಗಳ ಕುರಿತು ಧರ್ಮಗ್ರಂಥಗಳು ಏನು ಹೇಳುತ್ತವೆ ಎಂದು ನೋಡುವಾ.

ಮುಹಮ್ಮದ್ ಪೈಗಂಬರರ ಒಂದು ಭವಿಷ್ಯ ನುಡಿ ಹೀಗಿದೆ:

"ಆ ಮಹ್‌ದಿಗೆ (ಮತಸುಧಾರಕನಿಗೆ) ಎರಡು ಸಾಕ್ಷ್ಯಗಳಿವೆ. ಆಕಾಶಭೂಮಿಗಳು ಉಂಟಾದ ನಂತರ ಇಂತಹ ದೃಷ್ಟಾಂತಗಳಿಲ್ಲ. ರಂಝಾನ್ ತಿಂಗಳಿನಲ್ಲಿ ಚಂದ್ರಗ್ರಹಣವಾಗಲು ಸಾಧ್ಯತೆ ಇರುವ ರಾತ್ರಿಗಳಲ್ಲಿ (13, 14, 15) ಒಂದನೇ ರಾತ್ರಿಯಲ್ಲಿ (13ನೇ ರಾತ್ರಿ) ಚಂದ್ರಗ್ರಹಣವೂ ಸೂರ್ಯಗ್ರಹಣವಾಗಲು ಸಾಧ್ಯತೆ ಇರುವ ಹಗಲುಗಳಲ್ಲಿ (27, 28, 29) ಎರಡನೇ ದಿನದಲ್ಲಿ (28ನೇದಿನ) ಸೂರ್ಯಗ್ರಹಣವೂ ಸಂಭವಿಸುವುದು. ಆಕಾಶ ಭೂಮಿ ಸೃಷ್ಟಿಸಲ್ಪಟ್ಟ ಬಳಿಕ ಇಂತಹ ಸಂಭವ ಉಂಟಾಗಲಿಲ್ಲ.''

ಹಿಂದೂ ಧಾರ್ಮಿಕ ಗ್ರಂಥವಾದ ಶ್ರೀಮದ್ಭಾಗವತದಲ್ಲೂ, ಕ್ರೈಸ್ತ ಧರ್ಮಗ್ರಂಥದಲ್ಲೂ (ಮತ್ತಾಯ 24:29) ಮುಸ್ಲಿಂ ಧರ್ಮಗ್ರಂಥವಾದ ಖುರ್‌ಆನ್‌ನಲ್ಲಿಯೂ (75:9, 10) ಸಿಖ್ಖರ ಧರ್ಮಗ್ರಂಥವಾದ ಗ್ರಂಥಸಾಹಿಬ್‌ನಲ್ಲಿಯೂ ಆ ಮಹಾತ್ಮರ ಆಗಮನ ಕಾಲದಲ್ಲಿ ಸೂರ್ಯಚಂದ್ರ ಗ್ರಹಣಗಳು ಉಂಟಾಗುವುವೆಂಬ ಸೂಚನೆ ಇದೆ.

ಮನುಷ್ಯರು ದೈವಜ್ಞಾನವೆಂಬ ಆತ್ಮಜಲವನ್ನು ಹರಸಿ ನಡೆಯುವ ಕಾಲ ಬಂದೊದಗಿದಾಗ, ಆ ಅಮೃತ ಜಲದ ಹೊರತು ಅವರು ಬದುಕಲಾರರೆಂಬ ಕಾಲಘಟ್ಟವು ಬಂದಾಗ ಪರಮಾತ್ಮನು ತನ್ನ ಭಕ್ತಜನರ ಆತ್ಮರೋಗವನ್ನು ಗುಣಪಡಿಸಲು ಓರ್ವ ಮಹಾಪುರುಷರನ್ನು ತನ್ನ ದಿವ್ಯ ಜ್ಞಾನವನ್ನು ನೀಡಿ ಕಳುಹಿಸಿದನು.

ಹಾಗೆ ಯಥಾಕಾಲದಲ್ಲಿ ಆ ವಾಗ್ದತ್ತ ಲೋಕೋದ್ಧಾರಕ ಆವಿರ್ಭವಿಸಿ, ಎಲ್ಲಾ ಮತ ಗ್ರಂಥಗಳಲ್ಲಿ ಭವಿಷ್ಯ ನುಡಿಯಲ್ಪಟ್ಟ ಆ ಮತಸುಧಾರಕನು ತಾನೆಂದು ಭೂಲೋಕದಲ್ಲಿಡೀ ಸಾರಿದರು. ಆ ಮಹಾತ್ಮರೇ ಅಹ್ಮದಿಯಾ ಸಂಘಟನೆಯ ಸ್ಥಾಪಕ ಹಝ್ರತ್

ಮಿರ್ಝಾ ಗುಲಾಂ ಅಹ್ಮದ್. ಅವರು ಪಂಜಾಬ್ ರಾಜ್ಯದ **ಬಟಾಲಾದ** ಸಮೀಪದ **ಖಾದಿಯಾನ್** ಎಂಬ ಗ್ರಾಮದಲ್ಲಿ 1835ರಲ್ಲಿ ಜನ್ಮವೆತ್ತಿದರು. ಅವರ ಸತ್ಯಕ್ಕೆ ಸಾಕ್ಷ್ಯವಾಗಿ ಆ ಎರಡು ದೈವಿಕ ಕುರುಹುಗಳಾದ ಸೂರ್ಯಚಂದ್ರ ಗ್ರಹಣಗಳು ಭವಿಷ್ಯವಾಣಿಯಲ್ಲಿ ಸೂಚಿಸಲಾದಂತೆಯೇ ಸಂಭವಿಸಿದುವು. 1894ನೇ ಇಸವಿ ರಂಝಾನ್ ತಿಂಗಳಲ್ಲಿ, ಪೈಗಂಬರರ ಭವಿಷ್ಯವಾಣಿಯಲ್ಲಿ ಸೂಚಿಸಲಾದ ಅದೇ ತಾರೀಕುಗಳಲ್ಲಿ ಸೂರ್ಯಚಂದ್ರ ಗ್ರಹಣಗಳು ಸಂಭವಿಸಿದವು. ಪರಮಾತ್ಮನು ಈ ಸಾಕ್ಷ್ಯವನ್ನು ಒಮ್ಮೆಯಲ್ಲ, ಎರಡು ಬಾರಿ ಪ್ರಕಟಪಡಿಸಿದರು. ಹೇಗೆಂದರೆ ಮಾರಣೆಯ ವರ್ಷ ಅಂದರೆ **1895**ರಲ್ಲಿ ಪಶ್ಚಿಮ ಗೋಲಾರ್ಧದಲ್ಲಿಯೂ ಪ್ರಸ್ತುತ ಗ್ರಹಣಗಳು ಆವರ್ತಿಸಲ್ಪಟ್ಟವು.

ಪರಮಾತ್ಮನಿಂದ ತನಗೆ ದಿವ್ಯಾರಿವು ಸಿಕ್ಕಿದನ್ನನುಸರಿಸಿ ಅವರು ಲೋಕೋದ್ಧಾರಕ್ಕಾಗಿ ಹೊರಟು ಜನರನ್ನು ದೈವನಿರ್ದಿಷ್ಟವಾದ ಸನ್ಮಾರ್ಗದೆಡೆಗೆ ಆಮಂತ್ರಿಸಿದರು. ಅವರು ಹೇಳಿದರು: ‘‘ಪ್ರಿಯ ಸಹೋದರರೇ, ನಿಮ್ಮ ದುಃಖದ ಶಮನಕ್ಕಾಗಿ ಪರಮಾತ್ಮನು ನನ್ನನ್ನು ಕಳುಹಿಸಿರುವನು. ನೀವು ಆ ಪರಮಾತ್ಮನನ್ನು ಕಾಣಲು ಇಚ್ಛಿಸುವಿರಾದರೆ ನನ್ನ ಸಮೀಪಕ್ಕೆ ಬನ್ನಿರಿ. ಯಾವ ದಾರಿಯಲ್ಲಿ ನಡೆದರೆ ನಿಮಗೆ ಪರಮಾತ್ಮನನ್ನು ಕಾಣಲು ಸಾಧ್ಯವೋ, ಆ ದಾರಿಯನ್ನು ನಾನು ನಿಮಗೆ ಹೇಳಿಕೊಡುವೆನು.’’

ಆ ಮಹಾ ಪುರುಷರು ತನ್ನ ಸತ್ಯಕ್ಕೆ ಆಧಾರವಾಗಿ ಧಾರಾಳ ಸಾಕ್ಷ್ಯಗಳನ್ನೂ ಪ್ರಮಾಣಗಳನ್ನೂ ಉದ್ಧರಿಸಿದರಲ್ಲದೆ ಅನೇಕ ದೈವಿಕ ಸೂಚಕ ಕಾರ್ಯಗಳನ್ನು ಉದಾಹರಿಸಿದರು. ಮಾತ್ರವಲ್ಲ, ಅವರು ತನ್ನ ಅನೇಕ ಭವಿಷ್ಯವಾಣಿಗಳನ್ನು ಲೋಕದ ಮುಂದಿಟ್ಟರು. ಅವುಗಳಲ್ಲಿ ಹಲವು ಅವರ ಕಾಲದಲ್ಲಿಯೂ ಇನ್ನು ಹಲವು ಅವರ ಕಾಲಬ ನಂತರವೂ ಪೂರ್ತಿಗೊಂಡವು. ಬಾಕಿಯವು ಈಗಲೂ ಪೂರ್ತಿಗೊಳ್ಳುತ್ತಿವೆ.

ಆ ಮಹಾಪುರುಷನ ದೌತ್ಯಾರಂಭದ ಕಾಲದಲ್ಲಿ ನಾಗರಿಕರೂ ಶಕ್ತಿಶಾಲಿಗಳೂ ಆದ ಪಾಶ್ಚಾತ್ಯ ರಾಷ್ಟ್ರಗಳ ಪ್ರತಾಪವನ್ನು ಎದುರಿಸಲು ಸಮರ್ಥವಾದ ಒಂದೇ ಒಂದು ಪೌರ್ವಾತ್ಯ ರಾಷ್ಟ್ರವಿರಲಿಲ್ಲ. ಆದರೆ ಪಾಶ್ಚಾತ್ಯ ರಾಷ್ಟ್ರಗಳ ಶಕ್ತಿಯನ್ನು ಪ್ರತಿಭಟಿಸುವಷ್ಟು ಬಲಿಷ್ಠವಾದ ಕೆಲವು ಪೌರ್ವಾತ್ಯ ರಾಷ್ಟ್ರಗಳು ಶೀಘ್ರದಲ್ಲೇ ಪ್ರತ್ಯಕ್ಷಗೊಳ್ಳುವುವೆಂದು 1904ರಲ್ಲಿ ಅವರು ದಿವ್ಯಜ್ಞಾನದ ಆಧಾರದಿಂದ ಲೋಕಕ್ಕೆಲ್ಲಾ ತಿಳಿಸಿದರು. ಇದಕ್ಕನುಸಾರವಾಗಿ 1905ರಲ್ಲಿ ಜಪಾನು ರಶ್ಯಾವನ್ನು ಸೋಲಿಸಿ ಒಂದು ಪೌರ್ವಾತ್ಯ ಶಕ್ತಿಯೆಂಬ ಕೀರ್ತಿಯನ್ನು ಪಡೆಯಿತು. ಎರಡನೇ ಜಾಗತಿಕ ಯುದ್ಧದಲ್ಲಿ ಜಪಾನು ಪರಾಜಯಗೊಂಡ ನಂತರ ಒಂದು ಮಹಾ ಪೌರ್ವಾತ್ಯ ಶಕ್ತಿಯಾಗಿ ಚೈನಾ ಪ್ರತ್ಯಕ್ಷಕ್ಕೆ ಬಂತು. ಲೋಕದ ಮಹಾ ಶಕ್ತಿಗಳೆಂಬ ನೆಲೆಯಲ್ಲಿ ಈ ಎರಡು ರಾಷ್ಟ್ರಗಳು ಮೇಲೆ ಬಂದ ಮೊದಲ್ಗೊಂಡು ಲೋಕಚರಿತ್ರೆಯ ಗತಿಯಲ್ಲಿಯೇ ಬದಲಾವಣೆಯುಂಟಾಯಿತು. ಇದೀಗ ನಮ್ಮ ಭಾರತ ದೇಶ ಸಹ ಒಂದು ಪೌರ್ವಾತ್ಯ ಮಹಾನ್ ಶಕ್ತಿಯಾಗಿ ಮೇಲೇಳುತ್ತಿದೆ. ಈ ಎಲ್ಲಾ ಸಂಭವಗಳು ಆ ಮಹಾಪುರುಷನ ಭವಿಷ್ಯನುಡಿಯ ಪೂರ್ತೀಕರಣವಾಗಿದೆ.

ಈ ಕಾಲದಲ್ಲುಂಟಾದ, ಇಡೀ ಭೂಲೋಕದಲ್ಲಿ ಭಾರೀ ಪ್ರಭಾವವನ್ನು ಬೀರಿದ ಇನ್ನೊಂದು ಪ್ರಧಾನ ಸಂಭವ ಝಾರ್ ಚಕ್ರವರ್ತಿಯ ಹಾಗೂ ಅವನ ಚಕ್ರಾಧಿಪತ್ಯದ ಸಮೂಲನಾಶ ಮತ್ತು ಕಮ್ಯೂನಿಸಮಿನ ವಿಜಯವಾಗಿದೆ. ಚರಿತ್ರೆಯ ಗತಿಯನ್ನೇ ಬದಲಾಯಿಸಿದ ರಶ್ಯನ್ ವಿಪ್ಲವವು ಆ ಮಹಾಪುರುಷರ ಭವಿಷ್ಯನುಡಿಗಳು ಅಕ್ಷರಶಃ ಪೂರ್ತಿಗೊಳ್ಳುವ ರೀತಿಯಲ್ಲಿ ಸಂಭವಿಸಿತು. ರಶ್ಯಾದ ಝಾರ್ ಚಕ್ರವರ್ತಿಯೂ ಅವನ ಕುಟುಂಬವೂ ಅವನ ಆಡಳಿತ ಕ್ರಮವೂ ಅತಿ ದಾರುಣವಾದ ಒಂದು ದುರಂತಾವಸ್ಥೆಯನ್ನೆದುರಿಸಬೇಕಾಗುವುದೆಂದು ತನಗುಂಟಾದ ದಿವ್ಯಾರಿವಿನ ಆಧಾರದಿಂದ 1905ರಲ್ಲಿ ಹಝ್ರತ್ ಅಹ್ಮದ್‌ರವರು ಭವಿಷ್ಯ ನುಡಿದಿದ್ದರು. ಆ ಭವಿಷ್ಯವಾಣಿಯನ್ನು ಪ್ರಕಟಗೊಳಿಸಿದ ಕೆಲವು ತಿಂಗಳುಗಳೊಳಗೆಯೇ ಅಲ್ಲೊಂದು ರಾಜಕೀಯ ಪಕ್ಷ ರೂಪುಗೊಂಡಿತೆಂಬ ಸಂಗತಿ ಆಶ್ಚರ್ಯಕರವಾಗಿದೆ. ಆ ಪಕ್ಷವು ಹನ್ನೆರಡು ಹದಿಮೂರು ವರ್ಷಗಳ ನಂತರ ಝಾರ್ ರಾಜ್ಯಾಧಿಪತ್ಯವನ್ನೂ ಅರಸುಮನೆತನವನ್ನೂ ಧ್ವಂಸಮಾಡಿತು. ವಾಗ್ದತ್ತ ಮಹ್‌ದೀ ಮಸೀಹ (ಮಹಾಮತಸುಧಾರಕ) ರ ಕಾಲದಲ್ಲಿ ಎರಡು ಮಹಾ ಶಕ್ತಿಗಳು ರೂಪುಗೊಳ್ಳುವುವೆಂದೂ ಲೋಕವು ಎರಡು ವಿರೋಧ ಪಂಗಡಗಳಾಗಿ ವಿಭಜಿಸಲ್ಪಡುವುವೆಂದೂ ಬಹಳ ವ್ಯಕ್ತವಾಗಿಯೂ ಕೂಲಂಕುಷವಾಗಿಯೂ ಧರ್ಮ

ಗ್ರಂಥಗಳಲ್ಲಿ ಭವಿಷೋಕ್ತಿಗಳಿವೆ. ಈ ಎರಡು ಮಹಾಶಕ್ತಿಗಳನ್ನು ಎದುರಿಸಲು ಬೇರೊಂದು ಶಕ್ತಿಗೆ ಸಾಧ್ಯವಾಗಲಿಕ್ಕಿಲ್ಲವೆಂದೂ ಕಡೆಗೆ ಈ ಎರಡು ಮಹಾಶಕ್ತಿಗಳೂ ಪರಸ್ಪರ ಕಾದಾಡಿ ನಾಶಗೊಳ್ಳುವುವೆಂದೂ ಭವಿಷ್ಯವಾಣಿಯಲ್ಲಿ ವ್ಯಕ್ತಗೊಳಿಸಲ್ಪಟ್ಟಿರುತ್ತದೆ. ಆ ಮಹಾಗುರುವು ಲೋಕಕ್ಕೆ ಮುನ್ನೆಚ್ಚರಿಕೆಯನ್ನಿತ್ತದ್ದು ಈ ಒಂದು ಯುದ್ಧದ ಕುರಿತು ಮಾತ್ರವಲ್ಲ, ಲೋಕವ್ಯಾಪಕವಾದ ಐದು ಮಹಾನಾಶಗಳ ಕುರಿತು ಭವಿಷ್ಯ ನುಡಿದಿರುವರು.

ಒಂದನೆಯ ಜಾಗತಿಕ ಯುದ್ಧದ ಕುರಿತು, ಅದು ಒಮ್ಮಿಂದೊಮ್ಮೆಲೇ ಲೋಕವ್ಯಾಪಕವಾಗುವುದೆಂದು ಅವರು ಪ್ರಸ್ತಾಪಿಸಿದ್ದರು. ಭೂಲೋಕವಿಡೀ ಭಯಾವೇಶಗೊಳ್ಳುವುದೆಂದೂ ಸಂಚಾರಿಗಳು ಬಹಳ ಕಷ್ಟಗಳನ್ನು ಎದುರಿಸಬೇಕಾಗುವುದೆಂದೂ ನದಿಗಳು ರಕ್ತಪ್ರವಾಹದಿಂದ ಕೆಂಪುವರ್ಣಕ್ಕೆ ಮಾರ್ಪಡುವುದೆಂದೂ ಎಳೆಯರು ಭಯಾವೇಶದ ಕಾರಣದಿಂದಾಗಿ ವೃದ್ಧಾಪ್ಯವನ್ನು ಪಡೆದವರಂತಾಗುವರೆಂದೂ ಯುದ್ಧದ ಕೆಡುಕುಗಳ ಕಾರಣದಿಂದಾಗಿ ಮನುಷ್ಯರು ಭಯಭ್ರಾಂತರಾಗುವರೆಂದೂ ಅವರು ಭವಿಷ್ಯ ನುಡಿದಿದ್ದರು. ಝಾರ್‌ನ ನಾಶಸಹ ಇದೇ ಕಾಲದಲ್ಲಾಗುವುದೆಂದೂ ಲೋಕದಲ್ಲೆಲ್ಲಾ ಕಮ್ಯುನಿಸಮಿನ ಬೀಜ ಬಿತ್ತಲ್ಪಡುವುದೆಂದೂ ಯುದ್ಧ ನೌಕೆಗಳು ಸದಾ ಯುದ್ಧದ ತಯಾರಿಯಲ್ಲಿ ಚಲಿಸುವುವೆಂದೂ ಭಾರೀ ನೌಕಾ ಯುದ್ಧಗಳು ಸಂಭವಿಸುವುವೆಂದೂ ಸಾಮ್ರಾಜ್ಯಗಳು ಕೆಡವಲ್ಪಡುವುವೆಂದೂ ಪಟ್ಟಣಗಳು ಸ್ಮಶಾನಗಳಾಗಿ ಮಾರ್ಪಡುವುವೆಂದೂ ಸಹ ಅವರು ನುಡಿದಿದ್ದರು.

ಈ ಮಹಾ ನಾಶವನ್ನು ಬೆನ್ನಟ್ಟಿಯೇ ಇದಕ್ಕಿಂತಲೂ ವ್ಯಾಪಕವೂ ಭೀಕರವೂ ಆದ ದುರಂತಗಳಿಗೆ ಕಾರಣವಾಗುವ ಇನ್ನೊಂದು ಲೋಕಯುದ್ಧ ಉಂಟಾಗುವುದೆಂದೂ ಅದು ಭೂಲೋಕದ ಭೂಪಟವನ್ನು ಬದಲಾಯಿಸಿ ರಾಷ್ಟ್ರಗಳ ಭಾವೀ ಸ್ಥಿತಿಯನ್ನು ಪುನಃ ರೂಪೀಕರಿಸುವುದೆಂದೂ ಕಮ್ಯುನಿಸಂ ಒಂದು ಲೋಕಶಕ್ತಿಯಾಗಿ ಮೇಲೆದ್ದು ತನ್ನ ಶಾಸನಗಳನ್ನು ನಿರ್ದೇಶಿಸಲಾರಂಭಿಸುವುದೆಂದೂ ವಿಶಾಲವಾದ ಭೂಭಾಗಗಳು ಅವರ ಅಧಿಕಾರಕ್ಕೆ ಒಳಗಾಗುವುವೆಂದೂ ಅವರು ನುಡಿದಿದ್ದರು. ಎರಡನೇ ಲೋಕಯುದ್ಧದ ನಂತರ ಇದೇ ರೀತಿ ಸಂಭವಿಸಿತು. ಪೂರ್ವ ಯುರೋಪಿನಲ್ಲಿರುವ ಅನೇಕ ರಾಷ್ಟ್ರಗಳು ಕಮ್ಯುನಿಸ್ಟ್ ಆಗಿ ಮಾರ್ಪಟ್ಟವು. ಎಪ್ಪತ್ತು ಕೋಟಿ ಚೀನೀಯರು ಸಹ ಅವರೊಂದಿಗೆ ಸೇರಿದರು. ಆಫ್ರಿಕದಲ್ಲಿಯೂ ಏಷ್ಯಾದಲ್ಲಿಯೂ ಮೇಲೆ ಬಂದ ರಾಷ್ಟ್ರಗಳು ಕಮ್ಯುನಿಸಮಿನ ಸ್ವಾಧೀನತೆಗೊಳಪಟ್ಟವು. ಲೋಕವು ಎರಡು ವಿರೋಧ ಪಂಗಡಗಳಾಗಿ ವಿಭಾಗಿಸಲ್ಪಟ್ಟಿತು.

ಎರಡನೇ ಜಾಗತಿಕ ಯುದ್ಧವನ್ನು ಬೆನ್ನಟ್ಟಿಯೇ ಅದಕ್ಕಿಂತ ವ್ಯಾಪಕವೂ ಭೀಕರವೂ ಆದ ಮೂರನೇ ಲೋಕ ಮಹಾಯುದ್ಧ ಸಂಭವಿಸಲಿದೆಯೆಂದು ಸಹ ಆ ಮಹಾಪುರುಷರು ಭವಿಷ್ಯ ನುಡಿದಿರುವರು. ಯಾರೂ ನಿರೀಕ್ಷಿಸದ ರೀತಿಯಲ್ಲಿ ಆ ಎರಡು ವಿರೋಧ ಪಕ್ಷಗಳು ಹಠಾತ್ತನೆ ಪರಸ್ಪರ ಸಂಘರ್ಷಿಸುವುವೆಂದೂ, ಆಕಾಶದಿಂದ ಮರಣವೂ ನಾಶವೂ ಎರಗಲಿವೆಯೆಂದೂ ಭೂಮಿಯಿಡೀ ಬೆಂಕಿಯ ಜ್ವಾಲೆಗಳಿಂದಾವೃತವಾಗಲಿದೆಯೆಂದೂ ಭವಿಷ್ಯವಾಣಿಯಲ್ಲಿ ಪ್ರಸ್ತಾಪಿಸಲಾಗಿದೆ. ಆಧುನಿಕ ನಾಗರಿಕತೆಯು ವೈಭವ ಮಣ್ಣುಪಾಲಾಗಲಿದೆಯೆಂದೂ, ರಷ್ಯಾ ಮತ್ತು ಅದರ ಅನುಚರರು ಒಂದು ಕಡೆಯಲ್ಲಿಯೂ ಅಮೇರಿಕ ಮತ್ತು ಅದರ ಮಿತ್ರರಾಷ್ಟ್ರಗಳು ಇನ್ನೊಂದು ಕಡೆಯಲ್ಲಿಯೂ ತಮ್ಮ ಪ್ರತಾಪ, ವೈಭವ, ನಾಗರಿಕತೆ ಮತ್ತು ಸಕಲ ಸಂವಿಧಾನಗಳ ಸಮೇತ ನುಚ್ಚುನೂರಾಗಿ ಹೋಗಲಿವೆಯೆಂದೂ ಆದರೆ ಪಾಶ್ಚಾತ್ಯ ರಾಷ್ಟ್ರಗಳಿಗಿಂತ ಬೇಗನೇ ರಷ್ಯಾ ಈ ನಾಶದಿಂದ ವಿಮುಕ್ತವಾಗುವುದೆಂದೂ ಅದರ ನಂತರ ಶೀಘ್ರದಲ್ಲೇ ರಷ್ಯಾದ ಜನತೆಯು ವರ್ಧಿಸುವುದೆಂದೂ ಅವರು ತಮ್ಮ ಸೃಷ್ಟಿಕರ್ತನ ಕಡೆಗೆ ತಿರುಗುವರೆಂದೂ, ಭೂತಲದಿಂದ ದೈವನಾಮವನ್ನು ನಿರ್ನಾಮ ಮಾಡಲಿಕ್ಕೆ ಹವಣಿಸುವ ಈ ಜನರು ತಮ್ಮ ಮೌಢ್ಯತೆಯನ್ನರಿತು, ವಿಳಂಬಿಸದೆ ಏಕದೈವದ ದೃಢವಿಶ್ವಾಸಿಗಳಾಗಿ ಮಾರ್ಪಡುವರೆಂದೂ ಭವಿಷ್ಯವಾಣಿಯಲ್ಲಿ ವ್ಯಕ್ತಪಡಿಸಲಾಗಿದೆ.

ಇದಲ್ಲದೆ ಅವರು ಇನ್ನೂ ಅನೇಕ ಭವಿಷೋಕ್ತಿಗಳನ್ನು ಹೇಳಿರುವರು. ಈ ಭೂಲೋಕದಲ್ಲಿ ಅನೇಕ ಭೂಕಂಪಗಳು ಸಂಭವಿಸಲಿವೆಂಬ ಸೂಚನೆಯನ್ನು ಪರಮಾತ್ಮನು ತನಗೆ ಅರುಹಿದ್ದಾನೆಂದು ಅವರು ನುಡಿದಿರುವರು. ಅವುಗಳಲ್ಲಿ ಕೆಲವು ಪ್ರಳಯ ಕಾಲದ ಭಯವಾದ ಸರ್ವನಾಶಕ್ಕೆ ಸಮಾನವಾಗಿರಬಹುದೆಂದೂ ಹಲ

ವಾರು ಮಂದಿ ಮಡಿಯುವರೆಂದೂ ರಕ್ತದ ಹೊಳೆಗಳೇ ಹರಿಯುವುವೆಂದೂ ಮನುಷ್ಯನುಂಟಾದ ಕಾಲದಿಂದ ಇಷ್ಟರವರೆಗೆ ಸಂಭವಿಸದ ರೀತಿಯ ಅತ್ಯಂತ ಭಯಾನಕ ವಾದ ನಾಶಗಳು ಉಂಟಾಗುವುವೆಂದೂ ಭೂಮಿಯ ನಾನಾ ಭಾಗಗಳು ಅಲ್ಲಿ ಎಂದೂ ಜನವಾಸವಿದ್ದಿಲ್ಲವೆಂದು ಭಾಸವಾಗುವಷ್ಟರ ಮಟ್ಟಿಗೆ ಅಡಿಮೇಲಾಗಿ ಸರ್ವನಾಶ ವಾಗುವುವೆಂದೂ ಅವರು ಭವಿಷ್ಯ ನುಡಿದಿರುವರು. ಇದರೊಂದಿಗೆಯೇ ಜಲಪ್ರಳಯವೂ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಭಯಂಕರವಾದ ನಾಶಗಳು ಸಂಭವಿಸು ವುವೆಂದೂ ಅವರು ಹೇಳಿರುವರು.

ಆ ಮಹಾಪುರುಷರು ಹೇಳಿದಂತೆಯೇ ಅಮೇರಿಕ ದಲ್ಲಿಯೂ ಯೂರೋಪಿನಲ್ಲಿಯೂ ಏಷ್ಯಾದಲ್ಲಿಯೂ ಭೂಲೋಕದ ವಿವಿಧ ಭಾಗಗಳಲ್ಲಿಯೂ ಭಯಂಕರವಾದ ಭೂಕಂಪಗಳೂ ಜಲಪ್ರಳಯಗಳೂ ಆಪತ್ತುಗಳೂ ಸಂಭವಿಸುತ್ತಾ ಇವೆ. ಲಕ್ಷಗಟ್ಟಲೆ ಜನರು ಮಡಿದರು; ಸಾವಿರಾರು ಕಟ್ಟಡಗಳು ಕುಸಿದುವು; ಕೆಲವಾರು ನಗರಗಳು ನಿರ್ನಾಮವಾದವು. ಈ ಸಂಭವಗಳೆಲ್ಲಾ ಆ ಮಹಾ ಪುರುಷನ ಸತ್ಯತೆಗೆ ಸಾಕ್ಷ್ಯಗಳಾಗಿವೆ.

ಪ್ರಿಯ ಸಹೋದರರೇ, ಮನುಷ್ಯರು ಪರಮಾತ್ಮ ನನ್ನು ಮರೆತು ತಮ್ಮ ಪ್ರಯತ್ನ ಹಾಗೂ ಹೃದಯದ ಸಕಲ ಆಶಯಗಳನ್ನು ಕೇವಲ ಲೌಕಿಕ ಆಡಂಭರಗಳಿಗಾಗಿ ವಿನಿಯೋಗಿಸಿ ದುಃಖದುರಿತಗಳನ್ನು ಅನುಭವಿಸುವ ಈ ಕಾಲಘಟ್ಟದಲ್ಲಿ ಜನರನ್ನು ಸನ್ಮಾರ್ಗದೆಡೆಗೆ ಕೊಂಡೊಯ್ಯಲು ಆಗಮಿಸಿದ, ಎಲ್ಲಾ ಮತ ಗ್ರಂಥಗ ಳಲ್ಲಿ ಭವಿಷ್ಯ ನುಡಿಯಲ್ಪಟ್ಟ ಈ ಲೋಕೋದ್ಧಾರಕನ ಕುರಿತು ಚಿಂತಿಸಿರಿ. ಆ ಮಹಾಪುರುಷರ ಸತ್ಯತೆ ನಿಮಗೆ ಬೋಧ್ಯವಾದರೆ ಬೇಗನೆ ಅವರ ಅಭಯವನ್ನು ಪಡೆದು ಅವರ ಜ್ಞಾನಾಮೃತದಿಂದ ನಿಮ್ಮ ಆತ್ಮಗಳನ್ನು ಪವಿತ್ರ ವನ್ನಾಗಿ ಮಾಡಲು ನಾನು ನಿಮ್ಮೊಡನೆ ಆದರತೆಯಿಂದ ಅಭ್ಯರ್ಥಿಸುತ್ತೇನೆ. ಪರಮಾತ್ಮನು ನಿಮಗೆ ಸತ್ಯವನ್ನು ಗ್ರಹಿಸುವ ಶಕ್ತಿಯನ್ನು ಅನುಗ್ರಹಿಸಲಿಯೆಂದು ನಾನು ಆತನನ್ನು ಪ್ರಾರ್ಥಿಸುತ್ತೇನೆ. ಭಾರತ ದೇಶದಲ್ಲಿ ಉದಿ ಸಿದ ಈ ಪ್ರಕಾಶ ಲೋಕವನ್ನೆಲ್ಲಾ ಬೆಳಗಲಿ.

—o—o—o—


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

**ಮೈತ್ರಿ ಸಂದೇಶ**

"..........ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದುಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು ......" —ಉದಯವಾಣಿ.

"........ ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ.

ಪುಟಗಳು: 48 ಬೆಲೆ: ಒಂದು ರೂಪಾಯಿ ಅಂಚೆವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore-575001.

## ಇಸ್ಲಾಮ್ – ನವೀನ ಪಾಶ್ಚಾತ್ಯರ ನೋಟದಲ್ಲಿ

# ಇಸ್ಲಾಮ್ ಧರ್ಮದ ಅನುಷ್ಠಾನ ಕ್ರಮಗಳು

—ಡಾ। ಲೋರಾ ವಿ. ವಾಗ್ಲಿಯೇರಿ

ಏಕ ದೈವದ ಕುರಿತು ಸಾಕ್ಷ್ಯನುಡಿ ಅಲ್ಲದೆ ಉಪವಾಸ, ಝಕಾತ್ ಎಂಬ ದಾನ ಮತ್ತು ಹಜ್ ಯಾತ್ರೆ-ಇವು ಇಸ್ಲಾಮಿನ ಆಧಾರಸ್ತಂಭಗಳಾಗಿವೆ. ಈ ಕರ್ಮಾನುಷ್ಠಾನಗಳ ಕುರಿತು ಕೇವಲ ಬಾಹ್ಯವಾಗಿ ಮಾತ್ರ ಪರ್ಯಾಲೋಚಿಸುವುದು ಚಿಪ್ಪಿನೊಳಗೆ ಅಮೂಲ್ಯವಾದ ಮುತ್ತುಗಳು ಇವೆಯೆಂದು ಗ್ರಹಿಸದೆ ಬರೇ ಚಿಪ್ಪನ್ನು ಮೆಚ್ಚುಗೆಯಿಂದ ವರ್ಣಿಸುವುದಕ್ಕೆ ಸಮಾನವಾಗಿದೆ. ಪ್ರತಿಯೊಂದು ಕರ್ಮವನ್ನು ಆಳವಾಗಿ ಪರಿಶೀಲಿಸಿದರೆ ಅದರಲ್ಲಿ ಅಡಕವಾಗಿರುವ ಯಾವ ರಹಸ್ಯವು ವಿಶ್ವಾಸಿಯ ಆತ್ಮವನ್ನು ಪರಿಶುದ್ಧಗೊಳಿಸಿ ದೇವರ ಕಡೆಗೆ ಕ್ರಮೇಣ ಮೇಲಕ್ಕೊಯ್ಯುತ್ತದೆಯೆಂಬುದನ್ನು ಕಂಡುಹಿಡಿಯಬಹುದು. ದೇವರ ಮಹತ್ವವನ್ನು ವ್ಯಕ್ತಗೊಳಿಸುವುದು ಮತ್ತು ದೇವರ ಅನುಗ್ರಹಗಳಿಗಾಗಿ ಕೃತಜ್ಞತಾಭಾವನೆ ತೋರಿಸುವುದು-ಇವೆರಡು ಉದ್ದೇಶಗಳಿಗಾಗಿ ಈ ಕರ್ಮಾನುಷ್ಠಾನಗಳು ರೂಪಿಸಲ್ಪಟ್ಟಿವೆಯೆಂದು ಇವುಗಳ ಕುರಿತು ಪರಿಶೀಲನೆ ನಡೆಸಿದರೆ ತಿಳಿಯುತ್ತದೆ.

ಪ್ರಾರ್ಥನೆಗೆ ಸಮಯವಾಯಿತೆಂಬ ಕರೆ ವಿವಿಧ ಕಾರ್ಯಗಳಲ್ಲಿ ನಿರತರಾದವರೆಲ್ಲರನ್ನೂ ದೇವರ ಸ್ಮರಣೆಗೈಯುವ ತಮ್ಮ ಪ್ರಥಮ ಧಾರ್ಮಿಕ ಕಾರ್ಯದ ಕುರಿತು ಎಚ್ಚರಗೊಳಿಸುತ್ತದೆ. ಪ್ರಾರ್ಥನಾ ವಿಧಿಯು ದೇವರ ಸ್ತುತಿಯೊಂದಿಗೆ ಪ್ರಾರಂಭಿಸಲ್ಪಟ್ಟು ದೇವರಿಗೆ ತಮ್ಮ ವಂದನೆ ಸಮರ್ಪಿಸುವುದರಲ್ಲಿ ಮುಕ್ತಾಯ ಹೊಂದುತ್ತದೆ. ದೇವರ ಸನ್ನಿಧಿಯಲ್ಲಿ ಅವರಿಗೆ ಸಮಾಧಾನ ದೊರೆಯುತ್ತದೆ. ಅತಿ ವಿನಯವನ್ನು ಪ್ರಕಟಿಸುತ್ತಾ ಅವರು ತಮ್ಮ ಹಣೆಗಳನ್ನು ನೆಲಕ್ಕೆ ತಾಗಿಸಿ ದೇವರಿಗೆ ತಮ್ಮ ಪರಿಪೂರ್ಣ ಸಮರ್ಪಣೆಯನ್ನು ವ್ಯಕ್ತಗೊಳಿಸುತ್ತಾರೆ. ಪ್ರಾರ್ಥನೆಯ ವಚನಗಳೂ ಶಾರೀರಿಕ ವಿನ್ಯಾಸಗಳೂ ಅರ್ಥಭರಿತವಾಗಿದ್ದು ಸಾಧಾರಣ ಮನುಷ್ಯರೂ ಗ್ರಹಿಸಲು ಅಸಾಧ್ಯವಾಗುವಷ್ಟು ಗಹನವಾಗಿಲ್ಲ. ಆದರೆ ಇವುಗಳ ಕುರಿತು ವಿಶದವಾಗಿ ವಿವರಿಸಲು ಇಲ್ಲಿ ಸಾಧ್ಯವಿಲ್ಲ. ವಿವಿಧ ವಚನಗಳನ್ನು ಅನುಸರಿಸಿ ಶಿಸ್ತಿನಿಂದ ಮಾಡುವ ವಿವಿಧ ಶಾರೀರಿಕ ಭಂಗಿಗಳು ಪ್ರಾರ್ಥಿಸುವವನ ಆಲೋಚನೆಗಳು ಶಾರೀರಿಕ ಪರಿಸರದಿಂದ ದೂರಸರಿದು ದೇವರಿಗೆ ಭಕ್ತಿಯನ್ನೂ ದೇವರ ಅನುಗ್ರಹಗಳಿಗೆ ಕೃತಜ್ಞತೆಯನ್ನೂ ಬಹಳ ಗಾಢವಾಗಿ ಸೂಚಿಸುವಂತೆ ಮಾಡುತ್ತದೆ. ಮಕ್ಕಾ ನಗರಕ್ಕೆ ಅಭಿಮುಖವಾಗಿ ಪ್ರಾರ್ಥಿಸುವುದರಿಂದ ಏಕ ದೇವಾರಾಧನೆಯಲ್ಲಿ ಒಂದುಗೂಡಿದ ಮುಸ್ಲಿಮರೆಲ್ಲರೂ ಈ ಚೈತನ್ಯಮಯವಾದ ಧರ್ಮದ ಜನ್ಮಸ್ಥಳವಾದ ಮತ್ತು ಸದಾಕಾಲ ವಿಶ್ವಾಸಿಗಳ ಧಾರ್ಮಿಕ ಭಾವನೆಗಳಿಗೆ ಕೇಂದ್ರ ಬಿಂದುವಾದ ಈ ಪವಿತ್ರ ಸ್ಥಳದ ಕುರಿತು ಸದಾಕಾಲ ಸ್ಮರಿಸುತ್ತಿರುವಂತೆ ಮಾಡುತ್ತದೆ.

ಪ್ರಾರ್ಥನೆ ನೈತಿಕೋನ್ನತಿಗೆ ಮತ್ತು ಹೃದಯ ಶುದ್ಧಿಗೆ ಬಹಳ ಸಹಕಾರಿಯೆಂದು ಖುರ್‌ಆನ್ ಸೂಚಿಸುತ್ತದೆ:

"ನಿನಗೆ ಈ ಗ್ರಂಥದಿಂದ ಅವತೀರ್ಣವಾದುದನ್ನು ಓದು. ಪ್ರಾರ್ಥನೆಯನ್ನು ಸಹ ಮಾಡು. ಪ್ರಾರ್ಥನೆ ಅಶ್ಲೀಲತೆಯಿಂದಲೂ ದುಷ್ಕರ್ಮಗಳಿಂದಲೂ ತಡೆಯುತ್ತದೆ. ದೇವರ ಧ್ಯಾನವು ಎಲ್ಲಾ ಕೃತ್ಯಗಳಿಗಿಂತಲೂ ಶ್ರೇಷ್ಠವಾಗಿದೆ. ನೀವು ಮಾಡುವುದನ್ನೆಲ್ಲಾ ದೇವರು ತಿಳಿದಿರುವನು." (ಖುರ್‌ಆನ್ 29:46).

ಬಾಹ್ಯಾಚರಣೆ ಮಾತ್ರವಿರುವ ಒಂದು ಧಾರ್ಮಿಕ ಕರ್ಮವನ್ನು ದೇವರು ಪರಿಗಣಿಸುವುದಿಲ್ಲ. ಹೃತ್ಪೂರ್ವಕವಾದ ಪ್ರಾಮಾಣಿಕ ಭಕ್ತಿಶ್ರದ್ಧಾದಿಗಳನ್ನು ದೇವರು ಮೆಚ್ಚುತ್ತಾನೆ. ಇದು ಖುರ್‌ಆನಿನಲ್ಲಿ ಸ್ಪಷ್ಟವಾಗಿ ಈ ರೀತಿ ನಿರೂಪಿಸಲ್ಪಟ್ಟಿದೆ:—

"(ಬಲಿಯರ್ಪಿಸಲ್ಪಟ್ಟ ಮೃಗಗಳ) ಮಾಂಸವಾಗಲೀ ರಕ್ತವಾಗಲೀ ದೇವರಿಗೆ ಖಂಡಿತವಾಗಿಯೂ ತಲುಪುವುದಿಲ್ಲ. ಆದರೆ ನಿಮ್ಮ ಭಕ್ತಿ ಮಾತ್ರ ಅವನಿಗೆ ತಲುಪುತ್ತದೆ." (ಖುರ್‌ಆನ್ 22:38)

ಈ ವಿಷಯದ ಕುರಿತು ವಿವರಿಸುವ ಪೈಗಂಬರ ವಚನಗಳು ಹಲವಾರು ಇವೆ. ಒಂದು ವಚನ ಈರೀತಿ

ಯಾಗಿದೆ:—"ಮದೀನದ ಈ ಮಸೀದಿಯಲ್ಲಿ ಮಾಡುವ ಪ್ರಾರ್ಥನೆ (ಮಕ್ಕಾದ ಕಾಬಾ ಮಂದಿರದಲ್ಲಿ ಮಾಡುವ ಪ್ರಾರ್ಥನೆಯೊಂದನ್ನು ಬಿಟ್ಟರೆ) ಬೇರೆ ಎಲ್ಲಾ ಮಸೀದಿಗಳಲ್ಲಿ ಮಾಡುವ ಒಂದು ಸಾವಿರ ಪ್ರಾರ್ಥನೆಗಳಿಗಿಂತ ಹೆಚ್ಚು ಮೌಲ್ಯವುಳ್ಳದ್ದಾಗಿದೆ. ಆದರೆ ಮಕ್ಕಾದ ಕಾಬಾದಲ್ಲಿ ಮಾಡುವ ಪ್ರಾರ್ಥನೆ ಬೇರೆ ಮಸೀದಿಗಳಲ್ಲಿ ಮಾಡುವ ಒಂದು ಲಕ್ಷ ಪ್ರಾರ್ಥನೆಗಳಿಗಿಂತ ಹೆಚ್ಚು ಮಹತ್ವದ್ದಾಗಿದೆ. ಆದರೆ ತನ್ನ ಸ್ವಂತ ಮನೆಯಲ್ಲಿ ದೇವರಲ್ಲದೆ ಹೊರಗಿನವರು ಯಾರೂ ಕಾಣದಿರುವಾಗ ದೇವರ ಪ್ರೀತಿಯನ್ನು ಮಾತ್ರ ಗಳಿಸುವ ಇಚ್ಛೆಯಿಂದ ಮಾಡುವ ಪ್ರಾರ್ಥನೆ ಎಲ್ಲದಕ್ಕಿಂತ ಮಹತ್ವದ್ದಾಗಿದೆ."

ಮುಸ್ಲಿಮರು ಪ್ರಾರ್ಥನೆಯನ್ನು ಮಸೀದಿಯಲ್ಲಿಯೇ ಮಾಡಬೇಕೆಂದಿಲ್ಲ. ಭೂಮಿಯ ಯಾವುದೇ ನಿರ್ಮಲವಾದ ಸ್ಥಳವು ದೇವರಿಗ ಸಮೀಪವೂ ಪ್ರಾರ್ಥನೆಗೆ ಯೋಗ್ಯವೂ ಆಗಿದೆ. ಪುರೋಹಿತರಾಗಲೀ, ಬಲಿಯರ್ಪಣೆಯಾಗಲೀ ಅಥವಾ ವೈಭವಪೂರಿತ ಆಚರಣೆಯಾಗಲೀ ಮಾನವನ ಹೃದಯವನ್ನು ಸೃಷ್ಟಿಕರ್ತನೆಡೆಗೆತ್ತಲು ಅವಶ್ಯಕವಲ್ಲ.

ಪ್ರಾರ್ಥನೆ ಸರಿಯಾಗಿರಲು ಒಂದೇ ಒಂದು ನಿಬಂಧನೆ ಇದೆ - ಶರೀರ ಶುದ್ಧಿಯೇ ಈ ನಿಬಂಧನೆಯಾಗಿದೆ. ಇದರಲ್ಲಿ ಆತ್ಮಪರಿಶುದ್ಧಿ, ಉಡುಗೆತೊಡುಗೆಗಳ ನೈರ್ಮಲ್ಯ ಮತ್ತು ಪ್ರಾರ್ಥನೆಯ ಸ್ಥಳದ ನಿರ್ಮಾಲಿನ್ಯ ಅಡಕವಾಗಿವೆ. ಹಿಂದಿನ ಕಾಲದಲ್ಲಿ ಪ್ರಾರ್ಥನಾ ಪೂರ್ವದಲ್ಲಿ ಮಾಡಲಾಗುತ್ತಿದ್ದ ನೈರ್ಮಲ್ಯವಿಧಿಗಳನ್ನು ಇಸ್ಲಾಮ್ ಸ್ವೀಕರಿಸಿತು. ಆದರೆ ನೈರ್ಮಲ್ಯ ವಿಧಿಗಳ ಮತ್ತು ಪ್ರಾರ್ಥನಾ ವಿಧಿಗಳ ಪರಿಧಿಯನ್ನು ಮುಹಮ್ಮದ್ ಪೈಗಂಬರರ ಆಚರಣೆಗಳನ್ನನುಸರಿಸಿ ಸೀಮಿತಗೊಳಿಸಿತು. ಖುರ್‌ಆನ್ ಈ ಧಾರ್ಮಿಕ ಕರ್ಮಗಳ ಕುರಿತು ವಿಶಿಷ್ಟವಾದ ನಿಯಮಗಳನ್ನು ರೂಪಿಸಿಲ್ಲ. ಇದೇ ಕಾರಣದಿಂದ ಸುಪ್ರಸಿದ್ಧ ಲೇಖಕರಾದ ಅಮೀರ್ ಅಲಿ ಇಸ್ಲಾಮಿನ ಧಾರ್ಮಿಕ ಕರ್ಮಗಳ ಆಶ್ಚರ್ಯಕರವಾದ ಸರಳತೆ ಮತ್ತು ಶ್ರೇಷ್ಠತೆಯನ್ನು ವರ್ಣಿಸುತ್ತಾ ಅತ್ಯುನ್ನತ ಆಧ್ಯಾತ್ಮಿಕ ಕರ್ಮಗಳ ಆಚರಣೆಯಲ್ಲೂ ಖುರ್‌ಆನ್ ಅತ್ಯಧಿಕ ಸ್ವಾತಂತ್ರ್ಯವನ್ನು ನೀಡುತ್ತದೆಯೆಂದು ಹೇಳಿರುವರು.

ಶುಕ್ರವಾರದ ಪ್ರಾರ್ಥನೆ ಮತ್ತು ಪ್ರವಚನ ಪ್ರತ್ಯೇಕ ಉಪಯುಕ್ತತೆಯನ್ನೂ ಮಹತ್ವವನ್ನೂ ಹೊಂದಿದೆ. ಎಲ್ಲಾ ಮುಸ್ಲಿಮರನ್ನು ದೇವರ ಸಾನ್ನಿಧ್ಯದಲ್ಲಿ ವಿನೀತಭಾವನೆಯಿಂದ ಒಂದುಗೂಡುವಂತೆ ಮಾಡಿ ಅವರೆಲ್ಲರೂ ಒಬ್ಬನೇ ದೇವರ ಸೃಷ್ಟಿಯೆಂದೂ ಆದುದರಿಂದ ಸಹೋದರರೆಂದೂ ಅವರು ದೃಢ ವಿಶ್ವಾಸಗೊಳ್ಳುವಂತೆ ಇದು ಮಾಡುತ್ತದೆ. ಪ್ರಾರ್ಥನೆ ನಡೆಸುವ ಮುಂದಾಳುವಾದ ಇಮಾಮರನ್ನು ಅನುಸರಿಸಬೇಕೆಂಬ ನಿಯಮವು ಅವರಲ್ಲಿ ಅನುಸರಣೆಯ ಭಾವನೆಯನ್ನೂ ಶಿಸ್ತನ್ನೂ ಉಂಟುಮಾಡುತ್ತದೆ. ಪ್ರವಚನದ ಮೂಲಕ ಇಮಾಮ್ ಭಕ್ತರ ಹೃದಯವನ್ನು ತೆರೆದು ಅವುಗಳನ್ನು ದೇವರ ಸಾನ್ನಿಧ್ಯಕ್ಕೇರಿಸುತ್ತಾರೆ.

**ಉಪವಾಸಾಚರಣೆ** ಇಸ್ಲಾಮಿನ ಇನ್ನೊಂದು ಆಧಾರಸ್ತಂಭವಾಗಿದೆ. ರಮ್‌ಜಾನ್ ತಿಂಗಳಲ್ಲಿ ಹಗಲು ಹೊತ್ತು ತಿನ್ನುವುದು, ಕುಡಿಯುವುದು, ಹೊಗೆಬತ್ತಿ ಸೇದುವುದು ಮತ್ತು ಲೈಂಗಿಕ ಕ್ರಿಯೆಗಳನ್ನು ಮಾಡುವುದು ನಿಷಿದ್ಧವಾಗಿದೆ. ಇದು ಶಿಸ್ತು, ದಯೆ ಮತ್ತು ಅನುಕಂಪದ ಆಚರಣೆಯಾಗಿದೆ. ಶಾರೀರಿಕ ಸುಖ ಸಾಮಾಗ್ರಿಗಳನ್ನು ಒಬ್ಬ ವಿಶ್ವಾಸಿ ಒಂದು ನಿಶ್ಚಿತ ಕಾಲ ತ್ಯಜಿಸುವುದನ್ನು ಇದು ನಿರ್ಬಂಧಿಸುತ್ತದೆ. ಇದು ಮನೋವಿಕಾರಗಳನ್ನು ನಿಯಂತ್ರಿಸುವುದನ್ನು ಕಲಿಸುತ್ತದೆ. ಹಸಿದಿರುವಂತೆ ನಿರ್ಬಂಧಿಸಿ ಹಸಿವೆಯ ನೋವನ್ನು ಗ್ರಹಿಸುವಂತೆ ಮಾಡಿ ಬಡವರು ಮತ್ತು ನಿರ್ಗತಿಕರ ಕುರಿತು ಆತನು ಅನುಕಂಪ ಸೂಚಿಸುವಂತೆ ಇದು ಮಾಡುತ್ತದೆ. ತನಗೆ ದೇವರು ನೀಡಿರುವುದರ ಮಹತ್ವವನ್ನು ಮನಗಂಡು ಆತನು ದೇವರಿಗೆ ಹೆಚ್ಚಿನ ಕೃತಜ್ಞತೆ ಸೂಚಿಸುವಂತೆ ಇದು ಮಾಡುತ್ತದೆ. ಆರೋಗ್ಯವಂತರಿಗೆ ಉಪವಾಸವು ನಿರ್ಬಂಧಿತವಾಗಿದೆ. ಬಲಹೀನರೂ, ರೋಗಿಗಳೂ, ಯಾತ್ರಿಕರೂ, ಧರ್ಮಯುದ್ಧನಿರತರೂ, ರಜಸ್ವಲೆಯರಾದ ಸ್ತ್ರೀಯರೂ, ಗರ್ಭಿಣಿಯರೂ, ಮೊಲೆಹಾಲುಣಿಸುತ್ತಿರುವ ಸ್ತ್ರೀಯರೂ ಉಪವಾಸ ಮಾಡಬೇಕೆಂದಿಲ್ಲ. ದೇವರು ತನ್ನ ಸೃಷ್ಟಿಗಳೊಡನೆ ಕ್ರೂರವಾಗಿ ವರ್ತಿಸುವುದಿಲ್ಲ. ಅವರ ಸಾಮರ್ಥ್ಯಕ್ಕಿಂತ ಹೆಚ್ಚಿನ ಭಕ್ತಿ ಪ್ರದರ್ಶನವನ್ನು ಆತನು ಇಚ್ಛಿಸುವುದಿಲ್ಲ.

ಎಲ್ಲಾ ಧರ್ಮಗಳು ದಾನದ ಮಹತ್ತಾದ ನೈತಿಕ ಮತ್ತು ಸಾಮಾಜಿಕ ಪ್ರಾಧಾನ್ಯತೆಯನ್ನು ಸ್ವಲ್ಪಮಟ್ಟಿಗೆ

ಅಂಗೀಕರಿಸಿ ಅದರ ಮೂಲಕ ಔದಾರ್ಯ ಪ್ರದರ್ಶನ ಮಾಡಬೇಕೆಂದೂ ಅದು ದೈವಾನುಗ್ರಹ ಗಳಿಸಲಿಕ್ಕಾಗಿ ರುವ ಯೋಗ್ಯ ದಾರಿಯೆಂದೂ ಸೂಚಿಸಿವೆ. ಆದರೆ ದಾನವನ್ನು ನಿರ್ಬಂಧಗೊಳಿಸುವಂತಹ ಮಹತ್ವಾದ ಕಾರ್ಯವನ್ನು ಇಸ್ಲಾಮ್ ಧರ್ಮ ಮಾತ್ರ ಕೈಗೊಂಡು ಯೇಸುಕ್ರಿಸ್ತರು ಉಪದೇಶಿಸಿದ ದಾನದ ಮಹಾತ್ಮೆ ಯನ್ನು ಕಾರ್ಯರೂಪಕ್ಕಿಳಿಸಿದೆ. ಪ್ರತಿಯೋರ್ವ ಮುಸ್ಲಿಮನು ತನ್ನ ಸಂಪತ್ತಿನ ಒಂದು ಭಾಗವನ್ನು ಬಡ ವರಿಗೂ ನಿರ್ಗತಿಕರಿಗೂ ದಾರಿಹೋಕರಿಗೂ ಅಪರಿಚಿತ ರಿಗೂ ನೀಡುವಂತೆ ನಿರ್ಬಂಧಿಸಲಾಗಿದೆ. ಈ ಧಾರ್ಮಿಕ ಕರ್ತವ್ಯದ ನಿರ್ವಹಣೆಯಲ್ಲಿ ಆತನಿಗೆ ಮಾನವೀಯತೆಯ ಕುರಿತು ಅಗಾಧವಾದ ಸಹಾನುಭೂತಿಯುಂಟಾಗಿ ಆತನ ಆತ್ಮವು ಕೃಪಣತ್ವದಿಂದ ಪರಿಶುದ್ಧಗೊಂಡು ದೈವಿಕ ಅನು ಗ್ರಹಗಳ ಕುರಿತು ಆಶೆಹೊಂದುವಂತೆ ಮಾಡುತ್ತದೆ.

ಪ್ರತಿಯೊಬ್ಬ ಮುಸ್ಲಿಮ್ ಕೆಲವು ನಿಬಂಧನೆಗಳು ಪೂರ್ತಿಗೊಂಡರೆ ತನ್ನ ಜೀವಿತ ಕಾಲದಲ್ಲೊಮ್ಮೆಯಾ ದರೂ ಹಜ್‌ಯಾತ್ರೆ ಕೈಗೊಳ್ಳಬೇಕೆಂಬ ನಿರ್ಬಂಧವಿದೆ. ಈ ಆಜ್ಞೆಯಲ್ಲಡಗಿರುವ ಅಗಾಧವಾದ ಉದ್ದೇಶಗಳೆಲ್ಲಾ ಮನುಷ್ಯನ ಮನಸ್ಸಿಗೆ ಸುಲಭಗ್ರಾಹ್ಯವಲ್ಲ. ಆದರೆ ಸುಲ ಭವಾಗಿ ತಿಳಿಯಬಹುದಾದ ಸಂಗತಿಗಳೆಲ್ಲಾ ಪರಿಪೂರ್ಣ ವಿವೇಕವನ್ನು ಸೂಚಿಸುತ್ತವೆ. ಪ್ರಪಂಚದ ಎಲ್ಲಾ ಪ್ರದೇಶಗಳಿಂದ ಬಂದು ಸೇರುವ ಮುಸ್ಲಿಮರ ವಾರ್ಷಿಕ ಸಮ್ಮೇಳನದಿಂದ ಇಸ್ಲಾಮಿಗೆ ಉಂಟಾಗುವ ಪ್ರಯೋಜ ನಗಳು ಅಪಾರ. ಅರಬಿಗಳೂ, ಪರ್ಶಿಯಾದವರೂ, ಅಫ ಘಾನಿಸ್ಥಾನದವರೂ, ಭಾರತೀಯರೂ, ಮಲಯಾ ದೇಶದವರೂ, ಆಫ್ರಿಕದವರೂ, ಸೂಡಾನಿನವರೂ ಮತ್ತು ಇತರರೂ ಮಕ್ಕಾದ ಪವಿತ್ರ ದೇವಾಲಯದಲ್ಲಿ ದಯಾಮಯನಾದ ದೇವರಿಂದ ಕ್ಷಮಾಪಣೆ ಕೇಳುವ ಏಕೋದ್ದೇಶದಿಂದ ಒಟ್ಟಿಗೆ ಸೇರುತ್ತಾರೆ. ಈ ಉದ್ದೇಶ ದಿಂದ ಆ ಸ್ಥಳದಲ್ಲಿ ಸಮ್ಮೇಳಿಸುವ ಮುಸ್ಲಿಮರು ಪರಸ್ಪರ ಪರಿಚಿತರಾಗಿ ಪ್ರೇಮದ ಮತ್ತು ಭ್ರಾತೃ ಭಾವದ ಹೊಸ ಸಂಬಂಧ ಸ್ಥಾಪಿಸುತ್ತಾರೆ.

ಒಬ್ಬ ಮುಸ್ಲಿಮನ ಜೀವಿತದಲ್ಲಿ ಒಮ್ಮೆಯಾ ದರೂ ಆತನ ಮತ್ತು ಇತರ ಮುಸ್ಲಿಮರ ಮಧ್ಯವಿರುವ ಸ್ಥಾನಭಿನ್ನತೆ ನಿವಾರಿಸಲ್ಪಡುತ್ತದೆ. ಆ ಸಮಯದಲ್ಲಿ ಐಶ್ವರ್ಯವಂತರೂ, ಬಡವರೂ, ರಾಜರೂ, ಭಿಕ್ಷುಕರೂ ಸಮಾನರಾಗುತ್ತಾರೆ. ಹಜ್ ಸಮಯದ ಪವಿತ್ರ ಸಮಾರಂಭಗಳಲ್ಲಿ ಎಲ್ಲರೂ ಒಂದೇರೀತಿಯ ಸರಳ ಉಡುಪನ್ನು ಧರಿಸುತ್ತಾರೆ; ಎಲ್ಲರೂ ತಮ್ಮ ಸ್ವಂತ ಆಡಂಭರದ ಅಲಂಕಾರ ವಸ್ತುಗಳನ್ನು ತ್ಯಜಿಸುತ್ತಾರೆ; ಪ್ರತಿಯೊಬ್ಬನ ಬಾಯಿಯಿಂದ ಅಲ್ಲಾಹು ಅಕ್ಬರ್ (ದೇವರು ದೊಡ್ಡವನು) ಎಂಬ ಧ್ವನಿ ಹೊರಡುತ್ತಾ ಇರುತ್ತದೆ. ಹಜ್ ಯಾತ್ರಿಕರು ಪೂರೈಸಬೇಕಾದ ಇತರ ಧಾರ್ಮಿಕ ಕಾರ್ಯಗಳಾದ ಕಾಬಾ ದೇವಾಲಯದ ಸುತ್ತಲೂ ಮಾಡುವ ಪ್ರದಕ್ಷಿಣೆ, ಅರಾಫತ್ ಹತ್ತಿರ ಎಲ್ಲರೂ ಜೊತೆ ಸೇರುವುದು, ಮಿನಾದಲ್ಲಿ ನಡೆಸಲಾ ಗುವ ಮೃಗಬಲಿ-ಇವೆಲ್ಲಾ ಯಾತ್ರಿಕನ ಮನಸ್ಸಿನಲ್ಲಿ ಹಿಂದೆ ಗತಿಸಿಹೋದ ಮಹಾತ್ಮರಾದ ಪ್ರವಾದಿಗಳ ಮತ್ತು ಹಿರಿಯರ ನೆನಪು ಉಂಟಾಗುವಂತೆ ಮಾಡುತ್ತವೆ. ಪರಿ ಶುದ್ಧ ಮತದ ಸ್ಥಾಪಕರಾದ ಇಬ್ರಾಹಿಂ ಪ್ರವಾದಿ, ಅವರ ಪುತ್ರ ಇಸ್ಮಾಯಿಲ್ ಮತ್ತು ಪತ್ನಿ ಹಾಜಿರಾರವರ ಜೀವನದ ವಿವಿಧ ಘಟನೆಗಳು ಆಗ ಯಾತ್ರಿಕನ ನೆನಪಿನ ಪಟಲದಲ್ಲಿ ಸಜೀವವಾಗುತ್ತವೆ. ಅವರನ್ನೆಲ್ಲಾ ಅನು ಸರಿಸುವ ಆಸೆಯು ಯಾತ್ರಿಕನ ಹೃದಯದಲ್ಲಿ ತಲೆದೋರಿ ದೇವರಿಗೆ ಶರಣು ಹೋಗುವುದರಲ್ಲಿಯೂ ಅವರನ್ನು ಅನುಸರಿಸುವಂತೆ ಮಾಡುವುದು.

ಹಜ್ ಯಾತ್ರೆಗೆ ವಿಧಿಸಿದ ನಿಬಂಧನೆಗಳು ಅತ್ಯಂತ ಬುದ್ಧಿಪೂರ್ವಕವಾಗಿವೆಯೆಂಬುದು ವ್ಯಕ್ತ. ಹಜ್ ಯಾತ್ರೆ ಕೈಗೊಳ್ಳುವವನು ಪೂರ್ಣವಾಗಿ ಸ್ವತಂತ್ರನಾಗಿರ ಬೇಕೆಂದೂ ಯಾತ್ರೆಯ ವೆಚ್ಚವನ್ನು ವಹಿಸಲು ಸಮರ್ಥ ನಾಗಿರಬೇಕೆಂದೂ, ಆತನನ್ನು ಹೊಂದಿಕೊಂಡಿರುವವರ ಸಂರಕ್ಷಣೆಯನ್ನು ಯಾತ್ರೆಯ ಕಾಲದಲ್ಲಿಯೂ ಕೈಗೊ ಳ್ಳಲು ಸಮರ್ಥನಾಗಿರಬೇಕೆಂದೂ ಯಾತ್ರಾ ಮಾರ್ಗದಲ್ಲಿ ಯಾವುದೇ ಅಡ್ಡಿ ಅಡಚಣೆಗಳಿರಬಾರದೆಂದೂ, ಯಾತ್ರೆ ಯು ನಿರ್ವಹಿಸಲು ಸಾಧ್ಯವಿರಬೇಕೆಂದೂ ಇಸ್ಲಾಮ್ ವಿಧಿಸುತ್ತದೆ.

ಒಟ್ಟಾರೆ ಹೇಳುವುದಾದರೆ, ಮನುಷ್ಯನಿಗೆ ನಿರ್ವ ಹಿಸಲು ಅಸಾಧ್ಯವಾದ ಯಾವುದೇ ನಿಯಮ ಸಂಹಿತೆ ಯನ್ನು ದೇವರು ವಿಶ್ವಾಸಿಗಳ ಮೇಲೆ ಹೇರಿಲ್ಲ. ಯಾವು ದೇ ಬದಲಾವಣೆಗೆ ಸಾಧ್ಯವಿಲ್ಲದ ಕಠಿಣ ನಿಯಮಗಳನ್ನು ದೇವರು ನಿಶ್ಚಯಿಸಿಲ್ಲ. ಖುರ್‌ಆನ್ ಈ ರೀತಿ ಹೇಳು ತ್ತದೆ:

# ಏಸುವು ಕೊನೆಯ ದಿನಗಳನ್ನು ಭಾರತದಲ್ಲಿ ಕಳೆದನೇ!

—ಶ್ರೀ ಪಾಂಡುರಂಗರಾವ್ ಕುಡತರಕರ, ಬೆಳಗಾಂವಿ.

ಇದೊಂದು ಇತಿಹಾಸ. ಶಿಲುಬೆಗೇರಿಸಲ್ಪಟ್ಟ ಏಸು ಕ್ರಿಸ್ತನು ಬದುಕಿ ಭಾರತಕ್ಕೆ ಬಂದನೆಂಬುದು ಭಾರತೀಯ ಪ್ರೊಫೆಸರರೊಬ್ಬರ ವಾದ.

ಶ್ರೀನಗರದಲ್ಲೊಂದು ಸಮಾಧಿಯಿದೆ. ಅದರ ಮೇಲೆ ಯಾವುದೇ ಕೆತ್ತನೆಯಿಲ್ಲ. ಅದರೊಳಗೆ ದೇವ ದೂತನೊಬ್ಬನ ಬೂದಿಯಿದೆ. 1800 ವರ್ಷಗಳ ಹಿಂದೆಯೇ ಅಸು ನೀಗಿದ ಆತನ ಹೆಸರು ಜಸ್ ಅಸಫ್.

ಜಸ್ ಅಸಫ್ ಯಾರೆಂಬುದು ಅನೇಕರಿಗೆ ಗೊತ್ತಿಲ್ಲ. ಆದರೆ ಬರಿಗಾಲಿನಿಂದ ಸಮಾಧಿಗೆ ಭೇಟಿ ನೀಡುವ ಹಲವಾರು ಯಾತ್ರಿಕರು, ಅದು ಜೀಸಸ್ ಕ್ರಿಸ್ತನ ಸಮಾಧಿಯೆಂದು ನಂಬಿದ್ದಾರೆ. ಜಸ್ ಅಸಫನೇ ಜೀಸಸ್ ಕ್ರಿಸ್ತ ಎಂಬುದು ಅವರ ಹೇಳಿಕೆ.

ಇದು ಕಾಶ್ಮೀರದ ದಂತ ಕತೆಯೆಂದಾಗಲೀ ಹಳ್ಳಿಯ ಜನರ ಮೂಢ ನಂಬಿಕೆಯೆಂದಾಗಲೀ ನಾವು ಉಪೇಕ್ಷಿಸುವಂತಿಲ್ಲ. ಯಾಕೆಂದರೆ ಡಾ॥ ಎಫ್. ಎಚ್. ಹಸನೇನ್ ಎಂಬವರು ಜಸ್ ಅಸಫನೇ ಜೀಸಸ್ ಕ್ರಿಸ್ತ ಎಂದು ಘಂಟಾಘೋಷವಾಗಿ ಹೇಳುತ್ತಿದ್ದಾರೆ. ಡಾ॥ ಹಸನೇನ್ ಕಾಶ್ಮೀರ ವಿಶ್ವ ವಿದ್ಯಾನಿಲಯದ ಇತಿಹಾಸ ವಿಭಾಗದ ಮುಖ್ಯಸ್ಥರಾಗಿದ್ದು ಪ್ರಾಚ್ಯ ವಸ್ತು ಸಂಶೋಧನಾ ತಜ್ಞರೆನಿಸಿದ್ದಾರೆ. ಹಲವಾರು ವರ್ಷಗಳ ಸಂಶೋಧನೆಯ ನಂತರ ತಾವು ಈ ನಿರ್ಧಾರಕ್ಕೆ ಬಂದಿರುವುದಾಗಿ ಹೇಳುತ್ತಾರೆ.

ಜೀಸಸ್ ಕ್ರಿಸ್ತನನ್ನು ಶಿಲುಬೆಯಿಂದ ಕೆಳಗೆ ಇಳಿಸಿದಾಗ ಅವರ ಪ್ರಾಣ ಪಕ್ಷಿಯೇ ಹಾರಲಿಲ್ಲವಂತೆ. ಆಗ ಅವರಿಗೆ ಸರಿಯಾದ ಚಿಕಿತ್ಸೆ ನೀಡಿ ಗುಣಪಡಿಸಲಾಯಿತೆಂದೂ ಅವರು ಆ ನಂತರ ಪರ್ಶಿಯಾ, ಅಫಘಾನಿಸ್ತಾನ ಮಾರ್ಗವಾಗಿ ಕಾಶ್ಮೀರಕ್ಕೆ ಬಂದರೆಂದೂ ಅಲ್ಲಿ ತಮ್ಮ 115ನೇ ವಯಸ್ಸಿನಲ್ಲಿ ಅಸು ನೀಗಿದರೆಂದೂ ಡಾ॥ ಹಸನೇನ್ ಹೇಳುತ್ತಾರೆ.

ಜೀಸಸ್ ಕ್ರಿಸ್ತನನ್ನು ಶುಕ್ರವಾರ ಶಿಲುಬೆಗೇರಿಸಲಾಯಿತು. ಮುಂದೆ 9 ಗಂಟೆಗಳ ನಂತರ ಅವರ ಪ್ರಜ್ಞೆ ತಪ್ಪಿತು. ಆ ದಿನವು ಜ್ಯೂಗಳಿಗೆ ಪವಿತ್ರವಾದ ಸಬಾಥ್ ದಿನವಾದ್ದರಿಂದ ಅಂದು ಯಾರನ್ನೂ ಶಿಲುಬೆಯ ಮೇಲೆಯೇ ಬಿಡಲು ಜ್ಯೂಗಳು ಒಪ್ಪಲಿಲ್ಲ. ಆಗ ರೋಮನ್ ಸೈನಿಕನೊಬ್ಬನು ಬರ್ಚಿಯಿಂದ ಕ್ರಿಸ್ತನನ್ನು ತಿವಿದನು. ರಕ್ತ, ನೀರು ಚಿಮ್ಮಲು ಶುರು ಮಾಡಿದಾಗ ಅವನನ್ನು ಶಿಲುಬೆಯಿಂದ ಕೆಳಗಿಳಿಸಲಾಯಿತು.

ಜೋಸೆಫ್ ಹಾಗೂ ನಿಕೊಡೆಮಸ್ ಎಂಬವರು ಅವರನ್ನು ಕೆಳಗಿಳಿಸಿ ಸಮಾಧಿಯಲ್ಲಿರಿಸಿದರು. ಆದರೆ ಜೀಸಸ್ ಕ್ರಿಸ್ತ ಇನ್ನೂ ಬದುಕಿರುವನೆಂದು ತಿಳಿದಾಗ

---

(15ನೇ ಪುಟದಿಂದ)

"ದೇವರು ನಿಮಗೆ ಸೌಲಭ್ಯ ಕೊಡಲು ಇಚ್ಛಿಸುತ್ತಾನೆ, ನಿಮಗೆ ಕಷ್ಟ ಕೊಡಲು ಇಚ್ಛಿಸುವುದಿಲ್ಲ." (2:186)

"ನಿಮಗೆ ಯಾವುದೇ ತೊಂದರೆ ಕೊಡಬೇಕೆಂದು ದೇವರು ಇಚ್ಛಿಸುವುದಿಲ್ಲ. ನಿಮ್ಮನ್ನು ಪರಿಶುದ್ಧಗೊಳಿಸುವಂತೆಯೂ ನಿಮ್ಮ ಮೇಲೆ ಆತನ ಅನುಗ್ರಹಗಳು ಪೂರ್ಣವಾಗಿ ಸೇರಿಯುವಂತಾಗಿ ನೀವು ಕೃತಜ್ಞಾ ಭಾವವುಳ್ಳವರಾಗುವಂತೆ ನಿಮ್ಮನ್ನು ಮಾರ್ಪಡಿಸಲು ಆತನು ಇಚ್ಛಿಸುತ್ತಾನೆ. (5:7).

"ಅಲ್ಲಾಹು ಯಾವ ವ್ಯಕ್ತಿಗೂ ಹೊರಲು ಅಸಾಧ್ಯವಾದುದನ್ನು ಹೊರಿಸುವುದಿಲ್ಲ." (2:287).

"ಅಲ್ಲಾಹು ನಿಮ್ಮ ಭಾರಗಳನ್ನು ಹಗುರ ಮಾಡಲು ಇಚ್ಛಿಸುತ್ತಾನೆ. ಏಕೆಂದರೆ ಮನುಷ್ಯನು ಬಲಹೀನನಾಗಿ ಸೃಷ್ಟಿಸಲ್ಪಟ್ಟಿದ್ದಾನೆ. (4:29)

ಮೇಲಿನ ತತ್ವಗಳನ್ನು ಪೈಗಂಬರರ ಈ ಕೆಳಗಿನ ವಚನ ಸಮರ್ಥಿಸುತ್ತದೆ:

"ಈ ಧರ್ಮ ನಿಮ್ಮನ್ನು ನಿರ್ಬಂಧಿಸುವುದಿಲ್ಲ"

("An Interpretation of Islam"ನಿಂದ. ಅನುವಾದಕ: M. U. ರಶೀದ್)

ಅವರು ಗೋರಿಯ ಗಸ್ತು ಪಡೆಯುವರಿಗೆ ಲಂಚ ನೀಡಿ ಗುಟ್ಟಾಗಿ ಬೇರೆಡೆ ಕರೆದೊಯ್ದರು. ಮೂರನೆಯ ದಿನ ಕ್ರಿಸ್ತನ ತಾಯಿ ಹಾಗೂ ಮೇರಿ ಮೇಗಡಾಲಿನ್ ಅಲ್ಲಿಗೆ ಬಂದಾಗ ಗೋರಿಯು ಖಾಲಿಯಿತ್ತು.

ರೋಮನ್‌ರು ಸೌಲ್ ಎಂಬವನಿಗೆ ಶವದ ಪತ್ತೆ ಮಾಡಲು ಆಜ್ಞಾಪಿಸಿದರು. ಆತನು ಡೆಮಸ್ಕಸ್‌ನಲ್ಲಿ ಜೀಸಸ್ ಕ್ರಿಸ್ತ್ ಅವರನ್ನು ಕಂಡನಾದರೂ ಅವರ ದಿವ್ಯ ತೇಜಸ್ಸಿಗೆ ಮಾರುಹೋಗಿ ಆತನು ಅವರ ಶಿಷ್ಯನಾದನಲ್ಲದೆ ಪೌಲ್ ಎಂದು ತಮ್ಮ ಹೆಸರನ್ನು ಬದಲಿಸಿಕೊಂಡನು. ಹೀಗಾಗಿ ಸ್ವತಂತ್ರರಾದ ಜೀಸಸ್ ಕ್ರಿಸ್ತ್ ಭಾರತದತ್ತ ಪ್ರಯಾಣ ಬೆಳಸಿದರೆಂಬುದು ಡಾ॥ ಹಸನೇನ್ ಅವರ ಸಿದ್ಧಾಂತ.

ಇಸ್ರೇಲಿನಿಂದ ತಪ್ಪಿಸಿಕೊಂಡ ಕುರಿಗಳಿಗೆ ತಾವು ಉಪದೇಶ ನೀಡುವುದಾಗಿ ಜೀಸಸ್ ಕ್ರಿಸ್ತ ಮೊದಲೇ ಹೇಳಿದ್ದರು. ತಲೆ ಮರೆಸಿಕೊಂಡಿದ್ದ ಆ ಜ್ಯೂ ಜನ ಭಾರತಕ್ಕೆ ಬಂದಿದ್ದರು. ಅವರು ಭಾರತದ ಕಾಶ್ಮೀರಕ್ಕೂ ಬಂದಿದ್ದರೆಂಬುದಕ್ಕೆ ಅಲ್ಲಿಯ ಜ್ಯೂ ದೇವಾಲಯಗಳ ಭಗ್ನ ಅವಶೇಷಗಳೇ ಸಾಕ್ಷಿಯೆಂದು ಡಾ॥ ಹಸನೇನ್ ಹೇಳುತ್ತಾರೆ.

ಡಾ॥ ಹಸನೇನ್ ಇನ್ನೂ ಒಂದು ಪುರಾವೆ ನೀಡಿ ತಮ್ಮ ವಾದವನ್ನು ಸಮರ್ಥಿಸುತ್ತಾರೆ. 1417ರ ತರ್ಕಿ ಲೇಖಕನೊಬ್ಬನು ಶಿಲುಬೆಗೇರಿಸಲ್ಪಟ್ಟ ನಂತರ ಜೀಸಸ್ ಕ್ರಿಸ್ತ ಮೊದಲು ತುರ್ಕಸ್ಥಾನಕ್ಕೆ ಬಂದಿದ್ದರೆಂದು ಬರೆದಿದ್ದಾರೆ. ಅಲ್ಲಿ ಥಾಮಸ್ ಎಂಬಾತನು ಅವರ ಶಿಷ್ಯನಾದನು. ಇದೇ ಥಾಮಸ್ ಆ ನಂತರ ಭಾರತದ ಮದ್ರಾಸಿನಲ್ಲಿ ಪ್ರಾಣ ಕಳೆದುಕೊಂಡನು. ಅರ್ಥಾತ್ ಆತನು ತನ್ನ ಗುರುವಿನೊಂದಿಗೇ ಭಾರತಕ್ಕೆ ಬಂದಿದ್ದನೆಂಬುದು ಡಾ॥ ಹಸನೇನ್ ಅವರ ಊಹೆ.

ಕಾಶ್ಮೀರದ ಸಮಕಾಲೀನ ದೊರೆಯೊಬ್ಬನು ಬಿಳಿ ಬಟ್ಟೆ ಧರಿಸಿದ ತೆಳು ಚರ್ಮದ ಪವಾಡ ಪುರುಷನೊಬ್ಬನನ್ನು ತಾನು ಭೇಟಿಯಾಗಿರುವುದಾಗಿ ಹೇಳಿದ ಉಲ್ಲೇಖವಿದೆ. ಜಸ್‌ಅಸಫ್ ಎಂದಾತ ತನ್ನ ಹೆಸರು ಹೇಳಿದನಂತೆ. ಆ ವ್ಯಕ್ತಿ ಜೀಸಸ್ ಕ್ರಿಸ್ತ ಎಂಬುದು ಡಾ॥ ಹಸನೇನ್ ಅವರ ನಂಬಿಕೆ.

ಶ್ರೀನಗರದಲ್ಲಿರುವ ಜಸ್ ಆಸಫ್ ಗೋರಿಯನ್ನು ತೆರೆಯಲು ಅವಕಾಶ ನೀಡಿದರೆ ತಾವು ಇನ್ನೂ ಹೆಚ್ಚು ನಿಖರವಾಗಿ ತಮ್ಮ ವಾದವನ್ನು ಸಮರ್ಥಿಸುವುದಾಗಿ ಅವರು ಹೇಳುತ್ತಾರೆ. ಹಾಗಾದರೆ ಪಾಶ್ಚಾತ್ಯರು ಈ ಬಗ್ಗೆ ವಾದ-ವಿವಾದವನ್ನೇಕೆ ಎಬ್ಬಿಸಿಲ್ಲ? ಎಂಬ ಪ್ರಶ್ನೆಗೆ ಅವರು ಕಾಶ್ಮೀರದ ದಂತ ಕತೆಗಳ ವಿಶ್ಲೇಷಣೆ ನಡೆಯಿಸುವ ಪರಿಶ್ರಮ ತೆಗೆದುಕೊಳ್ಳದಿರುವುದೇ ಅವರ ಮೋಸಕ್ಕೆ ಕಾರಣ ಎಂದು ಡಾ॥ ಹಸನೇನ್ ಹೇಳುತ್ತಾರೆ.

(ಕೃಪೆ: "ಪ್ರಪಂಚ").


## ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

ಪುಟ: **60** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore-575001.

# ಧಾರ್ಮಿಕ ಕಾರ್ಯಕರ್ತರ ಜಾಗತಿಕ ಸಮ್ಮೇಳನದ ಕರೆ

"ಶಾಶ್ವತ ಶಾಂತಿ, ನಿರಾಯುಧೀಕರಣ ಹಾಗೂ ರಾಷ್ಟ್ರಗಳ ಮಧ್ಯೆ ನ್ಯಾಯುವಾದ ಸಂಬಂಧಗಳಿಗಾಗಿ ಇರುವ ಧಾರ್ಮಿಕ ಕಾರ್ಯಕರ್ತರ'' ಜಾಗತಿಕ ಸಮ್ಮೇಳನವು ಜೂನ್ 6ರಿಂದ 10ರ ವರೆಗೆ ಕ್ರೆಮ್ಲಿನ್ನಿಗೆ ಹಲವಾರು ನೂರು ಮೀಟರುಗಳ ವ್ಯಾಪ್ತಿಯಲ್ಲಿ ಮೋಸ್ಕ್ವಾ ನದಿ ತೀರದ ಮೇಲಣ ಮಾಸ್ಕೋದ ಭವ್ಯ ಭವನವೊಂದರಲ್ಲಿ ಜರುಗಿತು. ಇದು ಈ ವರೆಗೆ ಜರುಗಿದ ಸಮ್ಮೇಳನಗಳಲ್ಲೇ ಅತ್ಯಂತ ಪ್ರಾತಿನಿಧಿಕವಾದುದಾಗಿತ್ತು. 107 ದೇಶಗಳಿಂದ ಬಂದಿದ್ದ ಸುಮಾರು 700 ಜನ ಬೌದ್ಧ, ಹಿಂದೂ, ಯಹೂದ್ಯ, ಇಸ್ಲಾಮ್, ಷಿಂಟೊ, ಕ್ರಿಶ್ಚಿಯನ್ ಮತ್ತು ಇತರ ಧರ್ಮಗಳ ಪ್ರತಿಪಾದಕರುಗಳು ಆಧುನಿಕ ಅಂತರ ರಾಷ್ಟ್ರೀಯ ಸಂಬಂಧಗಳ ಜರೂರು ಸಮಸ್ಯೆಗಳನ್ನು ಚರ್ಚಿಸಿದರು ಹಾಗೂ ಧಾರ್ಮಿಕ ಕಾರ್ಯಕರ್ತರು ಮತ್ತು ಆಸ್ತಿಕರು ಜಾಗತಿಕ ಶಾಂತಿಗೋಸ್ಕರವಾದ, ಜನತೆಗಳ ಸುರಕ್ಷಿತತೆಯನ್ನು ಸಾಧಿಸುವುದಕ್ಕೋಸ್ಕರವಾದ ಮತ್ತು ಇಂದಿನ ಪ್ರಧಾನ ಸಮಸ್ಯೆಗಳನ್ನು ಪರಿಹರಿಸುವುದಕ್ಕೋಸ್ಕರವಾದ ಅವಿಶ್ರಾಂತ ಹೋರಾಟಕ್ಕೆ ನೀಡುತ್ತಿರುವ ಕಾಣಿಕೆಯನ್ನು ಅವರು ಶ್ಲಾಘಿಸಿದರು.

ಚರ್ಚ್‌ಗಳ ಜಾಗತಿಕ ಮಂಡಲಿ, ಪೋಪ್, ಲುತೆರನ್ ಜಾಗತಿಕ ಮಹಾಮಂಡಲಿ, ಬಾಪ್ಟಿಸ್ಟ್ ಜಾಗತಿಕ ಸ್ನೇಹ ಸಂಸ್ಥೆ, ಜಾಗತಿಕ ಮುಸ್ಲಿಮ್ ಮಹಾಸಭೆ, ಏಶಿಯುದ ಬೌದ್ಧ ಶಾಂತಿ ಸಮ್ಮೇಳನ, ಚರ್ಚ್‌ಗಳ ಅಖಿಲ ಆಫ್ರಿಕ ಸಮ್ಮೇಳನಗಳ ಪ್ರತಿನಿಧಿಗಳು, ವೀಕ್ಷಕರು ಮತ್ತು ಇತರರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಈ ಸಮ್ಮೇಳನಕ್ಕೆ ಕಳಿಸಿದ ಸಂದೇಶವೊಂದರಲ್ಲಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕರ್ಟ್‌ವಾಲ್ಡ್ಹೈಂ ಅವರು, ಇದು ಅಂತರರಾಷ್ಟ್ರೀಯ ಶಾಂತಿಯನ್ನು ಬಲಪಡಿಸುವಲ್ಲಿ ವಿಶ್ವಸಂಸ್ಥೆಯ ಚಟುವಟಿಕೆಗಳಿಗೆ ಬೆಂಬಲ ನೀಡುತ್ತಿರುವ ಒಂದು ಸರಕಾರೇತರ ಸಂಘಟನೆಯಾಗಿದೆ ಎಂದು ಶ್ಲಾಘಿಸಿದ್ದಾರೆ.

ಈ ಸಮ್ಮೇಳನವು ಎರಡು ಅಂತಿಮ ದಸ್ತಾವೇಜುಗಳನ್ನು ಅಂಗೀಕರಿಸಿತು. ಒಂದು, ''ಜಗತ್ತಿನ ಎಲ್ಲ ರಾಷ್ಟ್ರಗಳ ಸರಕಾರಗಳಿಗೆ ಮನವಿ''. ಎರಡು, "ಜಗತ್ತಿನ ಧಾರ್ಮಿಕ ಕಾರ್ಯಕರ್ತರಿಗೆ ಮತ್ತು ಆಸ್ತಿಕರಿಗೆ ಮನವಿ".

ಈ ಸಮ್ಮೇಳನವು "ಅಂತರರಾಷ್ಟ್ರೀಯ ಸೌಮನಸ್ಯವನ್ನು ಜಗತ್ತಿನಲ್ಲಿ ಶಾಂತಿ ಮತ್ತು ನ್ಯಾಯಗಳ ಸ್ಥಾಪನೆಗೆ ಅತ್ಯಾವಶ್ಯಕವಾದ ಸ್ಥಿತಿಯೆಂದು'' ಸ್ವಾಗತಿಸುತ್ತದೆಂದೂ ಹಾಗೂ ''ಸೌಮನಸ್ಯವನ್ನು ಜಗತ್ತಿನ ಎಲ್ಲ ಪ್ರದೇಶಗಳಿಗೂ ಹರಡಬೇಕು, ರಾಜಕೀಯ ಸೌಮನಸ್ಯದೊಂದಿಗೆ ಸೈನಿಕ ಮತ್ತು ಆರ್ಥಿಕ ಸೌಮನಸ್ಯವನ್ನು ಸಾಧಿಸಬೇಕು ಹಾಗೂ ಸೌಮನಸ್ಯವನ್ನು ವಿಪರ್ಯಯಗೊಳ್ಳದ ಪ್ರಕ್ರಿಯೆಯನ್ನಾಗಿಸಬೇಕು'' ಎಂದು ಎಲ್ಲ ರಾಜ್ಯಗಳಿಗೆ ಕರೆಕೊಡುತ್ತದೆಯೆಂದೂ "ಸರಕಾರಗಳಿಗೆ ಮನವಿ'' ಕುರಿತಾದ ದಸ್ತಾವೇಜಿನಲ್ಲೇ ಹೇಳಲಾಗಿದೆ. "ಮಿಲಿಟರಿ ಬಜೆಟ್ಟುಗಳಲ್ಲಿ ಕಡಿತ ಮಾಡುತ್ತ, ಶಸ್ತ್ರಾಸ್ತ್ರಗಳ ತಯಾರಿಕೆ ಮತ್ತು ಮಾರಾಟಗಳನ್ನು ತಡೆಯುತ್ತ ಹಾಗೂ ಈ ರೀತಿಯಲ್ಲಿ ಉಳಿತಾಯವಾಗುವ ಭೌತಿಕ ಮತ್ತು ಮಾನವಶಕ್ತಿ ಸಂಪನ್ಮೂಲಗಳನ್ನು ಒಳ್ಳೆಯದಕ್ಕಾಗಿ, ಇಡೀ ಮಾನವಕುಲಕ್ಕೆ ಪ್ರಯೋಜನವನ್ನು ನಿರ್ಮಿಸುವುದಕ್ಕಾಗಿ ಬಳಸುವಂತೆ ಮಾಡುತ್ತ ದೃಢ ನಿರ್ಧಾರದ ಕ್ರಮಗಳನ್ನು ಕೈಗೊಳ್ಳಬೇಕು. ಯುದ್ಧ ಮತ್ತು ಯುದ್ಧ ಸಿದ್ಧತೆಗಳು ಧಾರ್ಮಿಕ ಜಗತ್ತಿಗೆ ಪರಕೀಯವಾದುವುಗಳಾಗಿವೆ ಹಾಗೂ ಅವು ಮನುಷ್ಯನ ನೈತಿಕ ತತ್ವಗಳನ್ನು ಧ್ವಂಸಗೊಳಿಸುತ್ತವೆ'' ಎಂದು ಸಮ್ಮೇಳನವು ಎಲ್ಲ ಸರಕಾರಗಳಿಗೂ ಮನವಿ ಮಾಡಿಕೊಡುತ್ತ ಹೇಳಿದೆ.

"ಧಾರ್ಮಿಕ ಕಾರ್ಯಕರ್ತರು ಮತ್ತು ಆಸ್ತಿಕರಿಗೆ ಮನವಿ'' ಕುರಿತಾದ ದಸ್ತಾವೇಜಿನಲ್ಲಿ ಹೀಗೆ ಹೇಳಲಾಗಿದೆ: "ನಮ್ಮ ಧಾರ್ಮಿಕ ಭಿನ್ನತೆಗಳು ನಮ್ಮನ್ನು ವಿಭಜಿಸಲಾರವು. ಏಕೆಂದರೆ ನಮ್ಮ ನೈತಿಕ ಕಾಳಜಿಗಳು ಒಂದೇ ಆಗಿವೆ ಹಾಗೂ ನಾವು ಇಡೀ ಮಾನವಕುಲದ ಅದೃಷ್ಟಗಳಿಗೋಸ್ಕರವಾದ ನಮ್ಮ ಕಾಳಜಿಯಲ್ಲಿ ಒಂದೇ

ಆಧಾರವನ್ನು ಕಂಡುಕೊಂಡಿದ್ದೇವೆ". ಸಾರ್ವತ್ರಿಕ ಮತ್ತು ಸಂಪೂರ್ಣ ನಿರಾಯುಧೀಕರಣಕ್ಕೆ ಸಂಬಂಧಿಸಿದಂತೆ ಸಾರ್ವಜನಿಕಾಭಿಪ್ರಾಯವನ್ನು ರೂಪಿಸಲು ಧಾರ್ಮಿಕ ಕಾರ್ಯಕರ್ತರು ಕಾಣಿಕೆಯನ್ನು ನೀಡಬೇಕು ಎಂಬುದಾಗಿ ಆ ಮನವಿ ಪತ್ರದಲ್ಲಿ ಹೇಳಲಾಗಿದೆ.

ಮಾಸ್ಕೋ ಸಮ್ಮೇಳನದ ನಂತರ ಸುದ್ದಿಗಾರರೊಂದಿಗೆ ಮಾತನಾಡುತ್ತ ತೂಲಾ ಮತ್ತು ಬೆಲೆವೋದ ಮೆಟ್ರೋಪಾಲಿಟನ್ ಜುವೆನಲಿಯಸ್‌ರವರು ಈ ಸಮ್ಮೇಳನವು ಪೂರ್ಣ ಒಮ್ಮತದ ವಾತಾವರಣದಲ್ಲಿ ಜರುಗಿತೆಂದೂ ಹಾಗೂ ಜಾಗತಿಕ ಶಾಂತಿಯನ್ನು ಕಾಪಾಡುವುದಕ್ಕೋಸ್ಕರವಾದ ಪ್ರಯತ್ನಗಳಿಗೆ ಒಂದು ಅತಿಮುಖ್ಯವಾದ ಕಾಣಿಕೆಯಾಗಿದೆಯೆಂದೂ ಒತ್ತಿಹೇಳಿದರು. ಫೆಡರಲ್ ಜರ್ಮನ್ ಗಣರಾಜ್ಯದ ಪ್ಯಾಸ್ಟರ್ ಗುಂಟರ್ ಮೊಚಾಲ್‌ಸ್ಕಿ ಮತ್ತು ಅಖಿಲ ಆಫ್ರಿಕ ಚರ್ಚುಗಳ ಸಮ್ಮೇಳನದ ಪ್ರಧಾನ ಕಾರ್ಯದರ್ಶಿ ಕೆನಾನ್ ಬರ್ಜೆಸ್ ಕಾರ್ ಅವರು ಸೋವಿಯೆತ್ ಒಕ್ಕೂಟದಲ್ಲಿ ಆಸ್ತಿಕರನ್ನು ಶಿಕ್ಷೆಗೆ ಗುರಿಪಡಿಸಲಾಗುತ್ತದೆ ಎನ್ನುವ ಕಟ್ಟುಕಥೆಗಳನ್ನು ಖಂಡಿಸಿದರು ಹಾಗೂ ಸೋವಿಯೆತ್ ಒಕ್ಕೂಟದಲ್ಲಿ ರಾಷ್ಟ್ರವ್ಯಾಪಿ ಚರ್ಚೆಗಾಗಿ ಸಲ್ಲಿಸಲಾಗಿರುವ ಹೊಸ ಸೋವಿಯೆತ್ ಸಂವಿಧಾನದ ಕರಡು ಧಾರ್ಮಿಕ ಸ್ವಾತಂತ್ರ್ಯದ ತತ್ತ್ವವನ್ನು ಪುನಃ ದೃಢಪಡಿಸಿದೆ ಮಾತ್ರವೇ ಅಲ್ಲ, ಅದಕ್ಕೆ ಹೊಸ ಸತ್ತ್ವವನ್ನೂ ಕೂಡ ತುಂಬಿದೆ ಎಂದು ಒತ್ತಿಹೇಳಿದರು.

(ಕೃಪೆ: USSR ವಾರ್ತಾ ವಿಭಾಗ.)

★ ಸೋವಿಯೆತ್ ದೇಶದಲ್ಲಿ ಮತಧರ್ಮವು ಬೆಳೆಯುತ್ತಿದೆಯೆಂದೂ ಯುವಜನರು ಹೆಚ್ಚು ಹೆಚ್ಚಾಗಿ ಪುರೋಹಿತರಾಗುವ ಉದ್ದೇಶದಿಂದ ಥಿಯೋಲಜಿಕಲ್ ಕಾಲೇಜುಗಳಲ್ಲಿ ಪ್ರವೇಶಿಸುತ್ತಿರುವರೆಂದೂ ಭಾರತ ಸಂಚಾರ ವೇಳೆಯಲ್ಲಿ ರಶ್ಯಾದ ಓರ್ಥೊಡೆಕ್ಸ್ ಚರ್ಚಿನ ಪ್ರಧಾನ ಧರ್ಮಾಧಿಕಾರಿಯಾದ ಪತ್ರಿಯರ್ಕೀಸ್ ಪೀಮೆನ್ ಮದ್ರಾಸಿನಲ್ಲಿ ಪ್ರಸ್ತಾವಿಸಿರುವರೆಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ (1-2-1977) ವರದಿ ಮಾಡಿತ್ತು. ರಶ್ಯಾದಲ್ಲಿ ಚರ್ಚ್ ಈಗ ಸ್ವತಂತ್ರವೆಂದೂ ಕಮ್ಯುನಿಸ್ಟ್ ಮತ್ತು ಚರ್ಚುಗಳ ಸಂಬಂಧ ಸೌಹಾರ್ದಯುತವೆಂದೂ ಅವರು ಹೇಳಿದ್ದರು.

★ "ಯು. ಎಸ್. ಎಸ್. ಆರ್. ಮಂತ್ರಿಮಂಡಲದ ಕೆಳಗೆ ಮತಧರ್ಮ ಕಾರ್ಯಗಳಿಗಾಗಿ ಒಂದು ಕೌನ್ಸಿಲ್ ಇದೆ. ಮತೀಯ ಆವಶ್ಯಕತೆಗಳನ್ನು ನೆರವೇರಿಸಲು ಬೇಕಾದ ಪ್ರಾಯೋಗಿಕ ಸೌಲಭ್ಯಗಳನ್ನು ಒದಗಿಸಿಕೊಡುವುದು ಅದರ ಕೆಲಸ. ಮತಸಂಘಟನೆಗಳಿಗೆ ಪ್ರಾರ್ಥನಾಲಯಗಳ ಏರ್ಪಾಡು ಮಾಡಿಕೊಡುವುದು, ಧರ್ಮಗ್ರಂಥಗಳ ಅಧ್ಯಯನಕ್ಕಾಗಿ ಶಾಲೆಗಳನ್ನು ಸ್ಥಾಪಿಸುವುದು, ಪ್ರಾರ್ಥನಾ ಮಂದಿರಗಳನ್ನು ಜೀರ್ಣೋದ್ಧಾರ ಮಾಡಲಿಕ್ಕೂ ಹೊಸತಾಗಿ ನಿರ್ಮಿಸಲಿಕ್ಕೂ ಅವಕ್ಕೆ ಅಗತ್ಯವಿರುವ ವಾಸಗೃಹಗಳನ್ನು ನಿರ್ಮಿಸಲಿಕ್ಕೂ ಸಾಮಾಗ್ರಿಗಳನ್ನು ಒದಗಿಸುವುದು, ಮತಗ್ರಂಥಗಳನ್ನು ಪ್ರಕಟಿಸುವರೆ ಸಹಾಯ ನೀಡುವುದು, ವಿದೇಶಗಳ ಸಂಚಾರ ಮಾಡುವ ಮತಸ್ಥರಿಗೂ ಮತಸಂಘದ ಉದ್ಯೋಗಸ್ಥರಿಗೂ ವಿದೇಶ ನಾಣ್ಯಗಳ ಏರ್ಪಾಡು ಮಾಡಿಕೊಡುವುದು ಮೊದಲಾದುವು" ಎಂದು ಮದ್ರಾಸಿನ ರಶ್ಯನ್ ಸಮಾಚಾರ ವಿಭಾಗ ಪ್ರಕಟಿಸಿದ ಅಲೆಕ್ಸಿವ್ಪುಸಿ ಬರೆದ 'ಸೋವಿಯೆತ್ ದೇಶದಲ್ಲಿ ಮತ' ಎಂಬ ಲಘು ಕೃತಿಯಲ್ಲಿ (ಪುಟ 37) ಬರೆಯಲಾಗಿದೆ.

ಮತಧರ್ಮಕ್ಕೆ ವಿರುದ್ಧವಾದ ನಿರಂತರ ಸಮರವು ಕಮ್ಯುನಿಸ್ಟನ ಧರ್ಮವೆಂದು ಘೋಷಿಸಲ್ಪಟ್ಟಿತ್ತು. ಕಾರ್ಲ್ ಮಾರ್ಕ್ಸ್, ಎಂಗೆಲ್ಸ್, ಲೆನಿನ್, ಸ್ಟಾಲಿನ್ ಎಲ್ಲರೂ ನಾಸ್ತಿಕತೆಯನ್ನು ಬೋಧಿಸಿದರು. "ಮತಧರ್ಮವೆಂದರೆ ಜನರಿಗೆ ಅಮಲೇರಿಸುವ ಅಫೀಮು" ಎಂದು ಕಾರ್ಲ್ ಮಾರ್ಕ್ಸ್ ಹೇಳಿದರು. ಮಾರ್ಕ್ಸ್‌ರ ವೇದವಾಕ್ಯವನ್ನು ಕೇಳಿ ಪುಳಕಿತರಾದ ಲೆನಿನ್ ಆವೇಶಭರಿತರಾಗಿ ಮತದ ವಿರುದ್ಧ ಉಗ್ರ ಮೂರ್ತಿಯಾದರು.

“ಮತಗಳೊಡನೆ ಹೋರಾಟ – ಅದು ಮಾರ್ಕ್ಸಿಸಮಿನ ಧ್ಯೇಯ” ಎಂದು ಲೆನಿನ್ ಘೋಷಿಸಿದರು. ಮನುಷ್ಯ ಹೃದಯಗಳನ್ನು ಸಂಪೂರ್ಣ ಗೆದ್ದ ಮತವನ್ನು ನಿರ್ಮೂಲನ ಮಾಡಲಿಕ್ಕೂ ಮತಕ್ಕೆ ಲಭಿಸಿದ ಸಾರ್ವತ್ರಿಕ ಅಂಗೀಕಾರವನ್ನು ನಷ್ಟಪಡಿಸಲಿಕ್ಕೂ ಸ್ಟಾಲಿನ್ ಸೊಂಟಕಟ್ಟಿ ಹೊರಟರು. ಗುರಿಯನ್ನು ತಲುಪಲು ಹೊರಟ ಪ್ರಯಾಣದಲ್ಲಿ ಅನೇಕ ‘ಮತದ್ವೇಷಿ’ಗಳನ್ನು ಮತವಿರುದ್ಧ ಪ್ರಚಾರಕ್ಕಾಗಿ ಸೋವಿಯೆತ್ ಸರಕಾರ ನಿಯೋಗಿಸಿತು. ಅನೇಕ ಕೃತಿಗಳನ್ನು ಪ್ರಚಾರಮಾಡಿತು. ವಿದ್ಯಾಲಯಗಳಲ್ಲಿ ಮತವಿಧ್ವಂಸಕ ಕ್ಲಾಸುಗಳನ್ನು ಏರ್ಪಡಿಸಲಾಯಿತು.

ಆದರೆ ಕ್ರಮೇಣ ಮತವಿರುದ್ಧ ಹೋರಾಟದಲ್ಲಿ ರಶ್ಯನ್ ಕಮ್ಯುನಿಸ್ಟ್ ಸೋಲನುಭವಿಸಲು ತೊಡಗಿತು. ರಶ್ಯಾದಲ್ಲಿ ಮತವಿರುದ್ಧ ಹೋರಾಟಗಳ ಮುಂದಾಳುತನವನ್ನು ವಹಿಸಿದ ಅಸಾಮಾನ್ಯ ಬುದ್ಧಿಶಾಲಿಯಾದ ಎಮೆಲಿಯನ್ ಯಾರೊಸ್‌ಲಾವ್‌ಸ್ಕಿ ಹೋರಾಡಿ ದಣಿದು ಸೋತ ನಂತರ ಆಯುಧಗಳನ್ನು ಎಸೆದು ಹೇಳಿದರು: “Religion is like a nail, harder you hit it deeper it goes.” ಅಂದರೆ “ಮತವು ಒಂದು ಆಣಿಯ ಹಾಗೆ. ಎಷ್ಟು ಜೋರಾಗಿ ನೀವು ಅದರ ಮೇಲೆ ಹೊಡೆಯುವಿರೋ ಅಷ್ಟು ಆಳದಲ್ಲಿ ಅದು ಒಳಗೆ ಪ್ರವೇಶಿಸುತ್ತದೆ.”

ರಶ್ಯಾದಲ್ಲಿ ಮತಧರ್ಮವನ್ನು ನಾಶಪಡಿಸುವ ಯಾವ ಪ್ರಯತ್ನವೂ ಜಯಗಳಿಸಲಿಲ್ಲವೆಂದು ಮೇಲಿನ ಲೇಖನ ಮತ್ತು ಉದ್ಧಾರಣೆಗಳು ಸ್ಪಷ್ಟಪಡಿಸುತ್ತವೆ. ಮತವಿಶ್ವಾಸಿಗಳನ್ನು ನಾನಾ ರೀತಿಯಲ್ಲಿ ಪೀಡಿಸಿ, ಮತಸಂಘಗಳನ್ನು ನಿರ್ವೀರ್ಯಮಾಡಲೂ ನಿಷ್ಕ್ರಿಯ ಮಾಡಲೂ ಸೋವಿಯೆತ್ ಅಧಿಕಾರಿಗಳಿಗೆ ಸಾಧ್ಯವಾಗಿದ್ದರೂ ಮತದ ಅಂತಃಸತ್ವವನ್ನು ಒಮ್ಮೆಯೂ ಅವರಿಗೆ ನಾಶಪಡಿಸಲು ಸಾಧ್ಯವಾಗಲಿಲ್ಲವೆಂದೂ ಮನುಷ್ಯರ ಹೃದಯಗಳಲ್ಲಿ ಅದು ಸಜೀವವಾಗಿತ್ತೆಂದೂ ವ್ಯಕ್ತವಾಗುತ್ತದೆ. ಮತವನ್ನು ನಾಶಪಡಿಸುವ ಪ್ರಯತ್ನಗಳಲ್ಲಿ ಸೋವಿಯೆತ್ ರಶ್ಯಾ ಆದರ್ಶ ನೇತೃತ್ವವನ್ನು ನೀಡಿದೆಯೆಂದು ಭಾವಿಸಿ ಭಾವಾವೇಶಗೊಳ್ಳುವವರಿಗೆ ಮತವು ಯಾವುದಾದರೂ ರೀತಿಯಲ್ಲಿ ಸೋವಿಯೆತ್ ರಶ್ಯಾದಲ್ಲಿ ಇನ್ನೊಮ್ಮೆ ತಲೆಯೆತ್ತುವುದನ್ನು ಸಹಿಸಲಿಕ್ಕಾಗಲಿಕ್ಕಿಲ್ಲ. ಕ್ರಿಮಿಕೀಟಗಳನ್ನೂ ರೋಗಾಣುಗಳನ್ನೂ ನಾಶಪಡಿಸುವ ರೀತಿಯಲ್ಲೇ ನಿರ್ಮೂಲನ ಮಾಡಬೇಕೆಂದು ತಾವು ಆಶೆಯಿರಿಸಿದ ಮತವು ಮಾದರಿ ರಾಷ್ಟ್ರವಾದ ರಶ್ಯಾದಲ್ಲಿ ಮತ್ತೊಮ್ಮೆ ಮಾನ್ಯತೆಗಳಿಸಿದುದರಿಂದ ಅವರಿಗೆ ನಿರಾಶೆಯೂ ನೀರಸವೂ ಉಂಟಾದೀತು. ಆದರೆ ನಿಜಾಂಶವನ್ನು ಅಂಗೀಕರಿಸದೆ ಇರಲಿಕ್ಕೆ ಸಾಧ್ಯವಿಲ್ಲವಲ್ಲ. ಅರ್ಹತೆ ಇರುವಂಥಾದ್ದು ಬಾಳೀತು.

ಮತದ ನಿರ್ಮೂಲ ನಾಶ ಒಂದು ಶಕ್ತಿಗೂ ಸಾಧ್ಯವಿಲ್ಲ. ಮತವನ್ನು ನಾಶಪಡಿಸಲು ಹೊರಟವರೆಲ್ಲ ಆಯುಧಗಳನ್ನು ಕೆಳಗಿಟ್ಟು ಶರಣಾಗಿದ್ದಾರೆಂದು ರಶ್ಯಾದ ಜಾಗತಿಕ ಧರ್ಮ ಸಮ್ಮೇಳನ ಕರೆದು ಹೇಳುತ್ತಿದೆ. ರಶ್ಯಾದ ಸ್ಥಾನವನ್ನು ಮೇಲೆತ್ತಲಿಕ್ಕೂ ರಶ್ಯಾದ ಲೋಕ ನೇತೃತ್ವ ಆಸಕ್ತಿಗಳಿಗೆ ಅನುಗುಣವಾಗಿ ಪ್ರವರ್ತಿಸಲಿಕ್ಕೂ ಮತಗಳನ್ನು ಉಪಯೋಗಪಡಿಸಲು ಆಗುವುದಾದರೆ ಮತಕ್ಕೆ ಪರಮಪವಿತ್ರತೆಯನ್ನು ಅಂಗೀಕರಿಸಿಕೊಡಲಿಕ್ಕೂ ಅದರ ಬೆಳವಣಿಗೆಗೆ ಅಗತ್ಯವಾದ ಸಕಲ ಸೌಕರ್ಯಗಳನ್ನು ಒದಗಿಸಲಿಕ್ಕೂ ಸೋವಿಯೆತ್ ಅಧಿಕಾರಿಗಳು ಸಿದ್ಧರಿದ್ದಾರೆ. ಇಂದು ರಶ್ಯಾದಲ್ಲಿ ಮತವು ಎಲ್ಲಾ ವಿಧದಲ್ಲೂ ಸ್ವತಂತ್ರವಾಗಿ ಬೆಳೆಯುತ್ತಿದೆಯೆಂದು ತೋರಿಸುವುದು ಸೋವಿಯೆತ್ ಯೂನಿಯನಿನ ರಾಷ್ಟ್ರೀಯ ಆಸಕ್ತಿಯಾಗಿ ಮಾರ್ಪಟ್ಟಿದೆ. ಸೋವಿಯೆತ್ ರಶ್ಯಾ ಕಮ್ಯುನಿಸಮಿನ ಮೂಲ ತತ್ವ ಸಂಹಿತೆಯಿಂದ ದೂರಸರಿದು ಅತಿದೂರ ಸಂಚರಿಸಲು ತೊಡಗಿರುವ ಹಿನ್ನೆಲೆಯಲ್ಲಿ ಅಲ್ಲಿ ಮತದ ಪುನರಾಗಮನ ಅಷ್ಟೊಂದು ಅನಿರೀಕ್ಷಿತವೋ ಅಸ್ವಾಭಾವಿಕವೋ ಅಲ್ಲ.

“ಮತವು ಮನುಷ್ಯನನ್ನು ಮರುಳುಗೊಳಿಸುವ ಅಫೀಮು” ಎಂದಾಗಿದೆಯಷ್ಟೇ ಕಮ್ಯುನಿಸಮಿನ ಮುದ್ರಾವಾಕ್ಯ. ಈಗ ಆ ಅಫೀಮಿಗೂ ಸೋವಿಯೆತ್ ದೇಶದಲ್ಲಿ ಪ್ರಚಾರ ವರ್ಧಿಸುತ್ತಿದೆ. ಈ ಹೊಸ ಚಲನೆಗಳು ಮತವಿರುದ್ಧ ಪ್ರವರ್ತನೆ ಜೀವಿತವ್ರತವೆಂದು ಸ್ವೀಕರಿಸಿದವರಿಗೆ ಅಹಿತವಾಗಿರುವುದಾದರೂ ಮತವಿಶ್ವಾಸಿಗಳಿಗೆ ಆಶಾದಾಯಕವಾಗಿದೆಯೆಂದು ಹೇಳಬೇಕೆಂದಿಲ್ಲ. ಈ ಚಲನೆಗಳು ಖಂಡಿತವಾಗಿಯೂ ಸತ್ಯಮತದ ವಿಜಯಕ್ಕೆ ಸಂಗಮದಾರಿಯನ್ನು ತೋರಿಸದಿರಲಿಕ್ಕಿಲ್ಲ.

ಮುಂದೊಂದು ಕಾಲದಲ್ಲಿ ರಶ್ಯಾದಲ್ಲಿ ಸತ್ಯದೈವ ವಿಶ್ವಾಸಿಗಳು ಮರಳಿನ ಹರಳಿನೋಪಾದಿಯಲ್ಲಿ ವರ್ಧಿಸುವರೆಂದು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಜ್ರತ್ ಅಹ್ಮದ್‌ರವರು ನುಡಿದ ಭವಿಷ್ಯವಾಣಿ ಈ ಸಂದರ್ಭದಲ್ಲಿ ನಮ್ಮ ಸ್ಮೃತಿಪಟಲದಲ್ಲಿ ಸುಳಿಯುತ್ತದೆ.

— ಅ. ರ್ಷು. ಅ.

# ಅಹ್ಮದಿಯಾ ವಾರ್ತೆಗಳು

## ಮಧ್ಯಪ್ರದೇಶದಲ್ಲಿ ಸಮ್ಮೇಳನ

ಮಧ್ಯಪ್ರದೇಶ ಅಹ್ಮದಿಯಾ ಸಮ್ಮೇಳನವು ಮೇ 8ರಂದು ಇಟಾರ್ಸಿಯಲ್ಲಿ ಜರುಗಿತು. ಸಮ್ಮೇಳನದ ಅಂಗವಾಗಿ ಮತಾಚಾರ್ಯರ ದಿನವನ್ನು ಆಚರಿಸಲಾಯಿತು. ಖಾದಿಯಾನಿನ ಪ್ರಧಾನ ಪ್ರಚರಣ ಕಾರ್ಯದರ್ಶಿ ಮೌಲಾನ ಶರೀಫ್ ಅಹ್ಮದ್ ಸಾಹೇಬ್ ಅಮೀನಿ H.A. ಸಮ್ಮೇಳವನ್ನು ಉದ್ಘಾಟನೆ ಮಾಡಿದರು. ಸೇಟ್ ಮೊಯಿನುದ್ದೀನ್ ಸಾಹೇಬ್ ಅಧ್ಯಕ್ಷತೆಯನ್ನು ವಹಿಸಿದರು.

ಸಿಸ್ಟರ್ ಕ್ಲಿಮೆನ್‌ಟೈನ್, ಕರೀಮುಲ್ಲಾ ನೌಜವಾನ್, ಗ್ಯಾನೀ ರಾಜೇಂದ್ರ ಸಿಂಗ್, ಮೌಲಾನ ಅಬ್ದುಲ್‌ಹಕ್, ಪ್ರೊಫೆಸರ್ ಎಸ್. ವಿ. ತಿವಾರಿ ಮೊದಲಾದವರು ಅನುಕ್ರಮವಾಗಿ ಯೇಸುಕ್ರಿಸ್ತ, ಮುಹಮ್ಮದ್ ಪೈಗಂಬರ್, ಗುರುನಾನಕ್, ಹಝ್ರತ್ ಅಹ್ಮದ್, ಶ್ರೀ ಕೃಷ್ಣ ಎಂಬೀ ಮಹಾ ಪುರುಷರ ಕುರಿತು ಭಾಷಣ ಮಾಡಿದರು.

ಇಟಾರ್ಸಿಯ ಓರ್ವ ಪ್ರಸಿದ್ಧ ಸಮಾಜಸೇವಕರಾದ ಯುವ ಸಹೋದರ ದಿಲೀಪ್ ಕುಮಾರ್ ಪೇಟ್ರಿಯ ಎಂಬವರು ಸಮ್ಮೇಳನಕ್ಕೆ ಸಂಬಂಧಿಸಿ ಗಣ್ಯ ಸೇವೆಯನ್ನು ಸಲ್ಲಿಸಿರುವರು.

## ಸಿಕಂದರಾಬಾದಿನ ಸರ್ವಮತ ಸಮ್ಮೇಳನದಲ್ಲಿ ಅಹ್ಮದಿಯಾ ಪ್ರಚಾರಕರ ಭಾಷಣ

ಸಿಕಂದರಾಬಾದಿನ ಸೇವಾನಿಕೇತನದ ವತಿಯಿಂದ ಜುಲೈ 21ರಿಂದ 31ನೆಯ ತಾರೀಕಿನ ವರೆಗೆ ಸರ್ವಧರ್ಮ ಸಮ್ಮೇಳನವು ಜರುಗಿತು. ಈ ಸಮ್ಮೇಳನದಲ್ಲಿ ಜುಲೈ 26ನೇ ತಾರೀಕಿನಂದು ರಾತ್ರೆ ಎಂಟುಗಂಟೆಗೆ ಹೈದರಾಬಾದಿನ ಅಹ್ಮದಿಯಾ ಪ್ರಚಾರಕರಾದ ಮೌಲವಿ ಹಮೀದುದ್ದೀನ್ ಶಮ್ಸ್ ಸಾಹೇಬರು ಭಾಷಣ ಮಾಡಿದರು. ಇವರ ಭಾಷಣದ ಮೊದಲು ಬುದ್ಧ ಮತದ ಕುರಿತು ಉಸ್ಮಾನಿಯಾ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪ್ರಧಾನಾಧ್ಯಾಪಕರಾದ ಡಾಕ್ಟರ್ ರಾಧಾಕೃಷ್ಣ ಶರ್ಮಾ ಭಾಷಣ ಮಾಡುತ್ತಾ ಕೊನೆಗೆ ಈರೀತಿ ಹೇಳಿದರು: 'ಮುಡಿರ್ಮತೆ ನಡೆಯುವವರು ಈಗಿನ ಕಾಲದಲ್ಲಿ ಅಹ್ಮದಿಯಾ ಸಂಘಟನೆಯವರೆಂದು ನಾನು ಯಾವುದೇ ಸಂದೇಹವಿಲ್ಲದೆ ಹೇಳಬಲ್ಲೆ''. ಅನಂತರ ಅವರು ತನ್ನ ಸಹೋದ್ಯೋಗಿಯಾದ ಉಸ್ಮಾನಿಯಾ ಯುನಿವರ್ಸಿಟಿಯ ಖಗೋಳ ಶಾಸ್ತ್ರ ವಿಭಾಗದ ರೀಡರ್‌ರಾದ ಹಾಫಿಝ್ ಸಾಲಿಹ್ ಮುಹಮ್ಮದ್ ಅಲಾದೀನ್ ಸಾಹೇಬರ ಕುರಿತು ವಿವರಿಸುತ್ತಾ: "ಅವರ ಆದರ್ಶವನ್ನು ನಾವು ಸದಾ ಅನುಕರಿಸಲು ಆಶಿಸುತ್ತೇವೆ'' ಎಂದು ಹೇಳಿದರು. ಅಹ್ಮದಿಯಾ ಪ್ರಚಾರಕರು ತಮ್ಮ ಭಾಷಣದ ಪ್ರಾರಂಭದಲ್ಲಿ ಈರೀತಿ ಹೇಳಿದರು:—"ಇನ್ನೊಬ್ಬರ ಮತದ ಕುರಿತು ಆಕ್ಷೇಪಿಸದೆ ಅವರವರ ಮತಗಳ ಮಹತ್ವಗಳನ್ನು ಅಧಿಕೃತ ಗ್ರಂಥಾಧಾರಗಳಿಂದ ಶ್ರುತಪಡಿಸಲು ಸಂದರ್ಭವೊದಗಿಸಿದುದಕ್ಕೆ ಸಮ್ಮೇಳನದ ಸಂಘಟಕರು ಅಭಿನಂದನಾರ್ಹರು''. "ಮನುಷ್ಯನ ಮಹತ್ವದ ಕುರಿತು ಪವಿತ್ರ ಖುರ್‌ಆನಿನ ಉಪದೇಶಗಳು'' ಎಂಬುದು ಅಹ್ಮದಿಯಾ ಪ್ರಚಾರಕರ ಭಾಷಣದ ವಿಷಯವಾಗಿದ್ದಿತು. ಭಾಷಣದ ನಂತರ ಅನೇಕ ಪ್ರಶ್ನೆಗಳು ಕೇಳಲ್ಪಟ್ಟುವು. ಅವುಗಳಿಗೆ ತೃಪ್ತಿಕರವಾದ ಉತ್ತರಗಳನ್ನು ಕೊಡಲಾಯಿತು.

## ತಮಿಳುನಾಡಿನ ಗವರ್ನರರಿಗೆ ಪವಿತ್ರ ಖುರ್‌ಆನಿನ ಪಾರಿತೋಷಕ

ತಮಿಳುನಾಡಿನ ಹೊಸ ಗವರ್ನರರಾದ ಶ್ರೀಮಾನ್ ಪ್ರಭುದಾಸ್ ತಿವಾರಿಯವರನ್ನು ಜುಲೈ 29ನೇ ತಾರೀಕಿನಂದು ಮದ್ರಾಸಿನ ಅಹ್ಮದಿಯಾ ಪ್ರಚಾರಕರಾದ ಮೌಲವಿ ಮುಹಮ್ಮದ್ ಉಮರ್ ಸಾಹೇಬ್‌ರವರು ಮದ್ರಾಸಿನ ಇತರ ಮೂವರು ಅಹ್ಮದಿಯರೊಂದಿಗೆ ಭೇಟಿಮಾಡಿ ಗವರ್ನರರಿಗೆ ಪವಿತ್ರ ಖುರ್‌ಆನಿನ ಇಂಗ್ಲಿಷ್ ಭಾಷಾಂತರ, ಪೈಗಂಬರರ ಜೀವನ ಚರಿತ್ರೆ ಮೊದಲಾದ ಹಲವಾರು ಇಂಗ್ಲಿಷ್ ಮತ್ತು ಹಿಂದಿ ಗ್ರಂಥಗಳನ್ನು ನೀಡಿದರು. ಗವರ್ನರರು ಬಹಳ ಆದರದಿಂದ ಗ್ರಂಥಗಳನ್ನು ಸ್ವೀಕರಿಸಿ ಪ್ರತಿಯೊಂದನ್ನೂ ಪರಿಶೀಲಿಸಿದ ನಂತರ ಈರೀತಿ ಹೇಳಿದರು: ''ನಾನು ಅಹ್ಮ

ದಿಯಾ ಸಂಘಟನೆಯನ್ನು ಬಲ್ಲೆನು. ನೀವು ಮಾನವ ಸಮುದಾಯಕ್ಕಾಗಿ ಬಹಳ ಉತ್ತಮ ಕೆಲಸ ಮಾಡುತ್ತಿರುವಿರಿ. ನಾನು ಇಸ್ಲಾಮಿನ ಕುರಿತು ಗಾಢವಾಗಿ ಅಧ್ಯಯನ ಮಾಡಿರುತ್ತೇನೆ. ಇಸ್ಲಾಮ್ ಧರ್ಮತತ್ವಗಳು ಪ್ರತಿಯೋರ್ವರೂ ಆಚರಿಸಲು ತಕ್ಕುದಾಗಿವೆ. ಅದರ ಉಪದೇಶಗಳು ಬಹಳ ಉತ್ತಮವಾಗಿವೆ. ಶ್ರೀಮಂತರ ಮತ್ತು ಬಡವರ ಮಧ್ಯವಿರುವ ದೂರವನ್ನು ಕಡಿಮೆಗೊಳಿಸಲಿಕ್ಕಾಗಿ ಅದು ಅಮೂಲ್ಯ ಉಪದೇಶಗಳನ್ನು ಇತ್ತಿದೆ''.

ಮಾತುಕತೆಯ ಮಧ್ಯೆ, ಪಾನ ನಿರೋಧದ ಮಹತ್ವದ ಕುರಿತು ಒಂದು ಸಿಂಪೋಸಿಯಂ ಏರ್ಪಡಿಸುವುದಾದರೆ ಅದರಲ್ಲಿ ತಾನು ಭಾಗವಹಿಸುವುದಾಗಿ ಗವರ್ನರರು ಆಶ್ವಾಸನೆಯನ್ನಿತ್ತರು.

## ಡಾ| ತಾರೀಕ್ ಅಹ್ಮದ್ ಆಫ್ರಿಕಕ್ಕೆ

'ನುಸ್ರತ್ ಜಹಾನ್ ಸ್ಕೀಂ' ಅನುಸಾರವಾಗಿ ಘಾನಾ ಅಹ್ಮದಿಯಾ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಲು ಒರಿಸ್ಸಾದ ಡಾ। ತಾರೀಕ್ ಅಹ್ಮದ್ M. B. B. S. ಆಫ್ರಿಕಕ್ಕೆ ಹೊರಟಿರುವರು. ಅವರು ತಿರುವನಂತಪುರದ ಎಸ್. ಆರ್. ಪಿ.ಯಲ್ಲಿ ಮೆಡಿಕಲ್ ಆಫೀಸರಾಗಿದ್ದರು. ನುಸ್ರತ್ ಜಹಾನ್ ಸ್ಕೀಮಿನ ವತಿಯಲ್ಲಿ ಭಾರತದಿಂದ ಆಫ್ರಿಕಕ್ಕೆ ಹೋಗುವ ಮೊದಲಿಗರಾಗಿದ್ದಾರೆ ಡಾ। ತಾರೀಕ್. ಜೂನ್ 26ರಂದು ಬೊಂಬಾಯಿ ಅಹ್ಮದಿಯಾ ಸಂಘಟನೆಯ ಸದಸ್ಯರು ಅವರನ್ನು ವಿಮಾನ ನಿಲ್ದಾಣದಲ್ಲಿ ಬೀಳ್ಕೊಟ್ಟರು.

## ಲಂಡನ್‌ನಲ್ಲಿ ಸಮ್ಮೇಳನ

U. K. ಅಹ್ಮದಿಯಾ 13ನೇ ವಾರ್ಷಿಕ ಸಮ್ಮೇಳನವು ಜುಲಾಯಿ 30 ಮತ್ತು 31ರಂದು ಲಂಡನಿನ ರೊಹಂಪ್ಟನ್ ಮೈದಾನದಲ್ಲಿ ಜರುಗಿತು. ಸಮ್ಮೇಳನದಲ್ಲಿ 2000 ಪ್ರತಿನಿಧಿಗಳು ಭಾಗವಹಿಸಿದ್ದರು. ಮಿಸ್ಟರ್ ಹ್ಯೂ ಜೆನ್‌ಕಿನ್ಸ್ M. P. ಸಮ್ಮೇಳನವನ್ನು ಉದ್ಘಾಟನೆ ಮಾಡಿದರು. ವಾಂಡ್ಸ್‌ವರ್ತ್ ಡಿಪ್ಯುಟಿ ಮೇಯರ್ ಮಿ। F. W. ವೆಲ್ಸ್, ಮಿ। ಟಾಮ್‌ಕಾಕ್ಸ್ M. P., ವಾಂಡ್ಸ್‌ವರ್ತ್ ರೋಟರಿ ಕ್ಲಬ್ಬಿನ ಪ್ರೆಸಿಡೆಂಟ್ ಮಿ। L. ವುಡ್, ಮಿ। ಪ್ರೀತಂ ಸಿಂಘ್ Q. C., ಮಾಜಿ ಏರ್ ಮಾರ್ಷಲ್ ಝಫರ್ ಚೌಧುರಿ, ಸರ್ ಮುಹಮ್ಮದ್ ಝಫರುಲ್ಲಾ ಖಾನ್, ಇಮಾಂ B. A. ರಫೀಕ್ ಎಂಬೀ ಗಣ್ಯರು ಭಾಷಣ ಮಾಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ವಿದೇಶ ಪ್ರಚರಣ ಕಾರ್ಯದರ್ಶಿ ಜನಾಬ್ ಮಿರ್ಝಾ ಮುಬಾರಕ್ ಅಹ್ಮದ್‌ರವರು ಸಮಾರೋಪ ಭಾಷಣ ಮಾಡಿದರು.

## ಗಾಂಬಿಯಾದಲ್ಲಿ ಸಮ್ಮೇಳನ

ಗಾಂಬಿಯಾ ಅಹ್ಮದಿಯಾ ಸಂಘಟನೆಯ ತೃತೀಯ ವಾರ್ಷಿಕ ಸಮ್ಮೇಳನವು ರಾಜಧಾನಿಯಾದ ಬಾಥರ್ಸ್ಟಿನ ಬಂಜೋಲ್ ನುಸ್ರತ್ ಸೆಕೆಂಡರಿ ಸ್ಕೂಲ್ ಗ್ರೌಂಡಿನಲ್ಲಿ ಮೇ 21 ಮತ್ತು 22ರಂದು ಜರುಗಿತು.

ಪ್ರಥಮ ದಿನದ ಮೊದಲ ಸಮ್ಮೇಳನದ ಅಧ್ಯಕ್ಷತೆಯನ್ನು ಗಾಂಬಿಯಾ ಆರ್ಥಿಕ ಮಂತ್ರಿ ಎಂ. ಸಿ. ಚಾಂ, ಹಾಗೂ ಎರಡನೆಯ ಸಮ್ಮೇಳನದ ಅಧ್ಯಕ್ಷತೆಯನ್ನು ಗಾಂಬಿಯಾ ಕಸ್ಟಮ್ಸ್ ಆಫೀಸರ್ ಅಲೀಬಾ ಸಾಹೇಬ್ ವಹಿಸಿದರು. ದ್ವಿತೀಯ ದಿನದ ಮೊದಲ ಸಮ್ಮೇಳನದ ಅಧ್ಯಕ್ಷತೆಯನ್ನು ಗಾಂಬಿಯಾ ಲೇಬರ್ ಕಮಿಷನರ್ ತೇಜಾನ್ ಬಾಬು ಮತ್ತು ಸಮಾರೋಪ ಸಮ್ಮೇಳನದ ಅಧ್ಯಕ್ಷತೆಯನ್ನು ಗಾಂಬಿಯಾದ ಅಮೀರ್ ಮೌಲಾನ ಅಬ್ದುಶಕೂರ್ ಸಾಹೇಬ್ ವಹಿಸಿದರು.

## ಘಾನಾದಲ್ಲಿ ಸಮ್ಮೇಳನ

ಘಾನಾ ಅಹ್ಮದಿಯಾ ಜಮಾತಿನ 51ನೇ ವಾರ್ಷಿಕ ಸಮ್ಮೇಳನ ಸಾಲ್ಟ್‌ಪೋಂಡ್‌ನಲ್ಲಿ ಜರುಗಿತು. ಘಾನಾ ಅಮೀರ್ ಮೌಲಾನ ಅಬ್ದುಲ್ ವಹಾಬ್‌ಆದಮ್ ಸಮ್ಮೇಳನವನ್ನು ಉದ್ಘಾಟನೆ ಮಾಡಿದರು. ಲೆಫ್ಟಿನೆಂಟ್ ಕರ್ನಲ್ ಇ. ಜೆ. ದಾವುನಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

## ಕೃಷಿ ವಿದ್ಯಾಲಯಕ್ಕೆ ಅಂಗೀಕಾರ

'ನುಸ್ರತ್ ಜಹಾನ್ ಸ್ಕೀಮಿ'ನ ವತಿಯಿಂದ ಸಿರಾಲಿಯೋನ್‌ನ ಕಬಾಲ ನಗರದಲ್ಲಿ ಸ್ಥಾಪಿಸಲಾದ ಅಹ್ಮದಿಯಾ ಕೃಷಿ ವಿದ್ಯಾಲಯವನ್ನು ಅಂತಾರಾಷ್ಟ್ರೀಯ ಸಂಸ್ಥೆಯಾದ ಐ. ಡಿ. ಎ. ಅಧಿಕಾರಿಗಳು ಸಂದರ್ಶಿಸಿದರು. ವಿದ್ಯಾಲಯದ ಕೃಷಿಯೋಜನೆಗಳ ಕುರಿತು ಅವರು ವಿಚಾರಿಸಿದರು. ಸಿರಾಲಿಯೋನ್ ಕೃಷಿ ಸಚಿವಾಲಯವು ಈ ವಿದ್ಯಾಲಯವನ್ನು ಜಿಲ್ಲೆಯ ಕೃಷಿಕೇಂದ್ರ

ವನ್ನಾಗಿ ಅಂಗೀಕರಿಸಿದೆ. ಈ ಕೇಂದ್ರದ ಪ್ರಗತಿಗಾಗಿ ಎಲ್ಲಾ ಸಹಾಯ ಸಹಕಾರಗಳನ್ನು ನೀಡಲಾಗುವುದೆಂದು ಸಚಿವಾಲಯ ಮತ್ತು ಐ. ಡಿ. ಎ. ಭರವಸೆ ನೀಡಿವೆ.

## ಕೆನಡಾದಲ್ಲಿ ಮಸೀದಿ

ಕೆನಡಾ ಅಹ್ಮದಿಯಾ ಸಂಘಟನೆಯ ವತಿಯಿಂದ ಟೊರೊಂಟೊದಲ್ಲಿ ಒಂದು ಮಸೀದಿ ಮತ್ತು ಮಿಶನ್ ಹೌಸ್ ನಿರ್ಮಾಣ ಕಾರ್ಯವು ಪ್ರಗತಿಪಥದಲ್ಲಿದೆ. ಅಹ್ಮದಿಯಾ ಯುವಜನರು ಶ್ರಮದಾನ ಕಾರ್ಯಕ್ರಮಗಳನ್ನು ಸಹ ಕೈಗೊಂಡಿದ್ದಾರೆ.

## ಬನಿನ್ ರಿಪಬ್ಲಿಕ್‌ನಲ್ಲಿ ಮಸೀದಿ

ಪಶ್ಚಿಮ ಆಫ್ರಿಕದ ಬನಿನ್ ರಿಪಬ್ಲಿಕ್‌ನ (ಮೊದಲಿನ ದಹೋಮಿ) ಗನೀವೆ (Ganive) ಎಂಬಲ್ಲಿ ಅಹ್ಮದಿಯಾ ಮಸೀದಿಯ ನಿರ್ಮಾಣದ ಕೊನೆಯ ಹಂತದಲ್ಲಿದೆ. ಬನಿನ್ ರಾಜಧಾನಿಯಾದ ಪೋರ್ಟೋನೋವೊದಲ್ಲಿ ಎರಡು ವರ್ಷಗಳ ಮೊದಲು ಪ್ರಥಮ ಮಸೀದಿಯು ನಿರ್ಮಿಸಲ್ಪಟ್ಟಿತ್ತು.

—o—o—o—

# • ನಿಧನ ವಾರ್ತೆಗಳು •

(ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್)

## ಅಲ್‌ಹಾಜ್ ಎಫ್. ಎಂ. ಸಿಂಘಾಟೆ

ಗಾಂಬಿಯಾದ ಗವರ್ನರ್ ಜನರಲ್ ಆಗಿದ್ದ ಅಲ್‌ಹಾಜ್ ಸರ್ F. ಮುಹಮ್ಮದ್ ಸಿಂಘಾಟೆಯವರು ಮೇ 17ರಂದು ತನ್ನ 65ನೇ ವಯಸ್ಸಿನಲ್ಲಿ ನಿಧನ ಹೊಂದಿರುವರೆಂದು ನೈಜೀರಿಯಾದ ಅಹ್ಮದಿಯಾ ವಾರ ಪತ್ರಿಕೆ "Truth" ವರದಿ ಮಾಡಿದೆ.

ಅಲ್‌ಹಾಜ್ F. M. ಸಿಂಘಾಟೆ ದಕ್ಷನಾದ ಓರ್ವ ಅಹ್ಮದಿಯಾಗಿದ್ದರು. ಅವರು ಹಲವಾರು ವರ್ಷಗಳಿಂದ ಗಾಂಬಿಯಾ ಅಹ್ಮದಿಯಾ ಜಮಾಅತಿನ ಪ್ರೆಸಿಡೆಂಟರಾಗಿದ್ದರು.

"ಬಾದ್‌ಷಾ ತೇರೆ ಕಪ್‌ಡೋಂಸೆ ಬರ್ಕತ್ ಡೂಂಡೇಂಗೆ" (ರಾಜರು ನಿನ್ನ ವಸ್ತ್ರಗಳಿಂದ ಅನುಗ್ರಹಗಳನ್ನು ಅರಸುವರು) ಎಂಬ ದಿವ್ಯ ಪ್ರಕಟಣೆಯ ಆಧಾರದಿಂದ ಹಜ್ರತ್ ಅಹ್ಮದ್‌ರವರು ಹೇಳಿದ ಭವಿಷ್ಯ ನುಡಿಯನ್ನನುಸರಿಸಿ ವಾಗ್ದತ್ತ ಮಸೀಹರ ವಸ್ತ್ರಗಳಿಂದ ಅನುಗ್ರಹವನ್ನು ಅರಸಿದ ಮೊದಲಿಗ ಎಂಬ ಎಂಬ ಕೀರ್ತಿ ಜನಾಬ್ ಸಿಂಘಾಟೆ ಸಾಹೇಬರಿಗೆ ಲಭಿಸಿದೆಯೆಂಬುದು ಇಲ್ಲಿ ಸ್ಮರಣಾರ್ಹವಾಗಿದೆ.

## ಮೌಲಾನ ಅರ್ಜ್‌ಮಂದ್ ಖಾನ್

ಖಾದಿಯಾನಿನ ಜಾಮಿಅ ಅಹ್ಮದಿಯಾದ ಮಾಜಿ ಪ್ರಿನ್ಸಿಪಾಲರಾಗಿದ್ದ ಮೌಲಾನ ಅರ್ಜ್‌ಮಂದ್ ಖಾನ್ ಸಾಹೇಬರು ಕೆನಡಾದ ಸೈಂಟ್ ಕೆಥರಿನ್ ಆಸ್ಪತ್ರೆಯಲ್ಲಿ ಜೂನ್ 7ರಂದು ನಿಧನ ಹೊಂದಿರುವರು.

ಮೃತರಾದ ಮೇಲಿನ ಈರ್ವ ಮಹನೀಯರ ಆತ್ಮಕ್ಕೆ ಅಲ್ಲಾಹು ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

"ಯುಗರಶ್ಮಿ"ಗೆ ಚಂದಾದಾರರಾಗಿರಿ

ವಾರ್ಷಿಕ ಚಂದಾ :: ನಾಲ್ಕು ರೂಪಾಯಿಗಳು

# AHMADIYYA ENGLISH LITERATURES

1. Islam-The Need of the Hour.
2. Why I Believe in Islam ?
3. The Economic Structure of Islamic Society.
4. The New World Order of Islam.
5. Islamic Teachings on the Moral Condition of man.
6. The Contribution of Islam to the Solution of world problems.
7. Muhammad, the Kindred of Humanity.
8. Muhammad, the Liberator of Women.
9. Islam & Communism. By Hazrat Mirza Bashir Ahmad, M.A.
10. Islam & Slavery. By Hazrat Bashir Ahmad, M.A.
11. Our Teachings. By Hazrat Mirza Ghulam Ahmad.
12. Meaning of Khatamun Nabiyyin. By A. R. Dard, M. A.
13. Truth About Khatme Nabuwat. By Hazrat Mirza Bashir Ahmad, M. A.
14. Latest Findings About Jesus Christ.
15. Why Did Early Christians Accept Islam? By J. D. Shams.
16. A Review of Christianity from a New point of View.
17. The Christian Doctrine of Atonement. By Dr. M.M. Sadiq, D. D., LL. D., S. S. P, (Lond).
18. Jesus in Kashmir.
19. Four Questions by a Christians & Their Answers.
20. The Last Message of the Prince of peace.
    By Hazrat Mirza Gulam Ahmad.
21. How to Get Rid of the Bondage of Sin ?
    By Hazrat Mirza Ghulam Ahmad.
22. Ahmadis Are Muslims.
    A Pronouncement of the Head of the Ahmadiyya Movement.
23. Islam and Universal Brother hood.
24. Muhammad in the Bible.
25. A Rejoinder to the Qadiyanies A Non Muslim Minority in Pakistan.

Write to: The Editor: **YUGARASHMI** Kannada Quarterly,
23/1008, Ansari Road, Bunder, Mangalore-575001.

# ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

ಲೇಖಕ: ಮೌಲಾನ ಜಲಾಲುದ್ದೀನ್ ಶಮ್ಸ್, ಲಂಡನ್.

ಭಾಷಾಂತರ: ಅಬೂ ತಾಹಿರ್.

## ಅಧ್ಯಾಯ – 11 [ ಮುಂದುವರಿದುದು ]

### ಸಂತ ತೋಮಸ್ ಭಾರತದಲ್ಲಿ.

ಯೇಸುಕ್ರಿಸ್ತರ ಪ್ರಯಾಣವನ್ನು ವಿವರಿಸುವ ಮೊದಲು ಅವರ ಹನ್ನೆರಡು ಶಿಷ್ಯರಲ್ಲಿ ಒಬ್ಬರಾದ ಸಂತ ತೋಮಸರ ಸಾಹಸಗಳ ಕುರಿತು ವಿವರಿಸಲು ಉದ್ದೇಶಿಸುತ್ತೇನೆ. ಈತ ಯೇಸುಕ್ರಿಸ್ತರೊಡನೆಯೇ ಆ ದೀರ್ಘ ಪ್ರವಾಸದಲ್ಲಿ ಹೊರಟಿರಬಹುದು. ಅಥವಾ ದೂರ ಪೌರಸ್ತ್ಯ ದೇಶಗಳಲ್ಲೂ ಇಂಡಿಯಾದಲ್ಲೂ ಇದ್ದ ಇಸ್ರಾಯೀಲ್ ಗೃಹದ ಕಳೆದು ಹೋದ ಕುರಿಗಳನ್ನು ಹುಡುಕಲಿಕ್ಕಾಗಿ ಯೇಸುಕ್ರಿಸ್ತರನ್ನು ಅನಂತರ ಹಿಂಬಾಲಿಸಿದ್ದಿರಬಹುದು. ಯೇಸುಕ್ರಿಸ್ತರ ಗಾಯಗೊಂಡ ಕೈಗಳನ್ನೂ ಪಾರ್ಶ್ವವನ್ನೂ ಕಂಡು ಯೇಸುಕ್ರಿಸ್ತರು ಪ್ರತ್ಯಕ್ಷರಾದುದು ಭೂತದ ರೂಪದಲ್ಲಿಯಲ್ಲವೆಂದೂ ಸ್ಥೂಲ ಶರೀರದೊಂದಿಗೆಂದೂ ತೋರಿಸಿಕೊಟ್ಟು ಯೇಸುಕ್ರಿಸ್ತರು ಶಾಪಗ್ರಸ್ತ ಮರಣ ಪಡೆಯಲಿಲ್ಲವೆಂಬ ವಿಷಯಕ್ಕೆ ಸಂತ ತೋಮಸರೇ ಸದಾಕಾಲದ ಸಾಕ್ಷಿಯಾದರು. ಅವರು ಭಾರತಕ್ಕೆ ಪ್ರವಾಸ ಗೈದು ಅಲ್ಲೇ ಮೃತರಾದುದು ಸ್ಪಷ್ಟವಾಗಿ ಗೊತ್ತಾದ ಸಂಗತಿಯಾಗಿದೆ.

1. Dr Francis C. Burkitt, Prof. of Divinity in the University of Cambridge (ಡಾಕ್ಟರ್ ಫ್ರಾನ್ಸಿಸ್ ಸಿ. ಬರ್ಕಿಟ್ ಪ್ರೊಫೆಸರ್ ಓಫ್ ಡಿವಿನಿಟಿ, ಕ್ಯಾಂಬ್ರಿಜ್ ವಿಶ್ವವಿದ್ಯಾಲಯ) ಈ ರೀತಿ ಹೇಳುತ್ತಾರೆ:– ಯೂಸಿಬೀಯುಸನು (H. E. III 1, 1) ತೋಮಸನನ್ನು ಪಾರ್ಥ್ಯಾದ ಸುವಾರ್ತಾ ಪ್ರಸಾರಕನೆಂದು ಕರೆಯಲು ಕಾರಣವೇನೆಂದರೆ ಆತನ ಅಸ್ಥಿಗಳಲ್ಲಿ ಕೆಲವನ್ನು ಸಂರಕ್ಷಿಸಲ್ಪಟ್ಟಿರುವ ಎಡೆಸ್ಸಾವನ್ನು ಪಾರ್ಥಿಯನರ ಎಡೆಸ್ಸಾವೆಂದು ಕರೆಯಲಾಗುತ್ತದೆ. ಈ ಎಲುಬುಗಳನ್ನು ಭಾರತದಿಂದ ಎಡೆಸ್ಸಾಕ್ಕೆ ಕೊಂಡುಬಂದುದಾಗಿ ಪ್ರಸಿದ್ಧಿಯಿದೆ. "ತೋಮಸನ ಕೃತ್ಯಗಳು" (Acts of Thomas) ಎಂಬ ಪುಸ್ತಕ ಆತನ ಮತಪ್ರಚಾರ ಕಾರ್ಯಗಳನ್ನೂ ಆತನ ರಕ್ತತರ್ಪಣವನ್ನೂ ಚಿತ್ರಿಸುತ್ತದೆ....ಯುಪ್ರಟಿಸ್‌ನದಿಯ ಪೂರ್ವಕ್ಕಿರುವ ದೇಶಗಳಲ್ಲಿ "ತೋಮಸನ ಕೃತ್ಯಗಳು" ಆದಿ ಕ್ರಿಸ್ತೀಯರಿಗೆ ಪ್ರಮಾಣ ಗ್ರಂಥವಾಗಿತ್ತು. ಅದರಲ್ಲಿ ಆತನ ಹೆಸರು ಯೂದಾ ತೋಮಸನೆಂದೂ ಆತನು ಯೇಸುಕ್ರಿಸ್ತರೊಡನೆ ಜನಿಸಿದ ಅವಳಿ ಸಹೋದರನೆಂದೂ ಬರೆದುದು ಶ್ರದ್ಧೇಯವಾಗಿದೆ."*

---

* ಯೇಸು ಕ್ರಿಸ್ತರ ಅವಳಿ ಸಹೋದರನೆಂದು ಆತನು ಕರೆಯಲ್ಪಡಲು ಕಾರಣವೇನೆಂದರೆ ಶಿಷ್ಯರಲ್ಲಿ ಆತನು ಮಾತ್ರ ಯೇಸು ಕ್ರಿಸ್ತರ ದೀರ್ಘ ಯಾತ್ರೆಯಲ್ಲಿ ಅವರ ಜೊತೆಗಿದ್ದು, ಯೇಸು ಕ್ರಿಸ್ತರ ಆಗಮನೋದ್ದೇಶವನ್ನು ತನ್ನ ಉದ್ದೇಶವೆಂದೇ ಬಗೆದು ಆತನು ಅವರ ಸಂದೇಶಗಳನ್ನು ಪ್ರಚಾರ ಗೊಳಿಸಿದನು. ಇದಲ್ಲದೆ ಬೇರೆ ಯಾವ ಕಾರಣದಿಂದಲೂ ಆತನನ್ನು ಸಹಜಾತನಾದ ಸಹೋದರನೆಂದು ಕರೆಯಲು ಸಾಧ್ಯವಿಲ್ಲ.

"ತೋಮಸನ ಕೃತ್ಯಗಳು'' ಚಾರಿತ್ರಿಕ ಸಾಕ್ಷ್ಯಗಳಿಂದ ಕೂಡಿವೆಯೆಂದೂ ಅವುಗಳಲ್ಲಿ ವಿವರಿಸಿದ ಸಂಭವಗಳು ನಡೆದುದು ದಕ್ಷಿಣ ಭಾರತದಲ್ಲಿಯೆಂದೂ ಹೇಳಲಾಗುತ್ತಿದೆ. ಭಾರತದ ಕುರಿತು ವಿವರಿಸಲಾದ ಸಂಗತಿಗಳು ಹೆಚ್ಚಾಗಿ ಭಾರತದ ವಾಯುವ್ಯ ಪ್ರದೇಶಕ್ಕೂ* ಭಾರತ ಮತ್ತು ಮೆಸಪೊಟೇಮಿಯಾ ಮಧ್ಯವಿರುವ ದೇಶಗಳಿಗೂ ಸಂಬಂಧಿಸಿವೆ. ದಕ್ಷಿಣ ಭಾರತದ ಪುರಾತನ ಕ್ರೈಸ್ತರನ್ನು "ಸಂತ ತೋಮಸನ ಕ್ರೈಸ್ತರೆಂದು'' ಕರೆಯುಲಾಗುತ್ತಿದೆ. ಇವರ ಕಥೆಗಳೂ "ಸಂತ ತೋಮಸನ ಕೃತ್ಯಗಳಲ್ಲಿ'' ಬರುವ ಸಂಭವಗಳೂ ಚಾರಿತ್ರಿಕವಾಗಿ ಸಂಬಂಧಿಸಿವೆಯಾದುದರಿಂದ ಅವರ ಕುರಿತು ಸಹ ಸ್ವಲ್ಪ ವಿವರಿಸುವೆನು.

ಒಂದು ಚರಿತ್ರೆಯ ಪ್ರಕಾರ ಸಂತ ತೋಮಸ್ ಮಲಬಾರ್ ಪ್ರದೇಶದಲ್ಲಿ (ಭಾರತದ ನೈಋತ್ಯ ಕರಾವಳಿ ಭಾಗ) ಚರ್ಚುಗಳನ್ನು ಸ್ಥಾಪಿಸಿ ಮದರಾಸಿನ ಒಂದು ಉಪನಗರವಾಗಿರುವ ಮೈಲಾಪುರಿಗೆ ಹೋದರು. ಅಲ್ಲಿ ಅವರ ಸಮಾಧಿ ಕ್ರಿ. ಶ. 1547ರಲ್ಲಿ ಪೊರ್ತುಗೀಸರಿಂದ ಪುನರ್ನಿರ್ಮಿತಗೊಂಡು 'ಸಂತ ತೋಮಸನ ಪರ್ವತ'ದಲ್ಲಿ ಈಗಲೂ ಇದೆ. ಅಲ್ಲಿರುವ ಒಂದು ಸ್ಮಾರಕ ಶಿಲುಬೆ ಪಹ್ಲವಿ ಲಿಪಿಯಲ್ಲಿ ಬರೆದಿರುವ ಲಿಖಿತದಿಂದ ಕೂಡಿದೆ. ಅದು ಸುಮಾರು ಏಳನೆಯ ಶತಮಾನದ್ದಾಗಿರಬಹುದು. ಪರ್ಶಿಯನ್ (ಪೂರ್ವ ಸಿರಿಯನ್) ವಂಶದ, ನೆಸ್ಟೋರಿಯನ್ ವಿಶ್ವಾಸದ ಕ್ರಿಸ್ತೀಯರು ಸಿಲೋನಿನಲ್ಲೂ, ಮಲಬಾರಿನಲ್ಲೂ ಗಾಲಿಯಾನದಲ್ಲೂ (ಉತ್ತರ ಬೊಂಬಾಯಿ) ಕ್ರಿ. ಶ. 55ರ ಮೊದಲು ವಾಸವಿದ್ದರೆಂದು ಫಾದರ್ ಕಾಸ್ಮೊಸ್ ಇಂಡಿಕೋಪ್ಲೆನ್‌ಸ್ಟೆಸ್‌ನಿಂದ ತಿಳಿದುಬಂದಿದೆ. (Encyclopaedia Britannica Ed 14: "St. Thomas")

* ಇದು ನಮ್ಮ ಸಿದ್ಧಾಂತವನ್ನು ದೃಢೀಕರಿಸುತ್ತದೆ. ವಾಯುವ್ಯ ಪ್ರದೇಶಗಳಲ್ಲಿ ಕಳೆದು ಹೋದ ಹತ್ತು ಗೋತ್ರಗಳ ಬಹುಭಾಗ ವಾಸಿಸುತ್ತಿದ್ದರು ಯೇಸು ಕ್ರಿಸ್ತರು ಮತ್ತು ಸಂತ ತೋಮಸ್ ಜೊತೆಯಲ್ಲಿ ವಾಯುವ್ಯ ಪ್ರದೇಶಕ್ಕೆ ಬಂದಿರಬಹುದು ಅನಂತರ ಯೇಸು ಕ್ರಿಸ್ತರು ಅವರನ್ನು ಭಾರತದ ನೈಋತ್ಯ ಪ್ರದೇಶಕ್ಕ ಕಳುಹಿಸಿರಬಹುದು. ಅಥವಾ ತೋಮಸ್ ಸ್ವಇಚ್ಛೆಯಿಂದ ಯೇಸು ಕ್ರಿಸ್ತರನ್ನು ಹಿಂಬಾಲಿಸಿ ಅನಂತರ ಬಂದಿದ್ದರೆ ಸ್ವಇಚ್ಛೆಯಿಂದಲೇ ಭಾರತದ ನೈಋತ್ಯ ಭಾಗಗಳಿಗೆ ಬಂದಿರಬಹುದು. ಇಲ್ಲಿ ಯಹೂದಿಗಳು ವಾಸವಾಗಿದ್ದರು.

2. ರೆವರೆಂಡ್ ಯೀಟ್ಸ್ ಬ್ರೌನ್ (Rev. Yeats Brown) ಟ್ರಾವಂಕೂರನ್ನು ಸಂದರ್ಶಿಸಿದ ನಂತರ ಬರೆದಿರುವುದನ್ನು ನೋಡಿರಿ:—

ತಿರುವಾಂಕೂರಿನಲ್ಲಿ ಮಾತ್ರವಲ್ಲ ಪ್ರಪಂಚದಲ್ಲೇ ಅತ್ಯಂತ ಪುರಾತನವಾದ ಕ್ರಿಸ್ತೀಯ ಆರಾಧನಾ ಕ್ರಮ "ಮಲಂಗರನ್-ಸೀರಿಯನ್'' ಸಂಪ್ರದಾಯದ್ದಾಗಿದೆ. ಇವರು ಹೇಳುವುದೇನೆಂದರೆ ಇವರ ಪ್ರಥಮನನ್ನು ಕ್ರಿ. ಶ. 59ರಲ್ಲಿ ಸಂತ ತೋಮಸನು ಕರಾವಳಿಯಲ್ಲಿ ಕಾಲಿರಿಸಿದಾಗ ಸ್ವತಃ ಸ್ನಾನ ಮಾಡಿಸಿದನೆಂದಾಗಿದೆ. ಅವರನ್ನು ಈತನು ನಸ್ರಾಣಿಗಳೆಂದು (Nazarenes) ಕರೆದಿದ್ದನು. ಏಕೆಂದರೆ ಕ್ರೈಸ್ತರೆಂಬ ಪದ ಆಗ ಪ್ರಾಬಲ್ಯದಲ್ಲಿ ಬಂದಿರಲಿಲ್ಲ.''

(ಅಪೊಸ್ತಲರ ಕೃತ್ಯಗಳು 11:26)*

3. ಆರ್ಚ್ ಬಿಷಪ್ ಲಾರ್ಡ್ ಲ್ಯಾಂಗ್ (ಕೆಂಟರ್‌ಬರಿಯ ಹಿಂದಿನ ಆರ್ಚ್ ಬಿಷಪ್) ಒಂದು ರೇಡಿಯೋ ಭಾಷಣದಲ್ಲಿ ಈ ರೀತಿ ಹೇಳಿರುವರು:

"ಸಂತ ತೋಮಸ್ ಭಾರತಕ್ಕೆ ಹೋದ ಐತಿಹ್ಯ ಒಮ್ಮೆಯೂ ಖಂಡಿಸಲ್ಪಡಲಿಲ್ಲ. ಖಂಡಿತವಾಗಿಯೂ ಭಾರತದಲ್ಲಿ ಕ್ರೈಸ್ತ ಧರ್ಮಕ್ಕೆ ಪುರಾತನವಾದ ಅಡಿಪಾಯವಿದೆ.'' (Great Britain and the East, Dec. 3, 1936, London.)

H. G. ರಾಲಿನ್ಸ್‌ನ್ C. I. E. ತನ್ನ ಪುಸ್ತಕವಾದ "India, A Short Cultural History'' ಯ 92 ಮತ್ತು 93ನೇ ಪುಟಗಳಲ್ಲಿ ಈ ರೀತಿ ಬರೆದಿರುವರು:

"ತಕ್ಷಶಿಲೆಯ ಇಂಡೋ-ಪಾರ್ಥಿಯನ್ ಅಥವಾ ಶಾಕ್ಯವಂಶದ ಒಬ್ಬ ರಾಜನು ನಮಗೆ ಪ್ರತ್ಯೇಕವಾಗಿ ಶ್ರದ್ಧಾರ್ಹನಾಗಿದ್ದಾನೆ. ಈತನನ್ನು ಗ್ರೀಕರು ಗೊಂಡೋಫೇರಸ್ ಎಂದು ಕರೆದಿದ್ದರು. "ಸಂತತೋಮಸನ ಕೃತ್ಯಗಳು'' ಎಂಬ ಬೈಬಲಿನಿಂದ ಹೊರತಾಗಿರುವ ಕೃತಿಯಲ್ಲಿ ಈತನ ದರಬಾರಿಗೆ ಅಪೊಸ್ತಲನು ಬಂದು ಕ್ರೈಸ್ತಮತ ಪ್ರಚಾರಗೊಳಿಸಿದುದು ಬರೆಯಲಾಗಿದೆ. ಸಂತ

* The Spectator, No. 5634, June 19, 1936. Page 1124, London.

ತೋಮಸ್ ಭಾರತವನ್ನು ಸಂದರ್ಶಿಸಿದುದರ ಕುರಿತು ತುಂಬಾ ಸಂಶಯವಿದ್ದಿತು. ಆದರೆ ಇತ್ತೀಚೆಗಿನ ಸಂಶೋಧನೆಗಳಿಂದ ಈ ಕಥೆಯು ಚಾರಿತ್ರಿಕ ಸಂಭವಗಳ ಪ್ರತೀಕವಾಗಿದೆಯೆಂದು ಸ್ಪಷ್ಟಗೊಂಡಿದೆ. ಬಾರ್ಥೊಲೋಮ್ಯು ಮತ್ತು ತೋಮಸ್ ಸುವಾರ್ತಾ ಪ್ರಚಾರಕರಾಗಿ ಪೂರ್ವಕ್ಕೆ ಕಳುಹಿಸಲ್ಪಟ್ಟಿದ್ದರು. ತೋಮಸ್ ಆಗ ಎಲ್ಲರಿಗೂ ಗೊತ್ತಿದ್ದ ಸಮುದ್ರಮಾರ್ಗವಾಗಿ ಅಲೆಕ್ಸಾಂಡ್ರಿಯದಿಂದ ಸಿಂಧೂನದಿಯ ದಡದಲ್ಲಿದ್ದ ತಕ್ಷಶಿಲೆಗೆ ಬಂದಿರಬಹುದು. ಆತನನ್ನು ಗೊಂಡೋಫೆರಸನು ತನ್ನ ದರಬಾರಿನಲ್ಲಿ ಆದರದಿಂದ ಸ್ವೀಕರಿಸಿರಬಹುದು. ಯಾಕೆಂದರೆ ತಕ್ಷಶಿಲೆಯು ಎಲ್ಲಾ ಸಂಸ್ಕೃತಿಗಳ ಕೇಂದ್ರವಾಗಿದ್ದು, ವಿದೇಶೀಯ ರಾಜ್ಯಗಳ ಮತ ಪ್ರಚಾರಕರ ಉಪದೇಶಗಳನ್ನು ಆಲಿಸಲು ಸದಾಕಾಲ ಸಿದ್ಧವಾಗಿತ್ತು. ಆದರೆ ಆತನ ಮತಪ್ರಚಾರಕ ಕಾರ್ಯಗಳು ಕುಶಾನರ ಆಕ್ರಮಣದಿಂದ ತಡೆಗಟ್ಟಲ್ಪಟ್ಟು ಆತನು ಊರು ಬಿಟ್ಟೋಡಿದನು. ಆತನು ಸಿಂಧೂನದಿಯು ಸಮುದ್ರ ಸೇರುವಲ್ಲಿಗೆ ಬಂದು ದೋಣಿಯ ಮೂಲಕ ಮಲಬಾರ್ ಕರಾವಳಿಯಲ್ಲಿ ರೋಮನ್ ನಿವೇಶನವಾದ "ಮುಝಿರಿಸ್" (Muziris)ಗೆ ಹೋದನು. ದಾರಿಯಲ್ಲಿ "ಸೊಕೊತ್ರ" (Socotra)ದಲ್ಲಿಯೂ ಇಳಿದಿದ್ದನು. ಇಲ್ಲಿ ಈತನು ಕ್ರಿ. ಶ. 52ರಲ್ಲಿ ಮಲಬಾರಿನ ಚರ್ಚ್ ಸ್ಥಾಪಿಸಿದನು. ಇಪ್ಪತ್ತು ವರ್ಷಗಳ ನಂತರ ಈತನು ತನ್ನ ಕಾರ್ಯಕ್ಷೇತ್ರವನ್ನು ಪೂರ್ವ ತೀರಕ್ಕೆ ಬದಲಾಯಿಸಿದನು. ಅಲ್ಲಿ ಆತನು ಬ್ರಾಹ್ಮಣರಿಂದ ಕೊಲೆ ಮಾಡಲ್ಪಟ್ಟನು. ಆತನ ಸಮಾಧಿ ಮದ್ರಾಸಿನ ಮೈಲಾಪುರದಲ್ಲಿದೆ."

L. W. Brown (ಎಲ್.ಡಬ್ಲ್ಯು. ಬ್ರೌನ್, ಯುಗಾಂಡಾದ ಬಿಷಪ್ ಹಾಗೂ ಕೇರಳ ಯುನೈಟೆಡ್ ಥಿಯೊಲೋಜಿಕಲ್ ಸೇಮಿನಾರಿನ ಮಾಜಿ ಪ್ರಿನ್ಸಿಪಾಲ್) ಬರೆದಿರುವುದನ್ನು ನೋಡಿರಿ:

"ಸಂತತೋಮಸನ ಕೃತ್ಯಗಳಲ್ಲಿ "ಇಂಡಿಯಾ" ಎಂದು ಬರೆದುದು ನಮ್ಮ ಇಂಡಿಯಾದ ಕುರಿತಾಗಿರಬಹುದು ಅಥವಾ ಹೆಚ್ಚಾಗಿ ಅದು ವಾಯುವ್ಯ ಗಡಿನಾಡು ಪ್ರಾಂತ್ಯಗಳ (ಇದು ಈಗ ಪಾಕಿಸ್ಥಾನದಲ್ಲಿದೆ) ಕುರಿತಾಗಿರಬಹುದು. ಗೊಂಡೋಫೆರಸ್ ರಾಜನೂ ಆತನ ತಮ್ಮ ಗಾಡನೂ ಚಾರಿತ್ರಿಕ ವ್ಯಕ್ತಿಗಳಾಗಿದ್ದಾರೆ. ಇವರು ಸೀಥೋಇಂಡಿಯನ್ ಸಾಮ್ರಾಜ್ಯವನ್ನು (ಸಿಂಧೂನದಿಯ ಪಶ್ಚಿಮ ಮತ್ತು ಪೂರ್ವ ಪ್ರದೇಶ) ಕ್ರಿ. ಶ. 19-45ರ ವರೆಗೆ ಆಳುತ್ತಿದ್ದರು.[1] ಕ್ರಿ. ಶ. ಒಂದನೆಯ ಶತಮಾನದಲ್ಲಿ ಭಾರತದ ವಾಯುವ್ಯ ಪ್ರಾಂತ್ಯದಲ್ಲಿ ಯಹೂದಿಗಳ ಗಣ್ಯವಾದೊಂದು ನಿವೇಶನವಿದ್ದ ಕಾರಣ ಅದು ಆ ಕಾಲದ ಕ್ರಿಸ್ತೀಯ ಪ್ರಚಾರಕರನ್ನು ಆಕರ್ಷಿಸಿರಬಹುದು.[2] ಇದಲ್ಲದೆ ಬೇರೆ ಕೆಲವು ಸಂಗತಿಗಳು ಸಹ ಸಂತತೋಮಸ್ ಉತ್ತರದಲ್ಲಿ ಕಾರ್ಯನಿರ್ವಹಿಸಿದುದನ್ನು ಸ್ಪಷ್ಟಗೊಳಿಸುತ್ತದೆ. ಬಾರ್ಡಿಸನನು (Bardisan) ತನ್ನ ಬುಕ್ ಆಫ್ ಫೇಟ್ (ಕ್ರಿ. ಶ. 196ರಲ್ಲಿ ರಚಿತವಾದುದು)ನಲ್ಲಿ ಪಾರ್ಥಿಯನ್ ಕ್ರಿಸ್ತೀಯರು ಬಹುದೈವಾರಾಧಕರೊಡನೆ ನಿವಾಸಿಸುವುದರ ಕುರಿತು ಬರೆದಿರುವನು. ಇದು ಪಾರ್ಥಿಯ ಸಾಮ್ರಾಜ್ಯ ಕುಶಾನರಿಂದ ಕ್ರಿ. ಶ. 50ರಲ್ಲಿ ಧ್ವಂಸಗೊಂಡ ಕಾರಣವಾಗಿರಬಹುದು.[3] ಉತ್ತರ ಭಾರತದಲ್ಲಿ ಕೆಲವು ಕ್ರೈಸ್ತ ಗೋತ್ರಗಳು ತಮ್ಮ ವಿಶ್ವಾಸವನ್ನು ರಹಸ್ಯವಾಗಿಟ್ಟಿರುವುದು ತಿಳಿದುಬಂದಿದೆ. ಉದಾಹರಣೆಗೆ ಸಿಂಧೂನದಿಯ ಬಳಿಯಲ್ಲಿ ಒಂದು ಫಕೀರರ ಗುಂಪು, ಅರ್ಮಾಯಿಕ್ ಹೆಸರಿನಿಂದ ತಮ್ಮನ್ನು ಕರೆಯುತ್ತಿದ್ದು (ಬಾರ್ಥಲೋಮಿ ಎಂಬ ರೀತಿಯಲ್ಲಿ) ಸಂತತೋಮಸನಿಂದ ಮತಾಂತರಗೊಂಡವರ ಸಂತಾನವೆಂದು ವಾದಿಸುತ್ತಿದ್ದು ಅವರೊಡನೆ ಇರುವ ಪುಸ್ತಕಗಳೂ ಸ್ಮಾರಕವಸ್ತುಗಳೂ ಅವುಗಳನ್ನು ಸಾಕ್ಷೀಕರಿಸಲಿವೆಯೆಂದು ಹೇಳಲಾಗುತ್ತಿದೆ. ಆದರೆ ಹೊರಗಿನವರಿಗೆ ಯಾರಿಗೂ ಈ ತಥಾಕಥಿತ ಸಾಕ್ಷ್ಯಗಳನ್ನು ನೋಡಲು ಸಾಧ್ಯವಾಗಲಿಲ್ಲ. ...."

---

1. ಖರೋಸ್ತಿ ಲಿಪಿ (ಸಂಸ್ಕೃತ ಸೆಮಿಟಿಕ್ ಲಿಪಿಯಲ್ಲಿ) ಇರುವ ನಾಣ್ಯಗಳೂ ಅರ್ಮಾಯಿಕ್ ಭಾಷೆಯಲ್ಲಿರುವ ಅಶೋಕನ ಒಂದು ಶಾಸನವೂ (ಇದು ತಕ್ಷಶಿಲೆಯಲ್ಲಿದೆ) ಇದನ್ನು ಸತ್ಯವೆಂದು ತೋರಿಸುತ್ತದೆ. (Journal of Asiatic Studies 1915 pages 340-7, Herzfield, Epigraphia India XIX, pages 251-3, ಅದೇ ರೀತಿ N. A. Faris, the Arab Heritage ನೋಡಿರಿ.)

2. ಕ್ಯಾಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ page 580-5.

3. R. A. Trotter, the History of Chritianity in Sind, Conference, February 1947.

(1956ರಲ್ಲಿ ಕ್ಯಾಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್ಸಿನಿಂದ ಪ್ರಕಟವಾದ "Indian Christians of St. Thomas and Account of the Ancient Syrian Church of Malabar" ಎಂಬ ಪುಸ್ತಕದ ಪುಟ 47 ನೋಡಿರಿ.)

Christians and Christianity in India and Pakistan (by P. Thomas, George Allen & Unwin Ltd; London 1954.) ಎಂಬ ಗ್ರಂಥದಲ್ಲಿ ಈ ರೀತಿ ಬರೆಯಲಾಗಿದೆ:

"ಸಂತ ತೋಮಸನು ಭೂಮಾರ್ಗವಾಗಿಯೇ ಗೊಂಡೋಫೇರಸನ ರಾಜ್ಯಕ್ಕೆ ಬಂದು ದಕ್ಷಿಣ ಭಾರತಕ್ಕೆ ಹೋಗುವ ಮೊದಲು ಸುವಾರ್ತೆಗಳನ್ನು ಅಲ್ಲಿ ಪ್ರಚಾರಗೊಳಿಸಿರಬಹುದು. ಪಾರ್ಥಿಯದಲ್ಲಿ ಸಹ ಆತನು ಮತಪ್ರಚಾರ ಗೊಳಿಸಿದನೆಂದು ಶ್ರದ್ಧೇಯವಾಗಿದೆ. ಪರ್ಶಿಯಾದಲ್ಲೂ ಅಫ್‌ಘಾನಿಸ್ಥಾನದಲ್ಲಿಯೂ ಪಾರ್ಥಿಯನರ ಕೈಕೆಳಗೆ ದೇಶ ಭ್ರಷ್ಟರಾದ ಯಹೂದಿಗಳಿದ್ದು ಅವರಿಗೆ ಮೆಸ್ಸಾಯನ ಬರುವಿಕೆಯ ಶುಭ ಸಂದೇಶವನ್ನು ತಲುಪಿಸಲು ಉತ್ಸುಕನಾದ ಸ್ವಂತ ತೋಮಸನು ಆ ಪ್ರದೇಶಕ್ಕೆ ಮೊದಲು ಹೋಗಿರಬಹುದು. ಈಗಲೂ ಭಾರತ–ಅಫ್‌ಘಾನ್ ಗಡಿ ಪ್ರದೇಶದ ಗುಡ್ಡಗಾಡು ಪ್ರದೇಶದ ಜನರು ತಾವು ಇಸ್ರಾಯೇಲ್ ವಂಶದವರೆಂದು ವಾದಿಸುತ್ತಾರೆ.

ಗೊಂಡೋಫೇರಸನ ರಾಜ್ಯದಲ್ಲಿ ಸುವಾರ್ತಾ ಪ್ರಚಾರದ ನಂತರ ಅಪೋಸ್ತಲನ ಗಮನವು ಇತರ ರಾಜ್ಯಗಳಿಗೆ ವಿಸ್ತರಿಸಿತು. ತೋಮಸನಂತಹ ತೀವ್ರ ಮತವಾದಿಗೆ ತನ್ನ ಯಜಮಾನನ ಸಂದೇಶ ತಲುಪದೆ ಒಂದೇ ಒಂದು ದೇಶವಾದರೂ ಬಾಕಿಯಿದ್ದರೆ ಸಮಾಧಾನವಿರುತ್ತಿರಲಿಲ್ಲ. ಆ ಕಾಲದಲ್ಲಿ ಹಿಂದುಸ್ಥಾನದಲ್ಲಿದ್ದ ಬಲ ಹೀನವಾದ ರಾಜ್ಯಾಡಳಿತೆಯೂ ಪಶ್ಚಿಮ ಕರಾವಳಿಯಲ್ಲಿ ವಾಸವಾಗಿರುವ ಯಹೂದಿ ಸಮಾಜಗಳ ವಿಷಯವೂ ಆತನು ಗುಂಡೋಫೇರಸನ ರಾಜ್ಯದಿಂದ ಪಶ್ಚಿಮ ಕರಾವಳಿಗೆ ಬರುವಂತೆ ಪ್ರೇರೇಪಿಸಿರಬಹುದು."

ಈರೀತಿ ಸಂತ ತೋಮಸ್ ಕಳೆದುಹೋದ ಗೋತ್ರಗಳು ವಾಸಿಸಿದ ಪ್ರದೇಶಗಳಿಗೆ ಭೇಟಿಕೊಟ್ಟು ಯೇಸುಕ್ರಿಸ್ತರು ಶಿಷ್ಯರಿಗೆ ಆಜ್ಞಾಪಿಸಿದ "ನೀವು ಇಸ್ರಾಯಿಲ್ ಗೃಹದ ಕಾಣೆಯಾದ ಕುರಿಗಳೆಡೆ ಹೋಗುವುದು ವಿಹಿತ" ಎಂಬ ಕರ್ತವ್ಯವನ್ನು ಪೂರ್ತಿಗೊಳಿಸಿದರು.

ಸಂತ ಯಾಕೋಬನು ಈ ಆಜ್ಞೆಯನ್ನನುಸರಿಸಿ ಹನ್ನೆರಡು ಗೋತ್ರಗಳಿಗೆ (ಅವರೆಲ್ಲಿದ್ದರೂ ಸರಿ) ಒಂದು ಪತ್ರ ಬರೆದನು. ಆತನು ತನ್ನ ಪತ್ರವನ್ನು ಈರೀತಿ ಪ್ರಾರಂಭಿಸಿದನು: "ದೇವರ ಮತ್ತು ಕರ್ತನಾದ ಯೇಸು ಕ್ರಿಸ್ತನ ಸೇವಕನಾದ ಯಾಕೋಬನು ಚದರಿಹೋದ ಹನ್ನೆರಡು ಗೋತ್ರಗಳಿಗೆ ಬರೆದುದು. ವಂದನೆಗಳು".

## ಯೇಸುಕ್ರಿಸ್ತರು ಕಾಣೆಯಾದ ಕುರಿಗಳನ್ನು ಅನ್ವೇಷಿಸುತ್ತಾ

ನಾಲ್ಕನೆಯ ಸುವಾರ್ತೆಯಲ್ಲಿ ಯೇಸುಕ್ರಿಸ್ತರು ಟೈಬೀರಿಯಸ್ ಸಮುದ್ರದ ಬಳಿಯಲ್ಲಿ ಕೊನೆಯ ಬಾರಿ ಶಿಷ್ಯರನ್ನು ಭೇಟಿಯಾದರೆಂದೂ, ಅಲ್ಲಿ ಊಟ ಮಾಡಿದ ನಂತರ ಪೇತ್ರನೊಡನೆ "ನನ್ನ ಕುರಿಗಳಿಗೆ ತಿನ್ನಿಸು" **ಎಂದು ನುಡಿದು ಕೊನೆಯದಾಗಿ ಅಗಲಿದುದಾಗಿ ಬರೆದಿದೆ.** ಅಲ್ಲಿಂದ ಅವರು ಎಲ್ಲಿಗೆ ಹೋದರು? ಸುವಾರ್ತೆಗಳಲ್ಲಿ ಇದರ ಕುರಿತು ಏನೂ ಬರೆದಿಲ್ಲ. "ಅಪೊಸ್ತಲರ ಕೃತ್ಯಗಳ"ಲ್ಲೂ ಸಂತ ಪೌಲನ ಪತ್ರಿಕೆಗಳಲ್ಲೂ ಸಂತ ಪೌಲನು ದಮಾಸ್ಕಸ್‌ನ ಸಮೀಪ ದರ್ಶನದಲ್ಲಿ ಯೇಸುಕ್ರಿಸ್ತರನ್ನು ಕಂಡನೆಂದು ಬರೆದಿದೆ. ಆದರೆ I ಕೊರಿಂಥದವರಿಗೆ 15:8ರ ವಚನ ಕೆಲವು ಚಿಂತಕರನ್ನು ಯೇಸುಕ್ರಿಸ್ತರು ಪೌಲನ ಮತಾಂತರದ ಕಾಲದಲ್ಲಿ ಸಿರಿಯಾದ ಭಾಗದಲ್ಲಿದ್ದಿರಬಹುದೆಂಬ ತೀರ್ಮಾನಕ್ಕೆ ತಲಪುವಂತೆ ಮಾಡಿದೆ. (ಆಗ ಶಿಲುಬೆಯ ಸಂಭವ ನಡೆದು 6ರಿಂದ 12 ತಿಂಗಳ ಅವಧಿ ಕಳೆದಿರಬಹುದು). ಜಡ್ಜ್ ಡೋಕರ್ (ಡಿಸ್ಟ್ರಿಕ್ಟ್ ಕೋರ್ಟ್ ಜಡ್ಜ್, ಸಿಡ್ನಿ) ಸೌಲನ ಮತ ಪರಿವರ್ತನದ ಕುರಿತು ಈ ಕೆಳಗಿನ ವಿವರಣೆ ಕೊಡುತ್ತಾರೆ: "ಯೇಸು ಕ್ರಿಸ್ತರು ತಾನು ಗಲಿಲಾಯದಲ್ಲಿ ಸುರಕ್ಷಿತನಾಗಿರುವುದು ಸಾಧ್ಯವಿಲ್ಲವೆಂದು ಗ್ರಹಿಸಿ ಇಸ್ರಾಯೇಲ್ ವಂಶದ ಕಾಣೆಯಾದ ಗೋತ್ರಗಳನ್ನು ಪೂರ್ವ ದೇಶಗಳಲ್ಲಿ ಭೇಟಿಯಾಗಲು ಡಮಾಸ್ಕಸ್‌ನ ಮೂಲಕ ಹೊರಟರು. ಅಲ್ಲಿ ಅವರು ಕೆಲ ಕಾಲವಿದ್ದು ಅನಾನಿಯಸ್ ಮತ್ತು ಇತರರನ್ನು ಶಿಷ್ಯರನ್ನಾಗಿ ಮಾಡಿದರು. ಇದೇ ಕಾರಣದಿಂದ ಯಹೂದಿಗಳು ಒಂದು ಪ್ರತಿನಿಧಿ ಸಂಘವನ್ನು ಕ್ರಿಸ್ತೀಯರ ಮರ್ದನಕ್ಕಾಗಿ ಕಳುಹಿಸಿತು. ಯೇಸು ಕ್ರಿಸ್ತರು ಇದನ್ನು ತಿಳಿದು ಹಿಂದಿನ ಎಲಿಯಾ ಪ್ರವಾದಿಯ ಹಾಗೆ ತನ್ನ ವಿರೋಧಿಯನ್ನು ಸ್ವತಃ ಭೇಟಿಯಾಗಲು ಹೊರಟರು. ಅವರ ಅದ್ಭುತವಾದ ವ್ಯಕ್ತಿ ಪ್ರಭಾವ

ದಿಂದ ಆಕರ್ಷಿತನಾದ ಸೌಲನು ಮರ್ದಿಸುವವನ ಸ್ಥಾನ ದಿಂದ ಶಿಷ್ಯನ ಸ್ಥಾನಕ್ಕೆ ಪರಿವರ್ತಿತನಾದನು. ಇವರ ಸಂದರ್ಶನ ಅನನಿಯಾಸನ ಮನೆಯಲ್ಲಿಯೋ ಯೇಸು ಕ್ರಿಸ್ತರ ವಾಸಸ್ಥಾನದಲ್ಲಿಯೋ ಮುಂದುವರಿದಿರಬಹು ದಾಗಿ ತೋರುತ್ತದೆ. ಯಹೂದಿಗಳ ಪ್ರತಿನಿಧಿ ಸಂಘದ ಆಗಮನವು ತಾನು ದಮಾಸ್ಕಸ್‌ನಲ್ಲಿರುವುದು ಸುರ ಕ್ಷಿತವಲ್ಲವೆಂಬ ಭಾವನೆಯನ್ನು ಯೇಸುಕ್ರಿಸ್ತರಲ್ಲಿ ಉಂಟುಮಾಡಿತು. ಹಾಗೆ ಅವರು ಪೂರ್ವ ದೇಶಗಳ ಯಾತ್ರೆಯ ಉದ್ದೇಶದಿಂದ ಬಾಬಿಲೋನಿನ ಕಡೆಗೆ ಹೋದರು.''

ಈ ವಿವರಣೆಯನ್ನು Johannes Weiss (Paul and Jesus, Page 31) ಈರೀತಿ ಸಮ್ಮತಿಸಿ ಬರೆದಿರುವರು: ''ಯೇಸುಕ್ರಿಸ್ತರ ಮಾನುಷಿಕ ವ್ಯಕ್ತಿತ್ವ ದಿಂದ ಪೌಲನು ಅತ್ಯಂತಾಕರ್ಷಿತನಾಗಿದ್ದನೆಂದು ತೀರ್ಮಾನವಿಲ್ಲದಿದ್ದರೆ ಪೌಲನಿಗೆ ಕಂಡುಬಂದ ದರ್ಶನವೂ ಆತನ ಮತಾಂತರಗೊಳ್ಳುವಿಕೆಯೂ ಮನಶ್ಶಾಸ್ತ್ರರೀತ್ಯಾ ಗ್ರಾಹ್ಯವಾಗಿರುವುದಿಲ್ಲ''. (If Jesus Did not Die Upon the Cross? pages 75-76, by Docker).

## ಯೇಸುಕ್ರಿಸ್ತರು ನಿಸಿಬಿಸ್*ನಲ್ಲಿ

ಅಹ್ಮದಿಯಾ ಸಂಘದ ಸ್ಥಾಪಕರು ತನ್ನ ಪುಸ್ತಕ ವಾದ ''ಮಸೀಹ್ ಹಿಂದೂಸ್ಥಾನ್‌ಮೇ'' ಎಂಬ ಪುಸ್ತಕ ದಲ್ಲಿ ಪ್ರಸಿದ್ಧ ಚಾರಿತ್ರಿಕ ಗ್ರಂಥವಾದ ''ರೌಸತುಲ್ ಸ್ಸಫಾ'' ಎಂಬ ಗ್ರಂಥದಿಂದ ಈ ಕೆಳಗಿನಂತೆ ಉದ್ಧರಿಸು ತ್ತಾರೆ:—

"ಯೇಸುಕ್ರಿಸ್ತರು ಬಹಳ ದೊಡ್ಡ ಯಾತ್ರಿಕನಾದ ಕಾರಣದಿಂದಲೇ 'ಮಸೀಹ'ರೆಂದು ಕರೆಯಲ್ಪಟ್ಟರು. ಅವರು ಉಣ್ಣೆಯಿಂದ ಮಾಡಿದ ಶಿರೋವಸ್ತ್ರವನ್ನೂ ಅಂಗಿಯನ್ನೂ ತೊಡುತ್ತಿದ್ದರು. ಅವರು ಕೈಯ್ಯ ಲ್ಲೊಂದು ಬೆತ್ತವನ್ನು ಹಿಡಿದು ರಾಜ್ಯದಿಂದ ರಾಜ್ಯಕ್ಕೂ ನಗರದಿಂದ ನಗರಕ್ಕೂ ಪ್ರಯಾಣಿಸುತ್ತಿದ್ದರು. ರಾತ್ರೆ ಯಾಗುವಾಗ ಅವರು ವಿಶ್ರಮಿಸುತ್ತಿದ್ದರು. ಅವರು ಕಾಡು ಸಸ್ಯಗಳನ್ನೂ, ಫಲಗಳನ್ನೂ ಭಕ್ಷಿಸುತ್ತಲೂ ಸಿಕ್ಕಿ ದಲ್ಲಿ ನೀರು ಕುಡಿಯುತ್ತಲೂ ಕಾಲ್ನಡೆಯಾಗಿ ಪ್ರಯಾಣಿ ಸುತ್ತಿದ್ದರು. ತನ್ನ ರಾಜ್ಯದಿಂದ ಪ್ರಯಾಣಿಸುತ್ತಾ ನೂರಾರು ಮೈಲು ದೂರವಿರುವ ನಸೀಬಿನ್‌ಗೆ ಬಂದರು. ಅವರೊಡನೆ ಅವರ ಕೆಲವು ಶಿಷ್ಯರಿದ್ದರು. ಅವರನ್ನು ನಗರದೊಳಗೆ ಪ್ರಚಾರಕ್ಕಾಗಿ ಕಳುಹಿಸಿದರು. ಆ ನಗರ ದಲ್ಲಿ ಯೇಸುಕ್ರಿಸ್ತರು ಮತ್ತು ಅವರ ತಾಯಿಯ ಕುರಿತು ಸುಳ್ಳು ಸಂಧಿಗಳು ಪ್ರಚಾರಗೊಂಡಿದ್ದುವು. ಆ ನಗರದ ಗವರ್ನರನು ಶಿಷ್ಯರನ್ನು ಬಂಧಿಸಿ, ಯೇಸುಕ್ರಿಸ್ತರನ್ನು ತನ್ನ ಆಸ್ಥಾನಕ್ಕೆ ಕರೆಯಿಸಿದನು. ಯೇಸುಕ್ರಿಸ್ತರು ಕೆಲವರನ್ನು ರೋಗಮುಕ್ತರನ್ನಾಗಿ ಮಾಡಿ ಇನ್ನಿತರ ಪವಾಡಗಳನ್ನೂ ತೋರಿಸಿದರು. ಆ ಕಾರಣದಿಂದ ನಸೀಬಿನ್ ಪ್ರದೇಶದ ರಾಜನೂ ಆತನ ಸೈನಿಕರೂ ಪ್ರಜೆ ಗಳೂ ಯೇಸುಕ್ರಿಸ್ತರಲ್ಲಿ ನಂಬಿದರು.''*

ಅಹ್ಮದಿಯಾ ಸಂಘದ ಸ್ಥಾಪಕರು ಈರೀತಿ ಬರೆ ದಿರುತ್ತಾರೆ: 'ರೌಸತುಸ್ಸಫಾದಲ್ಲಿ ಬರೆಯಲಾಗಿರುವ ಮೇಲಿನ ಸಂಕ್ಷಿಪ್ತ ವಿವರಣೆಯಿಂದ ಯೇಸುಕ್ರಿಸ್ತರು ತನ್ನ ಪ್ರಯಾಣದ ಕಾಲದಲ್ಲಿ ನಸೀಬಿಸ್‌ಗೆ ಬಂದಿದ್ದರೆಂದೂ ವ್ಯಕ್ತವಾಗುತ್ತದೆ. ಈ ನಗರ ಮೋಸುಲ್ ಮತ್ತು ಸಿರಿಯಾದ ಮಧ್ಯವಿದೆ. ಸಿರಿಯಾದಿಂದ ಪರ್ಶಿಯಾಕ್ಕೆ ಪ್ರಯಾಣಿಸುವಾಗ ಈ ನಗರವನ್ನು ಹಾಯ್ದು ಹೋಗ ಬೇಕಾಗಿದೆ. ನಸೀಬಿನ್ ಯೆರೂಸಲೇಮಿನಿಂದ 450 ಮೈಲು ದೂರವಿದ್ದು ಪರ್ಶಿಯಾದ ಗಡಿಯಿಂದ 150 ಮೈಲು ದೂರವಿದೆ. ಪರ್ಶಿಯಾದ ಪೂರ್ವ ಗಡಿ ಹೀರತ್ (ಅಫ್‌ಘಾನಿಸ್ಥಾನ) ನ ಸಮೀಪದಿಂದ ಹಾದು ಹೋಗುತ್ತದೆ. ಹೀರತ್ ಅಫ್‌ಘಾನಿಸ್ಥಾನದ ಪಶ್ಚಿಮ ಗಡಿಯಲ್ಲಿದೆ. ಹೀರತ್‌ನಿಂದ ಖೈಬರ್ ಪಾಸ್‌ಗೆ 500 ಮೈಲು ದೂರವಿದೆ.''

ಯೇಸುಕ್ರಿಸ್ತರು ಪಾಲೆಸ್ತೀನಿನ ಯಹೂದಿಗಳಿಂದ ತಿರಸ್ಕೃತರಾದ ನಂತರ ಅವರು ಅಲ್ಲಿಂದ ಹೊರಟು ಅವರ ಆಗಮನೋದ್ದೇಶ ಪೂರ್ತಿಗಾಗಿ ನಸೀಬಿನ್‌ಗೆ ತಲುಪಿದ

---

* ನಿಸಿಬಿಸ್ (ಅಸ್ಸೀರಿಯನ್ ವಿವರಣೆಗಳಲ್ಲಿ ನಸಿಬಿನಾ ಎಂದು ಕರೆಯಲ್ಪಡುತ್ತದೆ) ಈಗಿನ ಕಾಲದಲ್ಲಿ ನೆಸಿಬ್ ಅಥವಾ ನೆಸಿಬಿನ್ ಎಂದು ಕರೆಯಲಾಗುತ್ತಿದ್ದು ಮೆಸಪೊಟೇಮಿಯಾದ ಉತ್ತರಕ್ಕಿರುವ ಒಂದು ಪುರಾತನ ನಗರವಾಗಿದೆ...... ಇಲ್ಲಿ ಯಹೂದಿಗಳು ಬಹುಪಕ್ಷವಾಗಿದ್ದಾರೆ – Encyclopaedic Brittanica Edn. II.

* ಈ ಸಂಭವವನ್ನು ಗ್ರಂಥಕರ್ತರು "ಯೇಸುಕ್ರಿಸ್ತರು ಯರೋಸಲೇಮಿನಿಂದ ಪಲಾಯನಗೈದುದು ಮತ್ತು ದಾರಿಯಲ್ಲಿ ತೋರಿಸಿದ ಪವಾಡ ಕೃತ್ಯಗಳು" ಎಂಬ ಶಿರೋನಾಮೆಯ ಕೆಳಗೆ ನಿರೂಪಿಸಿರುವುದು ಶ್ರದ್ಧಾರ್ಹವಾಗಿದೆ.

ರೆಂದು ‘‘ರೌಸತುಸ್ಸಫಾ’’ದಲ್ಲಿ ಬರೆದಿರುವ ಸಂಗತಿ ಸತ್ಯವಾಗಿದೆ. ಆಗಿನ ಒಬ್ಬ ಪ್ರಸಿದ್ಧ ಚರಿತ್ರೆಗಾರನಾದ ಜೋಸೆಫನನು ಆಗಿನ ಕಾಲದಲ್ಲಿ ನಸೀಬಿನ್‌ನಲ್ಲಿ ಕಾಣದೆ ಹೋದ ಗೋತ್ರದ ಯಹೂದಿಗಳಿದ್ದರೆಂದು ಬರೆದಿರುವನು.

“ಮೆಸೋಪೊಟೇಮಿಯಾ ಮತ್ತು ಪ್ರತ್ಯೇಕವಾಗಿ ಬಾಬಿಲೋನಿಯದಲ್ಲಿ ವಾಸವಿದ್ದ ಯಹೂದಿಗಳಿಗೆ ಒಂದು ಭಯಂಕರ ಆಪತ್ತು ಬಂದೆರಗಿತು....ಅದೇ ನದಿಯ ದಡದಲ್ಲಿ ‘ನಿಸಿಬಿಸ್’ ಎಂಬ ನಗರವು ಇದ್ದಿತು.’’ (ಪುಟ 314)

‘‘ಯಹೂದಿಗಳೆಲ್ಲರೂ ಈ ಸಮಯದಲ್ಲಿ ಬಾಬಿಲೋನಿಯನರಿಗೂ ಸೆಲ್ಯೂಕ್ಯರಿಗೂ ಹೆದರಿಕೊಂಡಿದ್ದರು. ಏಕೆಂದರೆ ಆ ಪ್ರದೇಶದಲ್ಲಿದ್ದ ಎಲ್ಲಾ ಸಿರಿಯನರು ಸೆಲ್ಯೂಕ್ಯರೊಡನೆ ಸೇರಿ ಯಹೂದಿಗಳ ವಿರುದ್ಧ ಯುದ್ಧ ಮಾಡಲು ಸನ್ನಾಹ ಮಾಡಿದ್ದರು. ಆದುದರಿಂದ ಯಹೂದಿಗಳಲ್ಲಿ ಹೆಚ್ಚಿನವರು ಒಟ್ಟಿಗೆ ಸೇರಿ ನಾರ್ದಾ ಮತ್ತು ನಿಸಿಬಿಸ್ ನಗರಗಳಿಗೆ ಹೋಗಿ ಆ ನಗರಗಳ ಭದ್ರವಾದ ಕೋಟೆಗಳ ಮತ್ತು ಆ ನಗರಗಳ ಬಹು ಸಂಖ್ಯೆಯ ಧೀರರಾದ ಜನರ ಆಶ್ರಯ ಪಡೆದರು.’’

[The Works of Flavius Josephus- Whinston's Translation with notes by Sir C. W. Wilson Vol 3, page 324 London I889.]

ನಸಿಬಿನ್‌ನಿಂದ ಯೇಸುಕ್ರಿಸ್ತರು ಪರ್ಶಿಯಾದ ಮೂಲಕ ಅಫ್‌ಘಾನಿಸ್ಥಾನ ತಲುಪಿದರು. ಅಲ್ಲಿಂದ ಪಂಜಾಬಿನ ಮೂಲಕ ಕಾಶ್ಮೀರ್ ತಲುಪಿದರು. ಕೆಲವು ಐತಿಹ್ಯಗಳಿಂದ ಅವರು ಟಿಬೇಟನ್ನೂ ಭಾರತದ ಇತರ ಸ್ಥಳಗಳನ್ನೂ ಸಂದರ್ಶಿಸಿದುದಾಗಿ ತಿಳಿಯುತ್ತದೆ. ಕೊನೆಗೆ ಅವರು ಕಾಶ್ಮೀರದಲ್ಲಿ ಬಂದು ನೆಲೆಯೂರಿ ಅಲ್ಲಿಯೇ ಮೃತರಾದುದು ಖಂಡಿತವಾಗಿದೆ.

ಯೇಸುಕ್ರಿಸ್ತರನ್ನು ‘‘ಮಸೀಹ್’’ ಎಂದು ಕರೆಯಲು ದೊಡ್ಡ ಕಾರಣ ಅವರು ಬಹಳ ಸಂಚರಿಸುತ್ತಿದ್ದುದ್ದರಿಂದೆಂದು ಅಹ್ಮದಿಯಾ ಸಂಘದ ಸ್ಥಾಪಕರು ಬರೆದಿರುವರು. ಒಬ್ಬ ಮುಸ್ಲಿಮ್ ಸಂತರಾಗಿದ್ದ ಅಬೂಬಕರ್ ಮುಹಮ್ಮದ್ ಅತ್ತಾರ್ ತೂಷಿ ತನ್ನ ಪುಸ್ತಕವಾದ ‘‘ಸಿರಾಜುಲ್ ಮುಲೂಕ್’’ ಎಂಬ ಗ್ರಂಥದಲ್ಲಿ (ಪುಟ 6, ಈಜಿಪ್ಟ್‌ನಲ್ಲಿ ಹಿಜರಿ 1306ರಲ್ಲಿ ಪ್ರಕಟವಾದುದು) ಯೇಸುಕ್ರಿಸ್ತರನ್ನು “ಪ್ರವಾಸಿಗಳ ನಾಯಕ’’ ಎಂದು ಕರೆದಿರುವರು.

ಇದೇರೀತಿ ಲಿಸಾನುಲ್ ಅರಬ್ ಎಂಬ ಅಧಿಕೃತ ಅರಬಿ ನಿಘಂಟಿನಲ್ಲಿ ‘‘ಯೇಸುಕ್ರಿಸ್ತರು ಒಂದೇ ಸ್ಥಳದಲ್ಲಿ ನಿಲ್ಲದೆ ಅಲೆದಾಡುತ್ತಿದ್ದುದರಿಂದ ‘ಮಸೀಹ’ರೆಂದು ಕರೆಯಲ್ಪಟ್ಟರೆಂದು ಬರೆದಿದೆ. “ಕಂಜುಲ್ ಉಮ್ಮಾಲ್” ಎಂಬ ಪೈಗಂಬರ್ ವಚನ ಮತ್ತು ಪೈಗಂಬರ್ ಶಿಷ್ಯರ ವಚನ ಸಂಗ್ರಹದಲ್ಲಿ ದೇವರು ಯೇಸುಕ್ರಿಸ್ತರೊಡನೆ ಈ ರೀತಿ ಹೇಳಿದುದಾಗಿ ಬರೆದಿದೆ: “ಯೇಸುವೆ, ನೀನು ಗುರುತಿಸಲ್ಪಡದಿರಲಿಕ್ಕಾಗಿ ಮತ್ತು ಹಿಂಸಿಸಲ್ಪಡದಿರಲಿಕ್ಕಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸ್ಥಾನ ಬದಲಾಯಿಸುತ್ತಾ ಇರಬೇಕು.’’ (ಅಬೂಹುರೈರಾ ನಿವೇದಿಸಿದ ವಚನ).

ಇದೇ ಪುಸ್ತಕದಲ್ಲಿ ಜಾಬಿರ್ ಎಂಬ ಪೈಗಂಬರ್ ಶಿಷ್ಯನು ಯೇಸುಕ್ರಿಸ್ತರ ಕುರಿತು ಅವರು ಯಾವಾಗಲೂ ಸಂಚರಿಸುತ್ತಿದ್ದರೆಂದೂ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಪ್ರಯಾಣಿಸುತ್ತಾ ರಾತ್ರಿಯಾಗುವಾಗ ತಲುಪಿದಲ್ಲಿ ನಿದ್ರಿಸುತ್ತಾ ಕಾಡು ವೃಕ್ಷಗಳ ಫಲಗಳನ್ನೂ, ಗಿಡಮೂಲಿಕೆಗಳನ್ನೂ ತಿನ್ನುತ್ತಿದ್ದರೆಂದೂ ಶುದ್ಧ ಜಲಪಾನ ಮಾಡುತ್ತಿದ್ದರೆಂದೂ ನಿವೇದಿಸಿರುವರು.

ಇದೇ ಪುಸ್ತಕದಲ್ಲಿ ಅಬ್ದುಲ್ಲಾ ಇಬ್ನುಉಮರ್ ಬರೆದ ಒಂದು ನಿವೇದನೆ ಈರೀತಿ ಇದೆ:-

‘‘ದೇವರ ದೃಷ್ಟಿಯಲ್ಲಿ ಅತ್ಯಂತ ಪ್ರಿಯರಾದವರು ಗರೀಬರೆಂದು ಪವಿತ್ರ ಪೈಗಂಬರರು ಹೇಳಿದರು. ‘ಗರೀಬ’ ಎಂಬುದರ ಅರ್ಥವೇನೆಂದು ಕೇಳಿದಾಗ: ಯೇಸುಕ್ರಿಸ್ತರಂತೆ ತಮ್ಮ ಮತ ವಿಶ್ವಾಸವನ್ನು ರಕ್ಷಿಸಲು ತಮ್ಮ ರಾಜ್ಯದಿಂದ ಓಡಿ ಹೋಗುವವರು ಗರೀಬರು’’ ಎಂದು ಹೇಳಿದರು. (Vol 2 page 34; 71 and Vol 2 page 51).

ಈ ವಚನಗಳು ಪುರಾತನವಾಗಿದ್ದು ಮುಸ್ಲಿಮರ ವಿಶ್ವಸನೀಯವಾದ ಹದೀಸು ಗ್ರಂಥಗಳಲ್ಲಿ ಇವುಗಳನ್ನು ಕಾಣಬಹುದು. ಯೇಸುಕ್ರಿಸ್ತರು ತಮ್ಮ ಜೀವನ ಪರ್ಯಂತ ಪ್ಯಾಲೆಸ್ತೀನದಲ್ಲಿ ವಾಸಿಸಿದ್ದರೆ ಅವರನ್ನು “ಪ್ರವಾಸಿಗಳ ನಾಯಕ’’ ಎಂಬ ಹೆಸರಿನಿಂದ ಕರೆಯುವುದು ನ್ಯಾಯವಾಗಲಾರದು. ಸ್ವತಂತ್ರವಾದ ಮೂಲಗಳಿಂದ ನಮಗೆ ತಲುಪಿದ ಈ ಮೇಲಿನ ನಿವೇದನೆಗಳನ್ನು ಪರಿಶೀಲಿಸುವಾಗ ಯೇಸುಕ್ರಿಸ್ತರು ಪ್ಯಾಲೆಸ್ತೀನಿನಿಂದ ಪಲಾಯನಗೈದು ದೇಶ ವಿದೇಶಗಳಲ್ಲಿ ಸಂಚರಿಸಿ ಕೊನೆಗೆ ಭಾರತಕ್ಕೆ ಬಂದರೆಂದು ನಂಬದೆ ನಿವೃತ್ತಿ ಇಲ್ಲ. ಈರೀತಿ ಅವರು “ಪ್ರವಾಸಿಗಳ ನಾಯಕ” ಎಂಬ ಬಿರುದು ಗಳಿಸಲು ಅರ್ಹರಾದರು. (ಮುಂದುವರಿಯುವುದು)

ಪಶ್ಚಿಮ ದಿಕ್ಕಿನಿಂದ ಸೂರ್ಯೋದಯ – 2

# ಲಂಡನ್ ಮಸೀದಿ - ಅಹ್ಮದಿಯಾ ಮಹಿಳಾ ಸಂಘದ ಒಂದು ಸಂಭಾವನೆ

ಪಾಶ್ಚಾತ್ಯ ರಾಜ್ಯಗಳಲ್ಲಿ ಅಹ್ಮದಿಯಾ ಪ್ರಚರಣ ಕಾರ್ಯವು 1914ನೇ ಮೇ ತಿಂಗಳಿಂದ ಪ್ರಾರಂಭವಾಯಿತು. ಅಂದು ಅಹ್ಮದಿಯಾ ಸಂಘಟನೆಯ ಎರಡನೆಯ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಅವರು ಚೌಧರಿ ಎಫ್.ಎಂ. ಸಿಯ್ಯಾಲ್ ಸಾಹೇಬರನ್ನು ಮೊತ್ತ ಮೊದಲಿನ ಪಾಶ್ಚಾತ್ಯ ಮಿಶನರಿಯಾಗಿ ನಿಯೋಗಿಸುತ್ತಾ ಲಂಡನ್ ನಗರದಲ್ಲಿ ಒಂದು ಸುವ್ಯವಸ್ಥಿತ ಧರ್ಮ ಪ್ರಸಾರಣ ಕಾರ್ಯಕ್ರಮವನ್ನು ಆರಂಭಿಸಿದರು. ನಂತರ ವಾಗ್ದತ್ತ ಮಸೀಹಾರ ಅನೇಕ ಪ್ರಖ್ಯಾತ ಶಿಷ್ಯರೂ ಆ ಸ್ಥಾನಕ್ಕೆ ನಿಯುಕ್ತರಾಗಿದ್ದರು.

1924ರಲ್ಲಿ ಬ್ರಿಟಿಷ್ ಆಧಿಪತ್ಯವು ಏರ್ಪಡಿಸಿದ ಜಾಗತಿಕ ಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಆಮಂತ್ರಿಸಲ್ಪಟ್ಟ ಪ್ರಕಾರ ಇಸ್ಲಾಂ ಧರ್ಮದ ಪ್ರತಿನಿಧಿಯಾಗಿ ಭಾಗವಹಿಸಿ ಭಾಷಣ ಮಾಡಿದ ಹಝ್ರತ್ ಸಾಹೇಬರು ಲಂಡನಿನಲ್ಲಿ ಒಂದು ಮಸೀದಿಗೆ ಶಿಲಾನ್ಯಾಸ ಮಾಡಿದರು. ಫಝ್ಲ್ ಮೋಸ್ಕ್ ಎಂಬ ಹೆಸರಿನಿಂದ ಪ್ರಖ್ಯಾತವಾದ ಈ ಮಸೀದಿಯು ಈಗ ಲಂಡನ್ ಮಸ್ಜಿದ್ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದೆ. ಅಹ್ಮದಿಯಾ ಸಂಘಟನೆಯು ವಿದೇಶದಲ್ಲಿ ಮೊತ್ತ ಮೊದಲಾಗಿ ನಿರ್ಮಿಸಿದ ಈ ದೈವ ಭವನದ ನಿರ್ಮಾಣ ಖರ್ಚನ್ನು ಸಂಪೂರ್ಣವಾಗಿ ವಹಿಸಿದ್ದು ಅಹ್ಮದಿಯಾ ಮಹಿಳೆಯರಾಗಿದ್ದರು.



ಲಂಡನಿನ ಫಝ್ಲ್ ಮಸೀದಿ

ಲಂಡನ್ ನಗರದಲ್ಲಿ ನಿರ್ಮಿತವಾದ ಈ ಮುಸ್ಲಿಂ ಮಸೀದಿಯು ಕ್ರೈಸ್ತ ಸಭೆಗಳಿಗೆ ಒಂದು ಆಹ್ವಾನವನ್ನು ಒಡ್ಡಿತು. ಇಂಗ್ಲೆಂಡಿನಲ್ಲಿ ಮತಪ್ರಚಾರಕ್ಕಾಗಿ ನಿಯುಕ್ತರಾದ ಪ್ರಖ್ಯಾತ ಮಿಶನರಿಗಳು ಕಾಲಾವಸ್ಥೆಯ ಪ್ರತಿಕೂಲತೆಯನ್ನು ಲೆಕ್ಕಿಸದೆ ಇಸ್ಲಾಂ ಧರ್ಮ ಪ್ರಚಾರ ನಡೆಸಿದುದರ ಫಲವಾಗಿ ಲಕ್ಷಾಂತರ ಆಂಗ್ಲೇಯರು ಇಸ್ಲಾಂ ಧರ್ಮವನ್ನು ಆಶ್ಲೇಷಿಸಿದರು. ಲಂಡನ್ ಜಮಾತಿನ ಹೊರತು ಇಂಗ್ಲೇಂಡಿನ ವಿವಿಧ ಭಾಗಗಳಲ್ಲಿ 16 ಅಹ್ಮದಿಯಾ ಜಮಾತ್ ಶಾಖೆಗಳು ಈಗ ಸ್ಥಾಪಿತವಾಗಿವೆ. ಬ್ರಿಟನಿನಲ್ಲಿ ಈಗ ಒಟ್ಟು 12 ಸಾವಿರ ಅಹ್ಮದೀಯರಿರುವರು.

ಇಸ್ಲಾಂ ಧರ್ಮದ ಕುರಿತು ಪಾಶ್ಚಾತ್ಯರೆಡೆಯಲ್ಲಿ ಹಬ್ಬಿರುವ ತಪ್ಪಭಿಪ್ರಾಯಗಳನ್ನೂ ತುಚ್ಛ ಭಾವನೆಗಳನ್ನೂ ನೀಗಿಸುವುದರಲ್ಲಿ ಅಹ್ಮದಿಯಾ ಸಂಘಟನೆಯು ಮಹತ್ತಾದ ಸಾಧನೆಯನ್ನು ಮಾಡಿದೆ. ಬ್ರಿಟನಿನ ವಾರ್ತಾ ಪತ್ರಿಕೆಗಳಲ್ಲೂ ಬ್ರಿಟಿಷ್ ರೇಡಿಯೋ ಸಂಸ್ಥೆ (B. B. C) ಯ ಮೂಲಕವೂ ಟಿಲಿವಿಷನ್‌ನಲ್ಲೂ

[ ಮುಂಬದಿ ಕವಚದ ಒಳಗಿನ ಪುಟ ನೋಡಿರಿ ]

Regd. with the Registrar of Newspapers for India, Regd. No. R. N. 27354/75
YUGRASHMI Kannada Quarterly,
July – September 1977 / Wafa – Tabook 1356


# BOOKS ON ISLAM AND CONTEMPORARY RELIGIONS

1. **Holy Quran with Arabic Text and English Translation** 12–00
2. **Ahmadiyyat or The True Islam** 8–00
   By Hazrat Mirza Bashiruddin Mahmud Ahmad
3. **New World Order** 2–25
   By Hazrat Mirza Bashiruddin Mahmud Ahmad
4. **The Teachings of Islam** 6–00
   By Hazrat Mirza Ghulam Ahmad
5. **Characteristics of the Quranic Teachings** 1–00
   By Hazrat Mirza Bashiruddin Mahmud Ahmad.
6. **Where did Jesus Die?** 2–25
   By J. D. Shams
7. **The Tomb of Jesus** 0–75
   By Sufi M. R. Bengali
8. **Jesus in India** 2–25
   By Hazrat Mirza Ghulam Ahmad
9. **The Christian Doctrine of Atonement** 1–50
   By Dr. Mufti Muhammad Sadiq.
10. **An Interpretation of Islam** 1 50
    By Prof. Dr. Laura Veccia Vaglieri

Write to

**NAZIR DAWAT-O-TABLIGH**
**P. O. QADIAN - 143516. (Punjab)**


Printed by: A.B. Sunder Ram Shetty, at Aruna Printing Press, Dongerkery Mangalore and Edited and Published by Muhammad Yusuf on behalf of Jamath Ahamadiyya Mangalore, at 23/1008 Ansari Road, Bunder, Mangalore-575001.